KA / BG-GPO / 2515 / WPP-47 / 2006-2008

ಅನುಬಂಧ - 1

1

ಸುವರ್ಣ ಕರ್ನಾಟಕ - 2006

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು



| ಸಂಪುಟ ೧೪೧ | ಬೆಂಗಳೂರು, ಗುರುವಾರ, ಫೆಬ್ರವರಿ ೧೬, ೨೦೦೬ (ಮಾಘ ೨೭, ಶಕ ವರ್ಷ ೧೯೨೭) | ಸಂಚಿಕೆ ೭ |
|---|---|---|



## ಭಾಗ - ೧

## ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾಗಿ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

### ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ವಿಷಯ: ಮೀನುಗಾರಿಕೆ ಇಲಾಖೆಯ/ಅರಣ್ಯ ಇಲಾಖೆಯ/ಗ್ರಾಮ ಪಂಚಾಯತ್‌ಗಳ/ಜಲ ಸಂವರ್ಧನೆ ಯೋಜನಾ ಸಂಘದ/ಕೆರೆ ಅಭಿವೃದ್ಧಿ ಪ್ರಾಧಿಕಾರದ/ಇತರೆ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿನ ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳಾದ ಕೆರೆಗಳ, ಕೊಳಗಳ, ನದಿಗಳ, ತೊರೆಗಳ, ಜಲಾಶಯಗಳ, ಇತ್ಯಾದಿಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಗೆ ಸಂಬಂಧಪಟ್ಟಂತೆ ರೂಪಿಸಿರುವ ನಿಯಮಗಳನ್ನೊಳಗೊಂಡ ಸಮಗ್ರ ಪರಿಷ್ಕೃತ ಆದೇಶವನ್ನು ಹೊರಡಿಸುವ ಕುರಿತಂತೆ.

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ:ಪಿಡಬ್ಲ್ಯೂಡಿ/30/ಎಂಜಿಎಲ್/59 ದಿನಾಂಕ:31-03-1960
2) ಸರ್ಕಾರಿ ಆದೇಶ ಸಂಖ್ಯೆ:ಎಎಚೆಚ್‌ಎಫ್/113/ಎಸ್‌ಎಫ್‌ಎಂ/80 ದಿನಾಂಕ:19-12-1980
3) ಸರ್ಕಾರಿ ಆದೇಶ ಸಂಖ್ಯೆ:ಎಹೆಚ್‌ಎಫ್/146/ಎಸ್‌ಎಫ್‌ಎಂ/87 ದಿನಾಂಕ:29-08-1987
4) ಸರ್ಕಾರಿ ಆದೇಶ ಸಂಖ್ಯೆ:ಎಹೆಚ್‌ಎಫ್/70/ಎಸ್‌ಎಫ್‌ಎಂ/88 ದಿನಾಂಕ:19-05-1988 ಮತ್ತು ತಿದ್ದೋಲೆ ದಿನಾಂಕ:17-11-1988.
5) ಸರ್ಕಾರಿ ಆದೇಶ ಸಂಖ್ಯೆ:ಎಹೆಚ್‌ಎಫ್/386/ಎಸ್‌ಎಫ್‌ಎಂ/88 ದಿನಾಂಕ:12-07-1989
6) ಸರ್ಕಾರಿ ಆದೇಶ ಸಂಖ್ಯೆ:ಎಹೆಚ್‌ಎಫ್/141/ಎಸ್‌ಎಫ್‌ಎಂ/88 ದಿನಾಂಕ:29-07-1992
7) ಸರ್ಕಾರಿ ಆದೇಶ ಸಂಖ್ಯೆ:ಎಹೆಚ್‌ಎಫ್/296/ಎಸ್‌ಎಫ್‌ಎಂ/89 ದಿನಾಂಕ:19-12-1989
8) ಸರ್ಕಾರಿ ಆದೇಶ ಸಂಖ್ಯೆ:ಎಹೆಚ್‌ಎಫ್/176/ಎಸ್‌ಎಫ್‌ಎಂ/91 ದಿನಾಂಕ:01-09-1992
9) ಸರ್ಕಾರಿ ಆದೇಶ ಸಂಖ್ಯೆ:ಎಹೆಚ್‌ಎಫ್/104/ಎಸ್‌ಎಫ್‌ಎಂ/92 ದಿನಾಂಕ:25-07-1992
10) ಸರ್ಕಾರಿ ಆದೇಶ ಸಂಖ್ಯೆ:ಎಹೆಚ್‌ಎಫ್/135/ಎಸ್‌ಎಫ್‌ಎಂ/93 ದಿನಾಂಕ:19-03-1993
11) ಸರ್ಕಾರಿ ಆದೇಶ ಸಂಖ್ಯೆ:ಎಹೆಚ್‌ಎಫ್/52/ಎಸ್‌ಎಫ್‌ಎಂ/95 ದಿನಾಂಕ:09-06-1997
12) ತಿದ್ದುಪಡಿ ಆದೇಶ ಸಂಖ್ಯೆ:ಪಸಂಮೀ/220/ಮೀಇಇ/97 ದಿನಾಂಕ:13-10-1998.
13) ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅಪೀಲ್ ಸಂಖ್ಯೆ:8197/99 C/W W.A.No. 8104/99 & 711-712 / 2000 C / W W.P.No.21686 / 2000 C / W. 21708 / 2000 & 21554 / 2000ರಲ್ಲಿ ದಿನಾಂಕ:29-11-2001ರಂದು ನೀಡಿರುವ ತೀರ್ಪು, ರಿಟ್ ಪಿಟಿಷನ್ ಸಂಖ್ಯೆ: 47233/2001ರಲ್ಲಿ ದಿನಾಂಕ: 17-01-2002ರಂದು ನೀಡಿರುವ ತೀರ್ಪು ಮತ್ತು ರಿಟ್ ಪಿಟಿಷನ್ ಸಂಖ್ಯೆ:39262 & 39409-10/2002ರಲ್ಲಿ ದಿನಾಂಕ:05-03-2003 ರಂದು ನೀಡಿರುವ ತೀರ್ಪು.
14) ಭಾರತ ಸರ್ಕಾರದ ಕೃಷಿ ಮಂತ್ರಾಲಯದ ಪಶುಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಇಲಾಖೆಯ ಜಂಟಿ ಕಾರ್ಯದರ್ಶಿಗಳ ಅ.ಸ.ಪತ್ರ ಸಂಖ್ಯೆ: 31013 / 4 / 2000 - FY (3) ದಿನಾಂಕ:10.09.2003
15) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆದೇಶ ಸಂಖ್ಯೆ:ಗ್ರಾಅಮ/165/ಜಿಪಾಸ/2002 ದಿನಾಂಕ:01-03-2004.
16) ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ/166/ಮೀಇಇ/2004 ದಿನಾಂಕ:15-01-2005.
17) ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ/166/ಮೀಇಇ/2004 ದಿನಾಂಕ:04-05-2005.
18) ಕೆರೆ ಅಭಿವೃದ್ಧಿ ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಪತ್ರ ಸಂಖ್ಯೆ:ಮುಕಾಅ /ಕೆಅಪ್ರಾ/ಕೆ.ವಿ / 05-06 / 79 ದಿನಾಂಕ:19-04-2005.

19) ಮೀನುಗಾರಿಕೆ ನಿರ್ದೇಶಕರ (1) ಪತ್ರ ಸಂಖ್ಯೆ:ಹಗುಪ (1) / 135 / 2004-2005 ದಿನಾಂಕ: 30.09.2004 ಮತ್ತು (2) ಪತ್ರಗಳ ಸಂಖ್ಯೆ: ಹಗುಪ / 2 / 54 / 2004-05 ದಿನಾಂಕ:07.09.2004, 09.03.2005, 02.08.2005 ಮತ್ತು 27.09.2005.

20) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಅವರ ಅಧ್ಯಕ್ಷತೆಯಲ್ಲಿ ದಿನಾಂಕ:12-12-2005ರಂದು ನಡೆದ ಸಭೆಯ ನಡವಳಿಗಳು.

**ಪ್ರಸ್ತಾವನೆ:**

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯದಲ್ಲಿನ ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳಲ್ಲಿನ ಮೀನು ಪಾಶುವಾರು ಹಕ್ಕನ್ನು ನೀರಾವರಿ ಉದ್ದೇಶಕ್ಕೆ ಧಕ್ಕೆಯುಂಟಾಗದಂತೆ ಮೀನುಗಾರಿಕೆ ಇಲಾಖೆಯ ಮುಖಾಂತರ ವಿಲೇವಾರಿ ಮಾಡುವ ಅಧಿಕಾರವನ್ನು ಲೋಕೋಪಯೋಗಿ ಇಲಾಖೆಯಿಂದ ಮೀನುಗಾರಿಕೆ ಇಲಾಖೆಗೆ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ.

ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೀನುಗಾರಿಕೆ ಇಲಾಖೆಗೆ ಸೇರಿದ ದೊಡ್ಡಕೆರೆಗಳ ಮತ್ತು ನದಿಗಳ ಮೀನು ಪಾಶುವಾರು ಹಕ್ಕನ್ನು ಖಾಸಗಿ ವ್ಯಕ್ತಿಗಳಿಗೆ 5 ವರ್ಷಗಳ ಅವಧಿಗೆ ಮೀರದಂತೆ ಕೆಲವು ನಿಬಂಧನೆಗಳಿಗೊಳಪಟ್ಟಂತೆ ಟೆಂಡರ್-ಕಂ-ಹರಾಜಿನ ಮುಖಾಂತರ ವಿಲೇವಾರಿ ಮಾಡಲು ಆದೇಶಿಸಲಾಗಿದೆ.

ಮೇಲೆ ಕ್ರಮಾಂಕ (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆದ್ಯತೆಯ ಮೇರೆಗೆ 5 ವರ್ಷಗಳ ಅವಧಿಗೆ ಕೆಳಕಂಡ ಸಂಘ / ಸಂಸ್ಥೆಗಳಿಗೆ ದೊಡ್ಡಕೆರೆಗಳ ಹಾಗೂ ನದಿಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ನೀಡಲು ಆದೇಶಿಸಲಾಗಿದೆ.

ಅ) ಮೀನುಗಾರರ ಸಹಕಾರ ಸಂಘಗಳು.

ಆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಸಹಕಾರ ಸಂಘಗಳು

ಇ) ಬೆಸ್ತರ ಸಮುದಾಯಕ್ಕೆ ಸೇರಿದ ನಿರುದ್ಯೋಗಿ ಪದವೀಧರರು ಹಾಗೂ ಇತರೆ ನಿರುದ್ಯೋಗಿ ಮೀನುಗಾರಿಕೆ ಪದವೀಧರರು (ವರ್ಷದಲ್ಲಿ ಗರಿಷ್ಟ 10 ಜನಕ್ಕೆ ಮಿತಿಗೊಳಿಸಿ)

ಈ) ನಿರುದ್ಯೋಗಿ ಪದವೀಧರರ ಸಹಕಾರ ಸಂಘಗಳು

ಉ) ಸ್ಥಳೀಯ ಸಂಸ್ಥೆಗಳಾದ ಮಂಡಲ್ ಪಂಚಾಯತ್, ತಾಲ್ಲೂಕು ಅಭಿವೃದ್ಧಿ ಮಂಡಳಿ ಮತ್ತು ಇತರೆ ಸಹಕಾರ ಸಂಘಗಳು ಕೆಲವು ಕರಾರು ಮತ್ತು ಷರತ್ತುಗಳಿಗೊಳಪಟ್ಟು 25 ಎಕರೆ ಹಾಗೂ ಮೇಲ್ಪಟ್ಟ ಜಲ ಪ್ರದೇಶದ ದೊಡ್ಡಕೆರೆಗಳ ಮೀನು ಪಾಶುವಾರು ಹಕ್ಕನ್ನು 5 ವರ್ಷಗಳ ಅವಧಿಗೆ ಕರ್ನಾಟಕ ನೀರಾವರಿ ಕಾಯಿದೆ 1966 ಸೆಕ್ಷನ್ 52ರ ನಿಯಮಕ್ಕೊಳಪಟ್ಟು.

ಮೇಲೆ ಕ್ರಮಾಂಕ (4)ರಲ್ಲಿ ಓದಲಾದ ಸರ್ಕಾರಿ ಆದೇಶ ಮತ್ತು ತಿದ್ದೋಲೆಯಲ್ಲಿ ದೊಡ್ಡ ಕೆರೆಗಳ ಶೇ. ೫೦ರಷ್ಟು ಜಲ ಪ್ರದೇಶಕ್ಕೆ ಪ್ರತಿ ಹೆಕ್ಟೇರ್‌ಗೆ ರೂ.30-00ರಂತೆ ಅಥವಾ ಹಿಂದಿನ 3 ವರ್ಷಗಳ ಸರಾಸರಿ ಆದಾಯ ಇವೆರಡರಲ್ಲಿ ಯಾವುದು ಅತೀ ಹೆಚ್ಚೋ ಅದನ್ನು ಕೆರೆಯ ಮೀನು ಪಾಶುವಾರು ಹಕ್ಕಿನ ವಾರ್ಷಿಕ ಗುತ್ತಿಗೆ ಹಣವಾಗಿ ನಿಗದಿಪಡಿಸಿ ಆದೇಶಿಸಲಾಗಿದೆ.

ಮೇಲೆ ಕ್ರಮಾಂಕ (5)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಮೀನುಗಾರಿಕೆಯಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳಿಗೆ ದೊಡ್ಡಕೆರೆಗಳ ಮೀನು ಪಾಶುವಾರು ಹಕ್ಕನ್ನು 7 ವರ್ಷಗಳ ಅವಧಿಗೆ ನೀಡಲು ಆದೇಶಿಸಲಾಗಿದೆ ಮತ್ತು ಕ್ರಮಾಂಕ (6)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಪ್ರತಿ ಅಭ್ಯರ್ಥಿಗೆ ಕೇವಲ ರೂ.100-00ಗಳ ಗುತ್ತಿಗೆ ಹಣ ನಿಗದಿಪಡಿಸಿ ಆದೇಶಿಸಲಾಗಿದೆ.

ಮೇಲೆ ಕ್ರಮಾಂಕ (7)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ 25 ಎಕರೆ ಹಾಗೂ ಮೇಲ್ಪಟ್ಟ ಜಲ ಪ್ರದೇಶವುಳ್ಳ ದೊಡ್ಡ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆಯಲ್ಲಿ ತರಬೇತಿ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರುದ್ಯೋಗಿ ಪದವೀಧರರಿಗೆ 7 ವರ್ಷಗಳ ಅವಧಿಗೆ ಕರ್ನಾಟಕ ನೀರಾವರಿ ಕಾಯಿದೆ 1966ರ ಸೆಕ್ಷನ್ 52ರ ನಿಯಮಕ್ಕೊಳಪಟ್ಟು ಸದರಿ ಆದೇಶದ ಅನುಬಂಧ-1ರಲ್ಲಿ ನಮೂದಿಸಿದ ಕರಾರು ಮತ್ತು ಷರತ್ತುಗಳ ಮೇರೆಗೆ ಗುತ್ತಿಗೆಗೆ ನೀಡಲು ಆದೇಶಿಸಲಾಗಿದೆ.

ಮೇಲೆ ಕ್ರಮಾಂಕ (8)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಷ್ಟ್ರೀಯ ಉದ್ಯಾನವನಗಳ ಮತ್ತು ಅಭಯಾರಣ್ಯಗಳ ವ್ಯಾಪ್ತಿಗೆ ಒಳಪಡುವ ಪ್ರದೇಶಗಳನ್ನು ಹೊರತುಪಡಿಸಿ ನದಿಗಳು ಮತ್ತು ತೊರೆಗಳ ಮೀನು ಪಾಶುವಾರು ಹಕ್ಕನ್ನು ಮೊದಲಿಗೆ 3 ವರ್ಷಗಳ ಅವಧಿಗೆ ಕರ್ನಾಟಕ ನೀರಾವರಿ ಕಾಯಿದೆ 1966ರ ಸೆಕ್ಷನ್ 52ರ ನಿಯಮಕ್ಕೊಳಪಟ್ಟು ಮೀನುಗಾರರ ಸಹಕಾರ ಸಂಘಗಳಿಗೆ ಸದರಿ ಆದೇಶದ ಅನುಬಂಧದಲ್ಲಿನ ಷರತ್ತುಗಳಿಗೊಳಪಟ್ಟು ವಾರ್ಷಿಕ ಗುತ್ತಿಗೆ ಮೊತ್ತ ನಿಗದಿಪಡಿಸಿ ಗುತ್ತಿಗೆಗೆ ನೀಡಲು ಆದೇಶಿಸಲಾಗಿದೆ.

ಮೇಲೆ ಕ್ರಮಾಂಕ (9)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೀನುಗಾರಿಕೆ ಇಲಾಖೆಯ ದೊಡ್ಡಕೆರೆಗಳ ಮೀನು ಪಾಶುವಾರು ಹಕ್ಕನ್ನು 5 ವರ್ಷಗಳ ಅವಧಿಗೆ ಬದಲಾಗಿ 7 ವರ್ಷಗಳ ಅವಧಿಗೆ ಬಹಿರಂಗ ಹರಾಜಿನ ಮುಖಾಂತರ ಕೆಲವು ಷರತ್ತುಗಳಿಗೊಳಪಟ್ಟು ವಿಲೇವಾರಿ ಮಾಡಲು ಆದೇಶಿಸಲಾಗಿದೆ.

ಮೇಲೆ ಕ್ರಮಾಂಕ (10)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯದ ಜಲಸಂಪನ್ಮೂಲಗಳಲ್ಲಿನ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ನೀಡುವ ಬಗ್ಗೆ ಮೀನುಗಾರಿಕೆ ನಿರ್ದೇಶಕರಿಗೆ ಕಾಲಕಾಲಕ್ಕೆ ನೀಡಲಾಗಿದ್ದ ಎಲ್ಲಾ ಅಧಿಕಾರಗಳನ್ನು ಸರ್ಕಾರವು ಹಿಂದಕ್ಕೆ ಪಡೆದು ಆದೇಶಿಸಿರುತ್ತದೆ.

ಮೇಲೆ ಕ್ರಮಾಂಕ (11)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಮೀನುಗಾರಿಕೆ ಇಲಾಖೆಯ ಸಣ್ಣ ಕೆರೆಗಳ, ದೊಡ್ಡ ಕೆರೆಗಳ, ಕೊಳಗಳ, ನದಿಗಳ, ಜಲಾಶಯಗಳ ಮತ್ತು ತೊರೆಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಗೆ ಸಂಬಂಧಿಸಿದಂತೆ ನಿಯಮಗಳನ್ನೊಳಗೊಂಡ ಒಂದು ಮೀನುಗಾರಿಕೆ ನೀತಿಯನ್ನು ರೂಪಿಸಿ ಮಂಜೂರಾತಿ ನೀಡಲಾಗಿದೆ.

ಮೇಲೆ ಕ್ರಮಾಂಕ (12)ರಲ್ಲಿ ಓದಲಾದ ತಿದ್ದುಪಡಿ ಆದೇಶದಲ್ಲಿ ಮೀನುಗಾರಿಕೆ ಫಸಲಿ ವರ್ಷವನ್ನು ಜುಲೈ 1 ರಿಂದ ಮುಂದಿನ ವರ್ಷದ ಜೂನ್ 30ರವರೆಗೆ ನಿಗದಿಪಡಿಸಿ ತಿದ್ದುಪಡಿ ಆದೇಶವನ್ನು ಹೊರಡಿಸಲಾಗಿದೆ.

ಮೇಲೆ ಕ್ರಮಾಂಕ (13)ರಲ್ಲಿ ಓದಲಾದ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ರಿಟ್ ಮೊಕದ್ದಮೆಗಳಲ್ಲಿ ಸರ್ಕಾರದ ಮೀನುಗಾರಿಕೆ ನೀತಿಯ ಮೇರೆಗೆ ಕೈಗೊಳ್ಳಲಾಗುತ್ತಿದ್ದ ಮೀನು ಪಾಶುವಾರು ಹಕ್ಕಿನ ವಿಲೇವಾರಿ ಪ್ರಕ್ರಿಯೆಗಳನ್ನು ಕೆಲವು ಸಂಘ/ ಸಂಸ್ಥೆಗಳು ಹಾಗೂ ಸಾರ್ವಜನಿಕರು ಪ್ರಶ್ನಿಸಿದ್ದು ಸದರಿ ಮೊಕದ್ದಮೆಗಳಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ನೀಡಿರುವ ತೀರ್ಮಗಳಲ್ಲಿ ಮೇಲೆ ಕ್ರಮಾಂಕ (11)ರಲ್ಲಿ ಓದಲಾಗಿರುವ ಸರ್ಕಾರದ ಆದೇಶದಲ್ಲಿ ರೂಪಿಸಲಾಗಿರುವ ಮೀನುಗಾರಿಕೆ ನೀತಿಯ ಕೆಲವು ಕಂಡಿಕೆಗಳನ್ನು ಮಾರ್ಪಡಿಸಲು ಸೂಚನೆಗಳನ್ನು ನೀಡಲಾಗಿದೆ.

ಮೇಲೆ ಕ್ರಮಾಂಕ (14)ರಲ್ಲಿ ಓದಲಾದ ಭಾರತ ಸರ್ಕಾರದ ಪತ್ರದಲ್ಲಿ ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳಲ್ಲಿನ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಕನಿಷ್ಠ 5 ವರ್ಷಗಳಿಂದ ಗರಿಷ್ಠ 10 ವರ್ಷಗಳ ಅವಧಿಗೆ ನೀಡಬೇಕೆಂದು ಮತ್ತು ಸದರಿ ಜಲಸಂಪನ್ಮೂಲಗಳು ಯಾವುದೇ ಇಲಾಖೆಯ ವ್ಯಾಪ್ತಿಯಲ್ಲಿದ್ದರೂ ಕೂಡ ಅಂತಹ ಜಲಸಂಪನ್ಮೂಲಗಳಲ್ಲಿನ ಮೀನುಗಾರಿಕೆ ಅಭಿವೃದ್ಧಿ ವಿಷಯವು ಮತ್ತು ಮೀನುಗಾರಿಕೆ ಹಕ್ಕಿನ ವಿಲೇವಾರಿ ವಿಷಯವು ರಾಜ್ಯ ಮೀನುಗಾರಿಕೆ ಇಲಾಖೆಯಲ್ಲಿಯೇ ಇರತಕ್ಕದೆಂದು ತಿಳಿಯಪಡಿಸಲಾಗಿದೆ. (Abstract of GOI letter:- "Leasing of water bodies for a minimum period of 5-10 years

evolving a uniform long term leasing policy of water bodies for fisheries and aquaculture operations in the States. While the ownership of the water bodies may rest with any of the departments, fisheries and aquaculture rights must rest with the State Fisheries Department for the purpose of fisheries development").

ಮೇಲೆ ಕ್ರಮಾಂಕ (15)ರಲ್ಲಿ ಓದಲಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆದೇಶದಲ್ಲಿ 40.00 ಹೆಕ್ಟೇರ್ ಅಚ್ಚುಕಟ್ಟು ವಿಸ್ತೀರ್ಣಕ್ಕಿಂತ ಕಡಿಮೆಯಿರುವ ಎಲ್ಲಾ ಕೆರೆಗಳನ್ನು ಆಯಾ ಗ್ರಾಮ ಪಂಚಾಯತ್‌ಗಳಿಗೆ ವರ್ಗಾಯಿಸಿ ಆದೇಶಿಸಲಾಗಿದೆ.

ಮೇಲೆ ಕ್ರಮಾಂಕ (16)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಮೇಲೆ ಕ್ರಮಾಂಕ (11) ರಲ್ಲಿನ ಸರ್ಕಾರಿ ಆದೇಶ ಸಂಖ್ಯೆ:ಎಹೆಚ್‌ಎಫ್/52/ಎಸ್‌ಎಫ್‌ಎಂ/95 ದಿನಾಂಕ:09-06-1997ರಲ್ಲಿ ಮತ್ತು ಸದರಿ ಆದೇಶದ **ಅನುಬಂಧ-1** ಮತ್ತು **ಅನುಬಂಧ-2**ರಲ್ಲಿ ರೂಪಿಸಲಾಗಿರುವ ನಿಯಮಗಳಿಗೆ/ ಷರತ್ತು ಮತ್ತು ನಿಬಂಧನೆಗಳಿಗೆ (ಸಂಬಂಧಿತ ಕಂಡಿಕೆಗಳಿಗೆ) ಕೆಲವು ತಿದ್ದುಪಡಿಗಳನ್ನು ಮಾಡಿ ಆದೇಶಿಸಲಾಗಿದೆ.

ಮೇಲೆ ಕ್ರಮಾಂಕ (17)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಮೇಲೆ ಕ್ರಮಾಂಕ (11) ಮತ್ತು (16)ರಲ್ಲಿನ ಸರ್ಕಾರದ ಆದೇಶಗಳಿಗೆ ಕೆಲವು ಮರು ತಿದ್ದುಪಡಿಗಳನ್ನು/ಸೇರ್ಪಡೆಗಳನ್ನು ಅಳವಡಿಸಿ ಆದೇಶಿಸಲಾಗಿದೆ.

ಮೇಲೆ ಕ್ರಮಾಂಕ (18)ರಲ್ಲಿ ಓದಲಾದ ಕೆರೆ ಅಭಿವೃದ್ಧಿ ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರ ಪತ್ರದಲ್ಲಿ ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾಯಿಸಲ್ಪಟ್ಟ ಕೆರೆಗಳಲ್ಲಿ ಸದರಿ ಪ್ರಾಧಿಕಾರವು ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಮೀನುಗಾರಿಕೆ ಹಕ್ಕನ್ನು ಮೀನುಗಾರಿಕೆ ಇಲಾಖೆಯಿಂದ ವಿಲೇವಾರಿ ಮಾಡಲು ಒಪ್ಪಿಗೆ ನೀಡಲಾಗಿದೆ. ಸದರಿ ಷರತ್ತು ಮತ್ತು ನಿಬಂಧನೆಗಳನ್ನು ಈ ಆದೇಶದ **ಅನುಬಂಧ-1** ಮತ್ತು **ಅನುಬಂಧ-2**ರಲ್ಲಿ ಅಳವಡಿಸಲಾಗಿದೆ.

ಮೇಲೆ ಕ್ರಮಾಂಕ (19)ರಲ್ಲಿ ಓದಲಾದ ಮೀನುಗಾರಿಕೆ ನಿರ್ದೇಶಕರ ಪತ್ರಗಳಲ್ಲಿ ಪ್ರಸ್ತುತ ಜಾರಿಯಲ್ಲಿರುವ ಒಳನಾಡು ಮೀನುಗಾರಿಕೆ ನಿಯಮಾವಳಿಗಳಿಗೆ ಕೆಲವು ಹೆಚ್ಚುವರಿ ತಿದ್ದುಪಡಿಗಳನ್ನು / ಸೇರ್ಪಡೆಗಳನ್ನು ಕೋರಿ ಈಗ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ.

ಮೇಲೆ ಕ್ರಮಾಂಕ (20)ರಲ್ಲಿ ಓದಲಾದ ಸಭೆಯ ನಡವಳಿಗಳನ್ನು ಈ ಆದೇಶದಲ್ಲಿನ ಒಳನಾಡು ಮೀನುಗಾರಿಕೆಯ ನಿಯಮಗಳ ಬಗ್ಗೆ ಸಂಬಂಧಪಟ್ಟ ಇಲಾಖೆಗಳಾದ ಆರ್ಥಿಕ ಇಲಾಖೆ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಸಣ್ಣ ನೀರಾವರಿ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಪ್ರತಿನಿಧಿಗಳನ್ನೊಳಗೊಂಡಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆರವರ ಅಧ್ಯಕ್ಷತೆಯಲ್ಲಿ ದಿನಾಂಕ:12-12-2005ರಂದು ನಡೆದ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಿ ಆಯಾ ಇಲಾಖೆಗಳ ಅನುಮೋದನೆ/ಸಹಮತಿಯನ್ನು ಪಡೆದು ಹೊರಡಿಸಲಾಗಿದೆ.

ರಾಜ್ಯದಲ್ಲಿನ ಬಹುಪಾಲು ಒಳನಾಡು ಜಲಸಂಪನ್ಮೂಲಗಳಲ್ಲಿ ಮಳೆಯ ಆಧಾರದ ಮೇರೆಗೆ ಪ್ರತಿ ಮೀನುಗಾರಿಕೆ ಫಸಲಿ ವರ್ಷದಲ್ಲಿ ನೀರು ನಿಲ್ಲುವ ಅವಧಿಯು ಕೇವಲ 6 ರಿಂದ 8 ತಿಂಗಳುಗಳು ಮಾತ್ರ. ಹಲವು ಪ್ರದೇಶಗಳಲ್ಲಿ ಮುಂಗಾರು ಮಳೆಯು ಕಾಲಕ್ಕೆ ಸರಿಯಾಗಿ ಬಾರದೆ, ಸೆಪ್ಟೆಂಬರ್ ಅಥವಾ ಅಕ್ಟೋಬರ್ ತಿಂಗಳುಗಳಲ್ಲಿ ಬಂದನಂತರವೇ ಸದರಿ ಒಳನಾಡು ಜಲಸಂಪನ್ಮೂಲಗಳಲ್ಲಿ ನೀರು ಶೇಖರಣೆಯಾಗುವ ಸಾಧ್ಯತೆಯಿರುತ್ತದೆ. ಅಂತಹ ಸಂದರ್ಭಗಳಲ್ಲಿ ಈ ಒಳನಾಡು ಜಲಸಂಪನ್ಮೂಲಗಳಲ್ಲಿ ಕೇವಲ 4-5 ತಿಂಗಳುಗಳ ಅವಧಿಗೂ ನೀರು ನಿಲ್ಲುವ ಸಾಧ್ಯತೆಯಿರುವುದಿಲ್ಲ. ಒಳನಾಡಿನಲ್ಲಿ ಸದಾ ನೀರು ನಿಲ್ಲುವ ಜಲಸಂಪನ್ಮೂಲಗಳ ಸಂಖ್ಯೆ ಬಹುಮಟ್ಟಿಗೆ ಕಡಿಮೆ ಇರುತ್ತದೆ. ಒಳನಾಡು ಮೀನು ಕೃಷಿಯು ಸಂಪೂರ್ಣವಾಗಿ ಮುಂಗಾರು ಮತ್ತು ಹಿಂಗಾರು ಮಳೆಗಳನ್ನು ಅವಲಂಬಿಸಿರುವುದರಿಂದ, ಒಳನಾಡು ಜಲಸಂಪನ್ಮೂಲಗಳಲ್ಲಿ ಮೀನು ಕೃಷಿ ಕೈಗೊಳ್ಳಲು ಕನಿಷ್ಟ ಮಟ್ಟಕ್ಕೆ ನೀರು ಶೇಖರಣೆಯಾದ ನಂತರವೇ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆಯಲು ಅರ್ಹ ಸಂಘ/ಸಂಸ್ಥೆಗಳು ಮತ್ತಿತರರು ಮುಂದಾಗುವ ಸಾಧ್ಯತೆಯಿರುತ್ತದೆ. ಮಳೆಯನ್ನು ನಿರೀಕ್ಷಿಸಿ, ಸದರಿ ಜಲಸಂಪನ್ಮೂಲಗಳಲ್ಲಿ ನೀರು ಶೇಖರಣೆಯಾಗಬಹುದೆಂದು ಭಾವಿಸಿ, ಮೀನು ಪಾಶುವಾರು ಹಕ್ಕಿನ ವಿಲೇವಾರಿಯನ್ನು ಮಾಡುವುದು ಕಷ್ಟಸಾಧ್ಯವಾಗಿರುತ್ತದೆ. ಹೆಚ್ಚು ಮೀನಿನ ಉತ್ಪಾದನೆಯು ಸರ್ಕಾರದ ಗುರಿಯಾಗಿದ್ದು, ಇದಕ್ಕೆ ಮೂಲತ: ಸಕಾಲದಲ್ಲಿ ಸಾಕಷ್ಟು ಸಂಖ್ಯೆಯ ಉತ್ತಮ ಮೀನುಮರಿ ತಳಿಯ ಬಿತ್ತನೆಯಾಗಬೇಕಾಗುತ್ತದೆ. ಇದಕ್ಕೆ ಪೂರಕವಾಗಿ ಮೀನು ಪಾಶುವಾರು ಹಕ್ಕಿನ ವಿಲೇವಾರಿ ಆದೇಶಗಳು ಸಕಾಲದಲ್ಲಿ ಸಂಬಂಧಪಟ್ಟವರಿಗೆ ತಲುಪುವುದು ಅತ್ಯಂತ ಮುಖ್ಯವಾದ ವಿಷಯವಾಗಿರುತ್ತದೆ. ವಿಳಂಬವಾದಲ್ಲಿ ಒಳನಾಡು ಜಲಸಂಪನ್ಮೂಲಗಳಲ್ಲಿ ಶೇಖರಣೆಯಾದ ನೀರಿನ ಪ್ರಮಾಣವು ಕಡಿಮೆಯಾದ ಪಕ್ಷದಲ್ಲಿ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆದ ಗುತ್ತಿಗೆದಾರರು ಗುತ್ತಿಗೆ ಮೊತ್ತವನ್ನು ಪಾವತಿಸಲು ನಿರಾಕರಿಸುವ ಸಾಧ್ಯತೆಗಳಿರುತ್ತದೆ. ಆದುದರಿಂದ, ಮೀನು ಪಾಶುವಾರು ಹಕ್ಕಿನ ವಿಲೇವಾರಿ ಪ್ರಕ್ರಿಯೆಯಲ್ಲಿ ಇದುವರೆವಿಗೆ ಪಡೆದ ಅನುಭವದ ಹಿನ್ನೆಲೆಯಲ್ಲಿ ಅಧಿಕಾರ ವಿಕೇಂದ್ರಿಕರಣದ ಅವಶ್ಯಕತೆಯನ್ನು ಗಮನಿಸಲಾಗಿದೆ.

ರಾಜ್ಯದ ಸರ್ಕಾರಿ ಸ್ವಾಮ್ಯದ ಒಳನಾಡು ಜಲಸಂಪನ್ಮೂಲಗಳಲ್ಲಿನ ಮೀನುಗಾರಿಕೆಯನ್ನೇ ಜೀವನಾಧಾರವನ್ನಾಗಿ ಅವಲಂಬಿಸಿರುವ ಬಡ ಒಳನಾಡು ಮೀನುಗಾರರ ಕಲ್ಯಾಣಕ್ಕಾಗಿ ಹಾಗೂ ಅವರ ಜೀವನ ನಿರ್ವಹಣೆಗಾಗಿ ಅವರಿಗೆ ಸ್ವಯಂ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡುವುದಕ್ಕಾಗಿ ರೂಪಿಸಲಾಗಿರುವ ಒಳನಾಡು ಮೀನುಗಾರಿಕೆ ಯೋಜನೆಯು ರಾಜ್ಯ ಸರ್ಕಾರವು ಹಮ್ಮಿಕೊಂಡಿರುವ ಹಲವು ಸಮಾಜ ಕಲ್ಯಾಣ ಕಾರ್ಯಕ್ರಮಗಳಲ್ಲಿ ಒಂದಾಗಿರುತ್ತದೆ. ಕೃಷಿ ಕ್ಷೇತ್ರದಲ್ಲಿ ನೀರಾವರಿಗಾಗಿ ಒಳನಾಡು ಜಲಸಂಪನ್ಮೂಲಗಳನ್ನು ಬಳಸುವುದು ಮೂಲ ಉದ್ದೇಶವಾಗಿದ್ದರೂ ಕೂಡ, ಸದರಿ ಜಲಸಂಪನ್ಮೂಲಗಳಲ್ಲಿನ ಮೀನುಗಾರಿಕೆಯನ್ನೇ ಜೀವನಾಧಾರವನ್ನಾಗಿ ಅವಲಂಬಿಸಿರುವ ಸ್ಥಳೀಯ ಬಡ ಒಳನಾಡು ಮೀನುಗಾರರ ಹಿತದೃಷ್ಟಿಯಿಂದ ಸಮಗ್ರವಾದ ಒಳನಾಡು ಮೀನುಗಾರಿಕೆ ನಿಯಮಗಳನ್ನು ರೂಪಿಸಲು ಸರ್ಕಾರವು ನಿರ್ಧರಿಸಿರುತ್ತದೆ.

**ಕರಾವಳಿ ಮೀನುಗಾರಿಕೆ:**

ರಾಜ್ಯದ 3 ಕರಾವಳಿ ಜಿಲ್ಲೆಗಳಲ್ಲಿನ ಅಂದರೆ ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿನ ವೃತ್ತಿನಿರತ ಸುಮಾರು 0.90 ಲಕ್ಷ ಕರಾವಳಿ ಮೀನುಗಾರರಿಗೆ ಕೆಳಕಂಡ ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆಗಳಡಿ ಸೌಲಭ್ಯಗಳನ್ನು ನೀಡಲಾಗುತ್ತಿದೆ.

i) ಕರಾವಳಿ ಮೀನುಗಾರರ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ 55000 ಕಿ.ಲೀ. ವರೆಗೆ ಸಂಪೂರ್ಣ ರಾಜ್ಯ ಮಾರಾಟ ಕರ ರಹಿತ ಡೀಸೆಲ್ ಸರಬರಾಜು ಯೋಜನೆ;
ii) ಸದರಿ ಡೀಸೆಲ್ ಮೇಲಿನ ಕೇಂದ್ರ ಅಬ್ಕಾರಿ ಶುಲ್ಕ ಮರುಪಾವತಿ ಯೋಜನೆ;
iii) ಸಾಮೂಹಿಕ ವಿಮಾ ಅಪಘಾತ ಯೋಜನೆ;
iv) ಕೇಂದ್ರ ಪುರಸ್ಕೃತ ಉಳಿತಾಯ ಮತ್ತು ಪರಿಹಾರ ಯೋಜನೆ;
v) ನಾಡದೋಣಿಗಳಿಗೆ ಯಾಂತ್ರೀಕರಣಗೊಳಿಸಲು ಧನಸಹಾಯ ಯೋಜನೆ;

vi) ಮೀನು ಮಾರುಕಟ್ಟೆ ನಿರ್ಮಾಣ ಮತ್ತು ಮತ್ಸ್ಯವಾಹಿನಿ ಯೋಜನೆಯಡಿ ಮೀನುಗಾರರಿಗೆ ಮೀನು ಮಾರಾಟ ಮಾಡಲು ದ್ವಿಚಕ್ರ ಮೊಪೆಡ್ ವಾಹನ ಅಥವಾ ಸೈಕಲ್ ಮತ್ತು ಐಸ್‌ಬಾಕ್ಸ್ ಖರೀದಿಸಲು ಸಹಾಯಧನ ಯೋಜನೆ;
vii) ಕರಾವಳಿ ಮೀನುಗಾರಿಕೆ ಬಂದರುಗಳ ಮತ್ತು ಇಳಿದಾಣ ಕೇಂದ್ರಗಳ ನಿರ್ಮಾಣ ಯೋಜನೆ;
viii) ನಬಾರ್ಡ್ ನೆರವಿನ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಧಿ ಯೋಜನೆಯಡಿ ಕರಾವಳಿ ಜಿಲ್ಲೆಗಳಲ್ಲಿನ ಮೀನುಗಾರಿಕೆ ಕೊಂಡಿ ರಸ್ತೆಗಳ, ಸೇತುವೆಗಳ ಮತ್ತು ಜಟ್ಟಿಗಳ ನಿರ್ಮಾಣ ಯೋಜನೆ;
ix) ಮೀನುಗಾರಿಕೆ ದೋಣಿಗಳಲ್ಲಿ ಜೀವರಕ್ಷಿಸುವ ಸಲಕರಣೆಗಳನ್ನು ಅಳವಡಿಸುವುದಕ್ಕೆ ಸಹಾಯಧನ ಯೋಜನೆ;
x) ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ನೆರವಿನ ಸಮಗ್ರ ಕರಾವಳಿ ಮೀನುಗಾರಿಕೆ ಯೋಜನೆ;
xi) ಮತ್ಸ್ಯಾಶ್ರಯ ಯೋಜನೆಯಡಿ ವಸತಿ ರಹಿತ ಮೀನುಗಾರರಿಗೆ ಮನೆಗಳ ನಿರ್ಮಾಣ ಯೋಜನೆ;

ಕರಾವಳಿ ಮೀನುಗಾರರಿಗೆ ಒಂದು ವರ್ಷದ ಅವಧಿಯಲ್ಲಿ ಸುಮಾರು 45 ದಿವಸಗಳಿಂದ 57 ದಿವಸಗಳವರೆಗೆ ಮೀನುಗಾರಿಕೆ ಚಟುವಟಿಕೆಯನ್ನು ನಿಷೇಧಿಸಲಾಗಿದೆ. ಈ ನಿಷೇಧಿತ ಅವಧಿಯಲ್ಲಿ ಕೇವಲ ದೋಣಿಯನ್ನು ಚಲಿಸುವ ಉದ್ದೇಶಕ್ಕಾಗಿಯೇ 25 ಅಶ್ವಶಕ್ತಿಯವರೆಗಿನ ಸಾಮರ್ಥ್ಯದ ಐ.ಬಿ.ಎಂ. ಅಥವಾ ಓ.ಬಿ.ಎಂ. ಯಂತ್ರವನ್ನು ಅಳವಡಿಸಿದ ಅಥವಾ ಅಳವಡಿಸದಿರುವ ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳಲ್ಲಿ ಮೀನುಗಾರಿಕೆಯನ್ನು ಕೈಗೊಳ್ಳಲು ಅನುಮತಿಸಲಾಗಿದೆ. ಕರಾವಳಿ ಮೀನುಗಾರರಿಗೆ ಸಮುದ್ರದಲ್ಲಿ ಮೀನುಗಾರಿಕೆ ಚಟುವಟಿಕೆಯನ್ನು ಕೈಗೊಳ್ಳುವ ಸಂಬಂಧ ಸರ್ಕಾರವು ಗುತ್ತಿಗೆ ಮೊತ್ತವನ್ನು ನಿಗದಿಪಡಿಸಿರುವುದಿಲ್ಲ. ಮೀನುಗಾರಿಕೆ ದೋಣಿಗಳಿಗೆ ಲೈಸನ್ಸ್ ಫೀ ಮಾತ್ರ ವಿಧಿಸಲಾಗುತ್ತಿದೆ.

**ಒಳನಾಡು ಮೀನುಗಾರಿಕೆ:**

ರಾಜ್ಯದಲ್ಲಿ ಸುಮಾರು 1.2 ಲಕ್ಷ ವೃತ್ತಿನಿರತ ಒಳನಾಡು ಮೀನುಗಾರರಿಗೆ ಕೆಳಕಂಡ ವಿವಿಧ ಯೋಜನೆಗಳಡಿ ಸೌಲಭ್ಯಗಳನ್ನು ನೀಡಲಾಗುತ್ತಿದೆ.

i) ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ನೆರವಿನ ಸಮಗ್ರ ಒಳನಾಡು ಮೀನುಗಾರಿಕೆ ಯೋಜನೆ;
ii) ಮೀನುಗಾರಿಕೆ ಸಹಕಾರ ಸಂಘಗಳಲ್ಲಿ ಬಂಡವಾಳ ಹೂಡಲು ಎನ್.ಸಿ.ಡಿ.ಸಿ. ಸಂಸ್ಥೆಯ ನೆರವು;
iii) ಎನ್.ಸಿ.ಡಿ.ಸಿ. ಸಹಾಯದ ಯೋಜನೆಗಳಿಗಾಗಿ ಮೀನುಗಾರರ ಸಹಕಾರ ಸಂಘಗಳಿಗೆ ಸಾಲಗಳು;
iv) ಕೇಂದ್ರ ಪುರಸ್ಕೃತ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ;
v) ಅಚ್ಚುಕಟ್ಟು ಪ್ರಾಧಿಕಾರದ ಜೌಗು/ಚೌಳು ಪ್ರದೇಶಗಳಲ್ಲಿ ಮೀನು ಕೃಷಿ ಕೊಳಗಳ ನಿರ್ಮಾಣಕ್ಕೆ ಸಹಾಯಧನ ಯೋಜನೆ;
vi) ಖಾಸಗಿ ಕ್ಷೇತ್ರದಲ್ಲಿ ಮೀನು ಕೊಳ ನಿರ್ಮಾಣಕ್ಕೆ ಸಹಾಯಧನ ಯೋಜನೆ;
vii) ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಕೊಳ್ಳಲು ಸಹಾಯಧನ ಯೋಜನೆ;
viii) ಮತ್ಸ್ಯಾಶ್ರಯ ಯೋಜನೆಯಡಿ ವಸತಿ ರಹಿತ ಮೀನುಗಾರರಿಗೆ ಮನೆಗಳ ನಿರ್ಮಾಣ ಯೋಜನೆ;
ix) ಮೀನು ಮಾರುಕಟ್ಟೆ ನಿರ್ಮಾಣ ಮತ್ತು ಮತ್ಸ್ಯವಾಹಿನಿ ಯೋಜನೆಯಡಿ ಮೀನುಗಾರರಿಗೆ ಮೀನು ಮಾರಾಟ ಮಾಡಲು ದ್ವಿಚಕ್ರ ಮೊಪೆಡ್ ವಾಹನ ಅಥವಾ ಸೈಕಲ್ ಮತ್ತು ಐಸ್‌ಬಾಕ್ಸ್ ಖರೀದಿಸಲು ಸಹಾಯಧನ ಯೋಜನೆ;

ಒಳನಾಡು ಮೀನುಗಾರರು ಕೇವಲ ಮಳೆಯಾಧಾರಿತ ಒಳನಾಡು ಜಲಸಂಪನ್ಮೂಲಗಳಾದ ಕೆರೆ, ಕೊಳ, ನದಿ, ತೊರೆ, ಜಲಾಶಯ, ಇತ್ಯಾದಿಗಳಲ್ಲಿ ವರ್ಷದ ಕೇವಲ 8 ತಿಂಗಳ ಅವಧಿಯಲ್ಲಿ ನೀರಿನ ಲಭ್ಯತೆಯ ಆಧಾರದ ಮೇರೆಗೆ ಮೀನು ಕೃಷಿ ಕೈಗೊಳ್ಳಲು ಸಾಧ್ಯತೆಯಿರುತ್ತದೆ. ಒಳನಾಡು ಮೀನುಗಾರರಿಗೆ ಗುತ್ತಿಗೆಗೆ ನೀಡಲಾಗುವ ಒಳನಾಡು ಜಲಸಂಪನ್ಮೂಲಗಳ ಪ್ರತಿ ಹೆಕ್ಟೇರ್‌ಗೆ ಈ ಹಿಂದೆ ರೂ.100-00ರಂತೆ ನಿಗದಿಪಡಿಸುತ್ತಿದ್ದ ಗುತ್ತಿಗೆ ದರವನ್ನು ದಿನಾಂಕ:01-07-2005 ರಿಂದ ಅಂದರೆ 2005-06ನೇ ಮೀನುಗಾರಿಕೆ ಫಸಲಿ ವರ್ಷದಿಂದ ಅನ್ವಯವಾಗುವಂತೆ ಪ್ರತಿ ಹೆಕ್ಟೇರ್‌ಗೆ ರೂ.150-00ಕ್ಕೆ ಹೆಚ್ಚಿಸಿ ವಾರ್ಷಿಕ ಗುತ್ತಿಗೆ ದರವನ್ನು ಸರ್ಕಾರವು ಪರಿಷ್ಕರಿಸಿರುತ್ತದೆ. ಗುತ್ತಿಗೆಗೆ ಪಡೆದ ಜಲಸಂಪನ್ಮೂಲಗಳಲ್ಲಿ ಒಳನಾಡು ಮೀನುಗಾರರು **ತಮ್ಮ ಸ್ವಂತ ಬಂಡವಾಳದಿಂದ** ಮೀನುಮರಿ ದಾಸ್ತಾನು ಮಾಡಿ ಮೀನುಗಾರಿಕೆ ಅಭಿವೃದ್ಧಿಯನ್ನು ಕೈಗೊಳ್ಳುವರು. ಬರಗಾಲದ ಪರಿಸ್ಥಿತಿಯಲ್ಲಿ ನೀರಿನ ಅಭಾವದಿಂದಾಗಿ ಗುತ್ತಿಗೆಗೆ ಪಡೆಯಲಾದ ಜಲಸಂಪನ್ಮೂಲಗಳಲ್ಲಿ ಒಳನಾಡು ಮೀನುಗಾರರು ಮೀನು ಕೃಷಿ ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಗುತ್ತಿಗೆಗೆ ಪಡೆಯಲಾದ ಒಳನಾಡು ಜಲಸಂಪನ್ಮೂಲದ ಸಂಪೂರ್ಣ ವಿಸ್ತೀರ್ಣದಲ್ಲಿ ಅನೇಕ ಕಾರಣಗಳಿಂದಾಗಿ ಮೀನುಗಾರಿಕೆ ಚಟುವಟಿಕೆಯನ್ನು ಕೈಗೊಳ್ಳುವ ಸಾಧ್ಯತೆ ಇರುವುದಿಲ್ಲವೆಂಬ ಅಂಶವನ್ನು ಪ್ರಮುಖವಾಗಿ ಗಣನೆಗೆ ತೆಗೆದುಕೊಂಡು ಸದರಿ ಜಲಸಂಪನ್ಮೂಲದಲ್ಲಿ ಮೀನುಗಾರಿಕೆ ಫಸಲಿ ವರ್ಷದ ಪೂರ್ಣ ಅವಧಿಯಲ್ಲಿ ಮೀನುಗಾರಿಕೆಗಾಗಿ ಲಭ್ಯವಾಗುವ ಜಲವಿಸ್ತೀರ್ಣವನ್ನು ಅಂದಾಜಿಸಿ ಆಯಾ ಜಲಸಂಪನ್ಮೂಲದ ಒಟ್ಟು ಜಲವಿಸ್ತೀರ್ಣದ ಶೇ.50ರಷ್ಟನ್ನು ಮಾತ್ರ ವಾರ್ಷಿಕ ಸರಾಸರಿ ಲಭ್ಯವಾಗುವ ಜಲವಿಸ್ತೀರ್ಣವೆಂದು ಗಣನೆಗೆ ತೆಗೆದುಕೊಂಡು ಅದನ್ನು ಮೀನುಗಾರಿಕೆಗಾಗಿ **ಉಪಯುಕ್ತ ಜಲವಿಸ್ತೀರ್ಣ ಪ್ರದೇಶವೆಂದು (Effective Waterspread Area)** ಪರಿಗಣಿಸಿ ವಾರ್ಷಿಕ ಗುತ್ತಿಗೆ ಮೊತ್ತವನ್ನು ನಿಗದಿಪಡಿಸುವುದು ಸೂಕ್ತವೆಂದು ಸರ್ಕಾರವು ನಿರ್ಧರಿಸಿರುತ್ತದೆ.

ಪ್ರಸ್ತುತ ಜಾರಿಯಲ್ಲಿರುವ ಒಳನಾಡು ಮೀನುಗಾರಿಕೆ ನಿಯಮಗಳ ಮೇರೆಗೆ ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳಲ್ಲಿನ ಮೀನು ಪಾಶುವಾರು ಹಕ್ಕನ್ನು 3 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುತ್ತಿದುದ್ದನ್ನು ಕನಿಷ್ಠ 5 ವರ್ಷಗಳ ಅವಧಿಗೆ ಒಳನಾಡು ಮೀನುಗಾರರ ಹಿತದೃಷ್ಟಿಯಿಂದ ಹೆಚ್ಚಿಸುವುದು ಸೂಕ್ತವೆಂದು ಮೇಲೆ ಕ್ರಮಾಂಕ (4)ರಲ್ಲಿ ಓದಲಾದ ಭಾರತ ಸರ್ಕಾರದ ಪತ್ರದಲ್ಲಿ ಸೂಚಿಸಲಾಗಿದೆ. ಅದರಂತೆಯೆ ಗರಿಷ್ಠ 3 ವರ್ಷಗಳಿಗಿದ್ದ ಗುತ್ತಿಗೆ ಅವಧಿಯನ್ನು 2005-06ನೇ ಮೀನುಗಾರಿಕೆ ಫಸಲಿ ವರ್ಷದಿಂದ ಅನ್ವಯವಾಗುವಂತೆ ಗರಿಷ್ಠ 5 ವರ್ಷಗಳ ಅವಧಿಗೆ ಹೆಚ್ಚಿಸಲು ಕೂಡ ಸರ್ಕಾರವು ನಿರ್ಧರಿಸಿರುತ್ತದೆ. ಮುಂದುವರೆದು, ದೇಶದ ಹಣದುಬ್ಬರದ ಪ್ರಮಾಣವು ಶೇ.5 ರಿಂದ 6ರಷ್ಟಿದ್ದು ಸರ್ಕಾರವು ವಿವಿಧ ಬಾಬ್ತುಗಳಲ್ಲಿ ವಿಧಿಸುವ ಶುಲ್ಕ/ಪರವಾನಗಿ ಶುಲ್ಕ ಮುಂತಾದವುಗಳು ಪ್ರತಿವರ್ಷ ಶೇ.10ರಷ್ಟು ಹೆಚ್ಚಿಸುತ್ತಿಲ್ಲವೆಂಬುದನ್ನು ಗಮನಿಸಿ, ಮೀನುಗಾರಿಕೆ ಗುತ್ತಿಗೆ ಅವಧಿಯಲ್ಲಿ ಪ್ರತಿವರ್ಷ ಗುತ್ತಿಗೆ ಮೊತ್ತಕ್ಕೆ ಹಾಲಿ ಶೇ.10ರಷ್ಟು ಹೆಚ್ಚಿಸುತ್ತಿರುವುದು ಬಡ ಒಳನಾಡು ಮೀನುಗಾರರ ಮೇಲೆ ಹೊರೆಯಾಗುತ್ತದೆಂಬ ಅಂಶವನ್ನು ಮನಗಂಡು ಸದರಿ ವಾರ್ಷಿಕ ಹೆಚ್ಚಳವನ್ನು ಶೇ.5ಕ್ಕೆ ನಿಗದಿಪಡಿಸಲು ಕೂಡ ಸರ್ಕಾರವು ನಿರ್ಧರಿಸಿರುತ್ತದೆ.

ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳಡಿ ಕರಾವಳಿ ಮೀನುಗಾರರಿಗೆ ಹಾಗೂ ಒಳನಾಡು ಮೀನುಗಾರರಿಗೆ ನೀಡಲಾಗುತ್ತಿರುವ ಸೌಲಭ್ಯಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ಆಗಿಂದಾಗ್ಗೆ ಬರಗಾಲದ ವಿಕೋಪಕ್ಕೆ ತುತ್ತಾಗುವ ಬಡ ಒಳನಾಡು ಮೀನುಗಾರರ ಹಿತವನ್ನು ಗಮನದಲ್ಲಿಟ್ಟುಕೊಂಡು ಮೇಲೆ ವಿವರಿಸಿರುವ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಸೂಚನೆಗಳನ್ವಯ ಮತ್ತು ಮೇಲೆ ಕ್ರಮಾಂಕ (14)ರಲ್ಲಿ ಓದಲಾದ ಭಾರತ ಸರ್ಕಾರದ ಪತ್ರದಲ್ಲಿನ ಸೂಚನೆಗಳನ್ವಯ ಮತ್ತು ಜಾರಿಯಲ್ಲಿರುವ ಒಳನಾಡು ಮೀನುಗಾರಿಕೆ ಗುತ್ತಿಗೆ ನಿಯಮಗಳಿಗೆ ಸಂಬಂಧಿಸಿದಂತೆ ಮೇಲೆ ಓದಲಾದ ಎಲ್ಲಾ ಆದೇಶಗಳಲ್ಲಿನ ನಿಯಮಗಳನ್ನು ಕ್ರೋಢಿಕರಿಸಿ ಸಂಪೂರ್ಣ ನಿಯಮಗಳನ್ನೊಳಗೊಂಡ ಒಂದು ಸಮಗ್ರ ಆದೇಶವನ್ನು ಹೊರಡಿಸಲು ಸರ್ಕಾರವು ತೀರ್ಮಾನಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ/167/ಮೀಇಇ/2005, ಬೆಂಗಳೂರು ದಿನಾಂಕ: 28ನೇ ಜನವರಿ 2006**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಮೀನುಗಾರಿಕೆ ಇಲಾಖೆಯ/ಅರಣ್ಯ ಇಲಾಖೆಯ/ಗ್ರಾಮ ಪಂಚಾಯತ್‌ಗಳ / ಜಲ ಸಂವರ್ಧನೆ ಯೋಜನಾ ಸಂಘದ / ಕೆರೆ ಅಭಿವೃದ್ಧಿ ಪ್ರಾಧಿಕಾರದ / ಇತರೆ ಇಲಾಖೆಗಳ / ಪ್ರಾಧಿಕಾರಗಳ / ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಸರ್ಕಾರಿ ಸ್ವಾಮ್ಯದ ಒಳನಾಡು ಜಲಸಂಪನ್ಮೂಲಗಳಾದ ಕೆರೆಗಳ, ಕೊಳಗಳ, ನದಿಗಳ, ತೊರೆಗಳ, ಜಲಾಶಯಗಳ, ಇತ್ಯಾದಿ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಗೆ ಸಂಬಂಧಪಟ್ಟಂತೆ ಈ ಹಿಂದೆ ಹೊರಡಿಸಲಾದ ಎಲ್ಲಾ ಆದೇಶಗಳನ್ನು ರದ್ದುಪಡಿಸಿ ತತ್‌ಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕೆಳಕಂಡ ಸಮಗ್ರವಾದ ಒಳನಾಡು ಮೀನುಗಾರಿಕೆಯ ನಿಯಮಗಳನ್ನು ಜಾರಿಗೊಳಿಸಿ ಆದೇಶಿಸಿದೆ.

**ಒಳನಾಡು ಜಲಸಂಪನ್ಮೂಲಗಳ ವರ್ಗೀಕರಣ:-**

**ಕಂಡಿಕೆ 1:-** ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳನ್ನು ಕೆಳಗಿನಂತೆ ವಿಂಗಡಿಸಿ ವರ್ಗೀಕರಿಸಲಾಗಿದೆ:-

(ಅ) ಮೀನುಗಾರಿಕೆ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿರುವ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳು ಭಾರತ ಸರ್ಕಾರದ ಕೇಂದ್ರ ಪುರಸ್ಕೃತ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು ಸದರಿ ಯೋಜನೆಯಡಿ ಗ್ರಾಮೀಣ ಮೀನು ಕೃಷಿಕರಿಗೆ ಮೀನುಗಾರಿಕೆಯಲ್ಲಿ ತರಬೇತಿ ನೀಡಿ ಮೀನು ಕೃಷಿ ಕೈಗೊಳ್ಳಲು ಸ್ಥಳೀಯ ಅತಿ ಸಣ್ಣ ಪ್ರಮಾಣದ ಜಲ ಸಂಪನ್ಮೂಲಗಳನ್ನು ಅವರಿಗೆ ಗುತ್ತಿಗೆಗೆ ನೀಡುವ ಅವಶ್ಯಕತೆ ಇರುವುದರಿಂದ, ಯಾವ ಯಾವ ಜಿಲ್ಲೆಗಳಲ್ಲಿ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆಯೋ ಆಯಾ ಜಿಲ್ಲೆಗಳಲ್ಲಿನ 10 ಹೆಕ್ಟೇರ್‌ವರೆಗಿನ ಜಲವಿಸ್ತೀರ್ಣವುಳ್ಳ ಗುರುತಿಸಲಾದ ಜಲಸಂಪನ್ಮೂಲಗಳು ಸಂಬಂಧಪಟ್ಟ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳ ವ್ಯಾಪ್ತಿಗೆ ಒಳಪಟ್ಟಿರುತ್ತವೆ **(ಆಯಾ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯ ವ್ಯಾಪ್ತಿಗೆ ಒಳಪಡಿಸಲಾದ 10 ಹೆಕ್ಟೇರ್‌ವರೆಗಿನ ಜಲವಿಸ್ತೀರ್ಣವುಳ್ಳ ಕೆರೆಗಳ ಪಟ್ಟಿಯನ್ನು ಪ್ರತ್ಯೇಕವಾದ ಸರ್ಕಾರಿ ಆದೇಶದಲ್ಲಿ ಪ್ರಕಟಿಸಲಾಗುವುದು)**.

(ಆ) ಕಂಡಿಕೆ (ಅ)ರಲ್ಲಿನ ಜಲಸಂಪನ್ಮೂಲಗಳನ್ನು ಹೊರತುಪಡಿಸಿ 40 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶದವರೆಗಿನ ಸರ್ಕಾರಿ ಸ್ವಾಮ್ಯದ ಎಲ್ಲಾ ಜಲಸಂಪನ್ಮೂಲಗಳು ಆಯಾ ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಗೆ ಒಳಪಟ್ಟಿರುತ್ತವೆ.

(ಇ) 40 ಹೆಕ್ಟೇರ್‌ಗಳಿಗಿಂತ ಹೆಚ್ಚಿನ ಅಚ್ಚುಕಟ್ಟು ಪ್ರದೇಶವುಳ್ಳ ಸರ್ಕಾರಿ ಸ್ವಾಮ್ಯದ ಎಲ್ಲಾ ಜಲಸಂಪನ್ಮೂಲಗಳು ಮೀನುಗಾರಿಕೆ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುತ್ತವೆ.

**(ಈ) ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳ ಒಡೆತನವು ಯಾವುದೇ ಇಲಾಖೆಯ / ಪ್ರಾಧಿಕಾರದ / ಸರ್ಕಾರಿ ಸ್ವಾಮ್ಯದ ಸಂಸ್ಥೆಯ ವ್ಯಾಪ್ತಿಗೆ ಒಳಪಟ್ಟಿದ್ದರೂ ಕೂಡ, ಅಂತಹ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಯ ವಿಷಯವು ಮೀನುಗಾರಿಕೆ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ.**

**ಆದ್ಯತೆ:-**

**ಕಂಡಿಕೆ 2:- ಮೀನುಗಾರಿಕೆ ಇಲಾಖೆಯ/ಜಲ ಸಂವರ್ಧನೆ ಯೋಜನಾ ಸಂಘದ** ವ್ಯಾಪ್ತಿಗೆ ಬರುವ ಎಲ್ಲಾ ಜಲ ಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಕೆಳಗೆ ಕಾಣಿಸಿದಂತೆ ಸಂಘ / ಸಂಸ್ಥೆ / ವ್ಯಕ್ತಿಗಳಿಗೆ ಮಾತ್ರ ಸೀಮಿತಗೊಳಿಸಿ ಆದ್ಯತೆ ಮೇರೆಗೆ ಗುತ್ತಿಗೆಗೆ ನೀಡತಕ್ಕದ್ದು:-

೧) ಜಲ ಸಂವರ್ಧನೆ ಯೋಜನಾ ಸಂಘದಡಿ ನೋಂದಾಯಿಸಿದ ಸಂಘ/ಸಂಸ್ಥೆಗಳು. (ಜಲ ಸಂವರ್ಧನೆ ಯೋಜನಾ ಸಂಘದಡಿ ನೋಂದಾಯಿಸಿದ ಸಂಘ / ಸಂಸ್ಥೆಗಳಿಗೆ ನೀಡಲಾಗಿರುವ ಈ ಪ್ರಥಮ ಆದ್ಯತೆಯು ಕೇವಲ ವಿಶ್ವ ಬ್ಯಾಂಕಿನ ನೆರವಿನಡಿ ಜಲ ಸಂವರ್ಧನೆ ಯೋಜನಾ ಸಂಘದಿಂದ ಅಭಿವೃದ್ಧಿಪಡಿಸಲಾದ/ಅಭಿವೃದ್ಧಿಪಡಿಸಲಾಗುವ 40 ಹೆಕ್ಟೇರ್‌ಗಳಿಗಿಂತ ಮೇಲ್ಪಟ್ಟ ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳಿಗೆ ಮಾತ್ರ ಕೆಳಕಂಡ ಷರತ್ತುಗಳ ಮೇರೆಗೆ ಅನ್ವಯಿಸುತ್ತದೆ).

(ಅ) ಕೆರೆ ವ್ಯಾಪ್ತಿಯ ಗ್ರಾಮಗಳಲ್ಲಿನ ಸ್ಥಳೀಯ ಮೀನುಗಾರರನ್ನು ಜಲ ಸಂವರ್ಧನೆ ಯೋಜನಾ ಸಂಘದಡಿ ರೂಪಿಸಿರುವ ಕೆರೆ ಬಳಕೆದಾರರ ಗುಂಪಿಗೆ (TUGಗೆ) ಸದಸ್ಯರನ್ನಾಗಿ ಕಡ್ಡಾಯವಾಗಿ ನೇಮಿಸಿಕೊಳ್ಳತಕ್ಕದ್ದು.

(ಆ) ಕೆರೆ ವ್ಯಾಪ್ತಿಯ ಸ್ಥಳೀಯ ಮೀನುಗಾರರ ಸಹಕಾರ ಸಂಘಗಳನ್ನು ಜಲ ಸಂವರ್ಧನೆ ಯೋಜನಾ ಸಂಘದಿಂದ ರೂಪಿಸಿರುವ ಕೆರೆ ಬಳಕೆದಾರರ ಗುಂಪಿಗೆ (TUGಗೆ) ಸದಸ್ಯರನ್ನಾಗಿ ಕಡ್ಡಾಯವಾಗಿ ನೇಮಿಸಿಕೊಳ್ಳತಕ್ಕದ್ದು.

(ಇ) ಸದರಿ ಕೆರೆಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಯನ್ನು ಸ್ಥಳೀಯ ಸದಸ್ಯ ಮೀನುಗಾರರ ಮುಖಾಂತರವೇ ಕೈಗೊಳ್ಳತಕ್ಕದ್ದು.

(ಈ) ಸದರಿ ಕೆರೆಯ ಮೀನುಗಾರಿಕೆಯಿಂದ ಬರುವ ನಿವ್ವಳ ಲಾಭದಲ್ಲಿ ಶೇ.70ರಷ್ಟನ್ನು ಸ್ಥಳೀಯ ಮೀನು ಕೃಷಿಕರಿಗೆ/ ಮೀನುಗಾರರ ಸಹಕಾರ ಸಂಘಕ್ಕೆ ನೀಡತಕ್ಕದ್ದು.

(ಉ) ಜಲ ಸಂವರ್ಧನೆ ಯೋಜನಾ ಸಂಘದ ವ್ಯಾಪ್ತಿಯಲ್ಲಿನ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಈಗಾಗಲೇ ನೀಡಲಾಗಿರುವ ಪ್ರಕರಣಗಳಲ್ಲಿ ಆಯಾ ಗುತ್ತಿಗೆ ಅವಧಿಯು ಮುಗಿಯುವ ತನಕ ಸದರಿ ಗುತ್ತಿಗೆದಾರರನ್ನೇ ಮುಂದುವರೆಸತಕ್ಕದ್ದು.

(ಊ) ಇನ್ನುಳಿದಂತೆ ಸದರಿ ಕೆರೆಗಳಲ್ಲಿನ ಮೀನುಗಾರಿಕೆ ಅಭಿವೃದ್ಧಿಗೆ ಮತ್ತು ಮೀನು ಕೃಷಿಗೆ ಸಂಬಂಧಿಸಿದಂತೆ ಈ ಆದೇಶದಲ್ಲಿನ ನಿಯಮಗಳನ್ನು ಹಾಗೂ ಸರ್ಕಾರವು ಕಾಲಕಾಲಕ್ಕೆ ವಿಧಿಸಬಹುದಾದ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

೨) ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿ (ನಿ), ಮೈಸೂರು. (ಮೀನುಗಾರಿಕೆ ಇಲಾಖೆಯಿಂದ ಮೀನು ಪಾಶುವಾರು ಹಕ್ಕನ್ನು ವಿಲೇಗೊಳಿಸುವ ಪ್ರಕರಣಗಳಲ್ಲಿ ಈ ಸಂಸ್ಥೆಗೆ ಪ್ರಥಮ ಆದ್ಯತೆಯನ್ನು ನೀಡಲಾಗಿದೆ. ಇನ್ನುಳಿದಂತೆ ಕೆಳಕಂಡ ಸಂಘ/ಸಂಸ್ಥೆ/ವ್ಯಕ್ತಿಗಳಿಗೆ ಅನುಕ್ರಮವಾಗಿ 2ನೇ ಮತ್ತು ನಂತರದ ಆದ್ಯತೆಯನ್ನು ನೀಡಲಾಗಿದೆ)

೩) ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿ (ನಿ), ಮೈಸೂರು ಇದರ ಸದಸ್ಯತ್ವವನ್ನು ಹೊಂದಿರುವ ಮೀನುಗಾರರ ಸಹಕಾರ ಸಂಘಗಳು. (ಈ ಆದ್ಯತೆಗೆ ಸೇರಿದ ಮೀನುಗಾರರ ಸಹಕಾರ ಸಂಘಗಳು ಒಂದೇ ಕೆರೆಗೆ ಪೈಪೋಟಿ ನಡೆಸಿದಲ್ಲಿ, ಸದರಿ ಕೆರೆಯ ಗ್ರಾಮದ ವ್ಯಾಪ್ತಿಗೆ ಬರುವ ಮೀನುಗಾರರ ಸಹಕಾರ ಸಂಘಕ್ಕೆ ಪ್ರಥಮ ಆದ್ಯತೆಯನ್ನು ನೀಡತಕ್ಕದ್ದು. ನಂತರದ ಆದ್ಯತೆಯನ್ನು ಅನುಕ್ರಮವಾಗಿ ಸಂಬಂಧಪಟ್ಟ ಹೋಬಳಿ ಮಟ್ಟದ, ತಾಲ್ಲೂಕು ಮಟ್ಟದ ಮತ್ತು ಜಿಲ್ಲಾ ಮಟ್ಟದ ಕಾರ್ಯವ್ಯಾಪ್ತಿಯನ್ನು ಹೊಂದಿರುವ ಮೀನುಗಾರರ ಸಹಕಾರ ಸಂಘಗಳಿಗೆ ನೀಡತಕ್ಕದ್ದು. ಮೀನು ಪಾಶುವಾರು ಹಕ್ಕನ್ನು ಪಡೆಯಲು ಶಿಫಾರಸ್ಸುಗೊಂಡ ಸಂಘವು ಮಹಾಮಂಡಳಿಯಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಪಡೆದಿರತಕ್ಕದ್ದು).

೪) ನೋಂದಾಯಿಸಲ್ಪಟ್ಟ ಮೀನುಗಾರರ ಸಹಕಾರ ಸಂಘಗಳು (ಈ ಆದ್ಯತೆಗೆ ಸೇರಿದ ಮೀನುಗಾರರ ಸಹಕಾರ ಸಂಘಗಳು ಒಂದೇ ಕೆರೆಗೆ ಪೈಪೋಟಿ ನಡೆಸಿದಲ್ಲಿ ಸದರಿ ಕೆರೆಯ ಗ್ರಾಮದ ವ್ಯಾಪ್ತಿಗೆ ಬರುವ ಮೀನುಗಾರರ ಸಹಕಾರ ಸಂಘಕ್ಕೆ ಪ್ರಥಮ ಆದ್ಯತೆಯನ್ನು ನೀಡತಕ್ಕದ್ದು. ನಂತರದ ಆದ್ಯತೆಯನ್ನು ಅನುಕ್ರಮವಾಗಿ ಸಂಬಂಧಪಟ್ಟ ಹೋಬಳಿ ಮಟ್ಟದ, ತಾಲ್ಲೂಕು ಮಟ್ಟದ ಮತ್ತು ಜಿಲ್ಲಾ ಮಟ್ಟದ ಕಾರ್ಯವ್ಯಾಪ್ತಿಯನ್ನು ಹೊಂದಿರುವ ಮೀನುಗಾರರ ಸಹಕಾರ ಸಂಘಗಳಿಗೆ ನೀಡತಕ್ಕದ್ದು).

೫) ಮೀನುಗಾರಿಕೆ ವಿಷಯದಲ್ಲಿ ಪದವಿ ಹೊಂದಿದ ನಿರುದ್ಯೋಗಿ ಮೀನುಗಾರಿಕೆ ಪದವೀಧರರು;

ಅ) ರಾಜ್ಯದ ಸಾರ್ವಜನಿಕರಿಗೆ ತಾಜಾ ಮೀನಿನ ಪೌಷ್ಠಿಕ ಆಹಾರವನ್ನು ಒದಗಿಸುವ ಸದುದ್ದೇಶದಿಂದ ಒಳನಾಡು ಮೀನು ಕೃಷಿಯನ್ನು ವೈಜ್ಞಾನಿಕವಾಗಿ ಕೈಗೊಳ್ಳಲು ನಿರುದ್ಯೋಗಿ ಮೀನುಗಾರಿಕೆ ಪದವೀಧರರು ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿನ ಒಂದು ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗರಿಷ್ಠ 5 ವರ್ಷಗಳ ಅವಧಿಗೆ ಈ ಆದೇಶದಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟಂತೆ ಗುತ್ತಿಗೆಗೆ ಪಡೆಯಬಹುದಾಗಿದೆ. ನಿರುದ್ಯೋಗಿ ಮೀನುಗಾರಿಕೆ ಪದವೀಧರರಿಗೆ ನೀಡಿರುವ ಆದ್ಯತೆಯು 4ನೇ ಸ್ಥಾನದಲ್ಲಿರುವುದರಿಂದ, ಕಾರಣಾಂತರಗಳಿಂದಾಗಿ ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿನ ಯಾವುದೊಂದು ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆಯಲು ಸಾಧ್ಯವಾಗದಿದ್ದಲ್ಲಿ, ತಮ್ಮ ಜಿಲ್ಲೆಯ ಅಕ್ಕಪಕ್ಕದ ಜಿಲ್ಲೆಗಳಲ್ಲಿ ಲಭ್ಯವಾಗುವ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಮೇಲಿನ ನಿಬಂಧನೆಗೆ ಒಳಪಟ್ಟಂತೆ ಗುತ್ತಿಗೆಗೆ ಪಡೆಯಬಹುದಾಗಿದೆ.

ಆ) ಮೀನು ಪಾಶುವಾರು ಹಕ್ಕನ್ನು ಪಡೆಯಲು ಇಚ್ಛಿಸಿದ ನಿರುದ್ಯೋಗಿ ಮೀನುಗಾರಿಕೆ ಪದವೀಧರರು ಕರ್ನಾಟಕದಲ್ಲಿ ಜನಿಸಿದ ವ್ಯಕ್ತಿಯಾಗಿರತಕ್ಕದ್ದು ಅಥವಾ ಕರ್ನಾಟಕದಲ್ಲಿ ಕನಿಷ್ಠ 10 ವರ್ಷಗಳಿಗೆ ಕಡಿಮೆ ಇಲ್ಲದಂತೆ ವಾಸವಾಗಿರತಕ್ಕದ್ದು.

ಇ) ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆದ ಅವಧಿಯಲ್ಲಿ ನಿರುದ್ಯೋಗಿ ಮೀನುಗಾರಿಕೆ ಪದವೀಧರರು ಉದ್ಯೋಗವನ್ನು ಪಡೆದಲ್ಲಿ, ಅಂತಹ ಗುತ್ತಿಗೆದಾರರ ಗುತ್ತಿಗೆಯನ್ನು ಉದ್ಯೋಗ ಪಡೆದ ಮೀನುಗಾರಿಕೆ ಫಸಲಿ ವರ್ಷದ ಕೊನೆಯ ತನಕ ಮುಂದುವರೆಸತಕ್ಕದ್ದು. ಒಂದು ವೇಳೆ, ಗುತ್ತಿಗೆ ಅವಧಿಯು ಮುಗಿದನಂತರವೂ ನಿರುದ್ಯೋಗಿ ಮೀನುಗಾರಿಕೆ ಪದವೀಧರರು ನಿರುದ್ಯೋಗಿಗಳಾಗಿಯೇ ಮುಂದುವರೆದಿದ್ದಲ್ಲಿ, ಅವರು ಗುತ್ತಿಗೆಗೆ ಪಡೆದ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ನವೀಕರಿಸಿಕೊಳ್ಳಬಹುದು.

೬) ಕರ್ನಾಟಕ ನೀರಾವರಿ ಕಾಯಿದೆಯಡಿ ಸಣ್ಣ ನೀರಾವರಿ ಇಲಾಖೆಯ ಇತರ ಯೋಜನೆಗಳಡಿ ನೋಂದಾಯಿಸಲ್ಪಟ್ಟ ಸಣ್ಣ ನೀರಾವರಿ ಬಳಕೆದಾರರ ಸಹಕಾರ ಸಂಘಗಳು/ಕೆರೆ ಅಭಿವೃದ್ಧಿ ಸಂಘಗಳು / ಕೆರೆ ಬಳಕೆದಾರರ ಸಂಘಗಳು/ಕೆರೆ ಅಚ್ಚುಕಟ್ಟುದಾರರ ಸಂಘಗಳು/ಕೆರೆ ನಿರ್ವಹಣಾ ಸಂಘಗಳು, ವನ್ಯಜೀವಿ/ಜೀವಿ ವೈವಿಧ್ಯ ಸಂರಕ್ಷಣಾ ಸಂಘಗಳು. (ಈ ಆದ್ಯತೆಯಲ್ಲಿ ಬರುವ ಸಂಘಗಳು ಒಂದೇ ಕೆರೆಗೆ ಪೈಪೋಟಿ ನಡೆಸಿದಲ್ಲಿ ಪೈಪೋಟಿ ನಡೆಸಿದಂತಹ ಸಂಘ/ಸಂಸ್ಥೆಗಳಲ್ಲಿ ಮಾತ್ರ ಹರಾಜು ಮಾಡಿ ಗುತ್ತಿಗೆಗೆ ನೀಡತಕ್ಕದ್ದು).

**ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆಯಲು ಬಯಸುವ ಮೇಲ್ಕಾಣಿಸಿದ ಸಂಘಗಳು/ಸಂಸ್ಥೆಗಳು ತಮ್ಮ ಬೈಲಾಗಳಲ್ಲಿ ಮೀನುಗಾರಿಕೆ ಚಟುವಟಿಕೆಯನ್ನು ಮುಖ್ಯ ಚಟುವಟಿಕೆಯನ್ನಾಗಿ ಘೋಷಿಸಿರತಕ್ಕದ್ದು.**

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ, ಗಿರಿಜನರ ಮತ್ತು ಸರ್ಕಾರದ ಯೋಜನೆಗಳ ಹಿತಾಸಕ್ತಿಯನ್ನು ಕಾಪಾಡುವ ದೃಷ್ಟಿಯಲ್ಲಿ ಮೇಲ್ಕಾಣಿಸಿದ ಆದ್ಯತೆಯನ್ನು ಆಯಾ ಸಂದರ್ಭಕ್ಕೆ ಅನುಗುಣವಾಗಿ ಬದಲಾಯಿಸುವ ಹಕ್ಕನ್ನು ಸರ್ಕಾರವು ಹೊಂದಿರುತ್ತದೆ.

ಯಾವುದೇ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಪಡೆಯಲು ಒಂದೇ ಆದ್ಯತೆಯಲ್ಲಿ ಬರುವ ಸಂಘಗಳ / ಸಂಸ್ಥೆಗಳ / ವ್ಯಕ್ತಿಗಳ ನಡುವೆ ಪೈಪೋಟಿ ಬಂದಲ್ಲಿ, ಅಂತಹ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಅಂತಹ ಪೈಪೋಟಿದಾರರಿಗೆ ಸೀಮಿತಗೊಳಿಸಿ ಹರಾಜು ಮೂಲಕ ವಿಲೇವಾರಿ ಮಾಡತಕ್ಕದ್ದು.

**ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಅವಧಿ:-**

**ಕಂಡಿಕೆ 3** :- 2005-06ನೇ ಮೀನುಗಾರಿಕೆ ಫಸಲಿ ವರ್ಷದಿಂದ ಅಂಧರೆ ದಿನಾಂಕ:01-07-2005 ರಿಂದ ಅನ್ವಯವಾಗುವಂತೆ ಮೀನುಗಾರಿಕೆ ಇಲಾಖೆಯ ಮುಖಾಂತರ ನೇರವಾಗಿ ಅಥವಾ ಟೆಂಡರ್-ಕಂ-ಹರಾಜು ಮೂಲಕ ಹೊಸದಾಗಿ ನೀಡಲಾಗುವ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು **ಗರಿಷ್ಟ 5 (ಐದು) ವರ್ಷಗಳ ಅವಧಿಗೆ** ನೀಡತಕ್ಕದ್ದು.

**ಉಪಯುಕ್ತತಾ ಜಲವಿಸ್ತೀರ್ಣ ಪ್ರದೇಶ:-**

**ಕಂಡಿಕೆ 4**:- (ಅ) 2005-06ನೇ ಸಾಲಿನ ಮೀನುಗಾರಿಕೆ ಫಸಲಿ ವರ್ಷದಿಂದ ಅಂದರೆ ದಿನಾಂಕ:01-07-2005 ರಿಂದ ಅನ್ವಯವಾಗುವಂತೆ ಹೊಸದಾಗಿ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ನೀಡಲಾಗುವ ಜಲಸಂಪನ್ಮೂಲದ **ಒಟ್ಟು ಜಲವಿಸ್ತೀರ್ಣದ ಶೇ.50 ರಷ್ಟು ಜಲವಿಸ್ತೀರ್ಣವನ್ನು ಉಪಯುಕ್ತತಾ ಜಲವಿಸ್ತೀರ್ಣ ಪ್ರದೇಶವೆಂದು (Effective Waterspread Area)** ಗಣನೆಗೆ ತೆಗೆದುಕೊಂಡು, ಆ ರೀತಿ ಗಣನೆಗೆ ತೆಗೆದುಕೊಂಡ ಜಲವಿಸ್ತೀರ್ಣಕ್ಕೆ ಮೊದಲನೇ ವರ್ಷ ಪ್ರತಿ ಹೆಕ್ಟೇರ್‌ಗೆ ರೂ.150-00ರಂತೆ (ರೂಪಾಯಿ ಒಂದುನೂರ ಐವತ್ತು ಮಾತ್ರ) ಗುತ್ತಿಗೆ ಮೊತ್ತವನ್ನು ನಿಗದಿಪಡಿಸತಕ್ಕದ್ದು. ಈ ರೀತಿ ನಿಗದಿಪಡಿಸಿದ ಗುತ್ತಿಗೆ ಮೊತ್ತಕ್ಕೆ ಉಳಿದ 4 ವರ್ಷಗಳ ಗುತ್ತಿಗೆ ಅವಧಿಯಲ್ಲಿ ಪ್ರತಿವರ್ಷ ಹಿಂದಿನ ವರ್ಷದ ಗುತ್ತಿಗೆ ಮೊತ್ತಕ್ಕೆ ಶೇ.5 ರಷ್ಟು ಹೆಚ್ಚಿಸಿ ಗುತ್ತಿಗೆ ಮೊತ್ತವನ್ನು ನಿಗದಿಪಡಿಸತಕ್ಕದ್ದು.

(ಆ) ಈ ರೀತಿಯಾಗಿ ನೀಡಲಾದ 5 ವರ್ಷಗಳ ಗುತ್ತಿಗೆ ಅವಧಿಯು ಮುಗಿದನಂತರ ಸದರಿ ಜಲಸಂಪನ್ಮೂಲಕ್ಕೆ ಸಂಬಂಧಿಸಿದಂತೆ ಹೊಸದಾಗಿ ಪ್ರಸ್ತಾವನೆಯನ್ನು ಸಲ್ಲಿಸುವ ಸಮಯದಲ್ಲಿ ಪುನ: ಆ ಜಲಸಂಪನ್ಮೂಲದ ಒಟ್ಟು ಜಲವಿಸ್ತೀರ್ಣದ ಶೇ.50ರಷ್ಟನ್ನು ಉಪಯುಕ್ತತಾ ಜಲವಿಸ್ತೀರ್ಣವೆಂದು ಗಣನೆಗೆ ತೆಗೆದುಕೊಂಡು, ಆ ರೀತಿ ಗಣನೆಗೆ ತೆಗೆದುಕೊಂಡ ಜಲವಿಸ್ತೀರ್ಣದ ಪ್ರತಿ ಹೆಕ್ಟೇರ್‌ಗೆ ರೂ.150-00ರಂತೆ ಹೊಸ ಗುತ್ತಿಗೆ ಮೊತ್ತವನ್ನು ನಿಗದಿಪಡಿಸತಕ್ಕದ್ದು. ನಂತರ ಉಳಿಯುವ 4 ವರ್ಷಗಳಿಗೆ ಮೊದಲನೇ ವರ್ಷಕ್ಕೆ ನಿಗದಿಪಡಿಸಿದ ಗುತ್ತಿಗೆ ಮೊತ್ತಕ್ಕೆ ಪ್ರತಿವರ್ಷ ಹಿಂದಿನ ವರ್ಷದ ಗುತ್ತಿಗೆ ಮೊತ್ತಕ್ಕೆ ಶೇ.5ರಷ್ಟು ಹೆಚ್ಚಿಸಿ ಗುತ್ತಿಗೆ ಮೊತ್ತವನ್ನು ನಿಗದಿಪಡಿಸತಕ್ಕದ್ದು.

**ಟೆಂಡರ್-ಕಂ-ಹರಾಜು:-**

**ಕಂಡಿಕೆ 5**:- 2005-06ನೇ ಸಾಲಿನ ಮೀನುಗಾರಿಕೆ ಫಸಲಿ ವರ್ಷದಿಂದ ಅಂದರೆ ದಿನಾಂಕ: 01-07-2005ರಿಂದ ಅನ್ವಯ ವಾಗುವಂತೆ ಎಲ್ಲೆಲ್ಲಿ ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಪಡಿಸುವ ಸಂಬಂಧ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆಯಲು ಸಂಘ / ಸಂಸ್ಥೆ / ವ್ಯಕ್ತಿಗಳು ಮುಂದೆ ಬರುವುದಿಲ್ಲವೋ, ಅಂತಹ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್-ಕಂ-ಹರಾಜು ಮೂಲಕ ಹೆಚ್ಚಿನ ಪ್ರಚಾರ ನೀಡಿ ಗರಿಷ್ಟ 5 (ಐದು) ವರ್ಷಗಳ ಅವಧಿಗೆ

ವಿಲೇವಾರಿ ಮಾಡತಕ್ಕದ್ದು. ಈ ರೀತಿ ವಿಲೇವಾರಿ ಮಾಡಿದ ನಂತರ ಹಿಂದಿನ ವರ್ಷದ ಟೆಂಡರ್-ಕಂ-ಹರಾಜು ಗುತ್ತಿಗೆ ಮೊತ್ತಕ್ಕೆ ಪ್ರತೀವರ್ಷ ಶೇ.5ರಷ್ಟನ್ನು ಹೆಚ್ಚಿಸುವ ಷರತ್ತನ್ನು ವಿಧಿಸತಕ್ಕದ್ದು.

**ಸ್ಥಳೀಯ ಮೀನುಗಾರರಿಗೆ ಪರವಾನಗಿ:-**

**ಕಂಡಿಕೆ 6**:- ವಿಶೇಷ ಕಾರಣಾಂತರಗಳಿಂದಾಗಿ ಎಲ್ಲೆಲ್ಲಿ ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆ ಇಲಾಖೆಯಿಂದ ನೇರ ಗುತ್ತಿಗೆ ಆಧಾರದ ಮುಖಾಂತರವಾಗಲಿ ಅಥವಾ ಟೆಂಡರ್-ಕಂ-ಹರಾಜು ಮುಖಾಂತರವಾಗಲಿ ವಿಲೇವಾರಿ ಮಾಡಲು ಸಾಧ್ಯವಾಗದಿದ್ದ ಪಕ್ಷದಲ್ಲಿ, ಅಂತಹ ಜಲಸಂಪನ್ಮೂಲಗಳಲ್ಲಿನ ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆ ನಿರ್ದೇಶಕರ ಅನುಮತಿಯ ಮೇರೆಗೆ ಸ್ಥಳೀಯ ಮೀನುಗಾರರಿಗೆ ಪರವಾನಗಿ ಮುಖಾಂತರ ನೀಡಿ ಮೀನುಗಾರಿಕೆಯನ್ನು ಕೈಗೊಳ್ಳತಕ್ಕದ್ದು. ಇದರಿಂದ ಬರುವ ಆದಾಯವನ್ನು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು ಸರ್ಕಾರದ ಲೆಕ್ಕಕ್ಕೆ ಜಮಾ ಮಾಡಲು ಕ್ರಮ ವಹಿಸತಕ್ಕದ್ದು.

**ಜಲಾಶಯಗಳು:-**

**ಕಂಡಿಕೆ 7**:- ಈ ಆದೇಶದ **ಅನುಬಂಧ-3**ರಲ್ಲಿ ಕಾಣಿಸಿರುವ **ಜಲಾಶಯಗಳಲ್ಲಿ** ಮೀನುಗಾರಿಕೆ ಇಲಾಖೆಯ ವತಿಯಿಂದ ಮೀನುಮರಿ ಬಿತ್ತನೆ ಮಾಡಿ ಮೀನುಗಾರಿಕೆ ಅಭಿವೃದ್ಧಿಪಡಿಸಿ ಸ್ಥಳೀಯ ಮೀನುಗಾರರಿಗೆ ಮೀನುಗಾರಿಕೆ ಪರವಾನಗಿ ನೀಡುವುದರ ಮೂಲಕ ಮೀನುಗಾರಿಕೆಯನ್ನು ನಡೆಸತಕ್ಕದ್ದು. ಒಂದು ವೇಳೆ ಈ ಜಲಾಶಯಗಳಲ್ಲಿ ಮೀನುಗಾರಿಕೆಗಾಗಿ ಪರವಾನಗಿಗಳನ್ನು ಕೋರಿ ಸ್ಥಳೀಯ ಮೀನುಗಾರರಿಂದ ನಿಗದಿಪಡಿಸಿದಷ್ಟು ಅರ್ಜಿಗಳು ಮೀನುಗಾರಿಕೆ ಫಸಲಿ ವರ್ಷದ ಜುಲೈ 31ರೊಳಗಾಗಿ ಸ್ವೀಕೃತವಾಗದಿದ್ದಲ್ಲಿ, ಅಂತಹ ಜಲಾಶಯಗಳ ಹಾಗೂ ಉಳಿದ ಜಲಾಶಯಗಳ ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡುವ ಸಂಬಂಧ ಈಗಾಗಲೇ ಮೇಲಿನ ಕಂಡಿಕೆಯಲ್ಲಿ ನಿಗದಿಪಡಿಸಿರುವ ಆದ್ಯತೆಯನ್ನು ಅನುಸರಿಸಿ ಗರಿಷ್ಟ 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು ವಿಳಂಬಕ್ಕೆ ಆಸ್ಪದ ನೀಡದೆ ಕ್ರಮ ಜರುಗಿಸತಕ್ಕದ್ದು. ಒಂದು ವೇಳೆ ಗುತ್ತಿಗೆಗೆ ಪಡೆಯಲು ಕೂಡ ಅರ್ಜಿಗಳು ಬಾರದಿದ್ದ ಪಕ್ಷದಲ್ಲಿ, ಅಂತಹ ಜಲಾಶಯಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್-ಕಂ-ಹರಾಜು ಮುಖಾಂತರ ಗರಿಷ್ಠ 5 ವರ್ಷಗಳ ಅವಧಿಗೆ ವಿಲೇವಾರಿ ಮಾಡತಕ್ಕದ್ದು. ಈ ರೀತಿಯಾಗಿ ಗುತ್ತಿಗೆಗೆ ನೀಡುವಾಗ ಜಲಾಶಯದ ಶೇ.50ರಷ್ಟು ಜಲವಿಸ್ತೀರ್ಣವನ್ನು ಉಪಯುಕ್ತತಾ ಜಲವಿಸ್ತೀರ್ಣ ಪ್ರದೇಶವೆಂದು ಗಣನೆಗೆ ತೆಗೆದುಕೊಂಡು ಆ ರೀತಿ ಗಣನೆಗೆ ತೆಗೆದುಕೊಂಡ ಜಲವಿಸ್ತೀರ್ಣಕ್ಕೆ ಮೊದಲನೇ ವರ್ಷ ಪ್ರತಿ ಹೆಕ್ಟೇರ್‌ಗೆ ರೂ.150-00ರಂತೆ (ರೂಪಾಯಿ ಒಂದುನೂರ ಐವತ್ತು ಮಾತ್ರ) ಗುತ್ತಿಗೆ ಮೊತ್ತವನ್ನು ನಿಗದಿಪಡಿಸತಕ್ಕದ್ದು. ಉಳಿದ 4 ವರ್ಷಗಳ ಅವಧಿಯಲ್ಲಿ ಪ್ರತಿವರ್ಷ ಹಿಂದಿನ ವರ್ಷದ ಗುತ್ತಿಗೆ ಮೊತ್ತಕ್ಕೆ ಶೇ.5ರಂತೆ ಹೆಚ್ಚಿಸಿ ಗುತ್ತಿಗೆ ಮೊತ್ತವನ್ನು ನಿಗದಿಪಡಿಸತಕ್ಕದ್ದು.

**ನದಿಗಳು / ತೊರೆಗಳು / ಅಳಿವೆಗಳು:-**

**ಕಂಡಿಕೆ 8**:- ರಾಜ್ಯದಲ್ಲಿ ಹರಿಯುವ ನದಿಗಳಿಗೆ / ತೊರೆಗಳಿಗೆ / ಅಳಿವೆಗಳಿಗೆ ಸಂಬಂಧಪಟ್ಟಂತೆ ಮೀನು ಪಾಶುವಾರು ಹಕ್ಕನ್ನು ಸದರಿ ನದಿಗಳ / ತೊರೆಗಳ / ಅಳಿವೆಗಳ ಭಾಗಗಳ ಉದ್ದಳತೆಯನ್ನು ಗಣನೆಗೆ ತೆಗೆದುಕೊಂಡು ಪ್ರತಿ ಕಿ.ಮೀ. ಉದ್ದದ ನದಿಗಳ, ತೊರೆಗಳ ಹಾಗೂ ಅಳಿವೆಗಳ ಭಾಗಕ್ಕೆ ವಾರ್ಷಿಕ ಕನಿಷ್ಠ ರೂ.150-00ರಂತೆ (ರೂಪಾಯಿ ಒಂದುನೂರ ಐವತ್ತು ಮಾತ್ರ) ಮೊದಲನೇ ವರ್ಷ ಗುತ್ತಿಗೆ ಮೊತ್ತವನ್ನು ನಿಗದಿಪಡಿಸಿ ಮೇಲಿನ ಕಂಡಿಕೆಯಲ್ಲಿ ಸೂಚಿಸಿರುವಂತೆ ಆದ್ಯತೆ ಮೇರೆಗೆ ಗರಿಷ್ಠ 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡತಕ್ಕದ್ದು. ಗುತ್ತಿಗೆ ಅವಧಿಯಲ್ಲಿ ಪ್ರತಿವರ್ಷ ಹಿಂದಿನ ವರ್ಷದ ಗುತ್ತಿಗೆ ಮೊತ್ತಕ್ಕೆ ಶೇಕಡ 5ರಷ್ಟು ಹೆಚ್ಚಿಸಿ ಗುತ್ತಿಗೆ ಮೊತ್ತವನ್ನು ನಿಗದಿಪಡಿಸತಕ್ಕದ್ದು. **ಮೇಲಿನ ಆದ್ಯತೆಗೆ ಒಳಪಟ್ಟಂತೆ ನದಿಯ ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆ ಪದವೀಧರರಿಗೆ ಗುತ್ತಿಗೆಗೆ ನೀಡುವಾಗ ಗರಿಷ್ಠ 10 ಕಿ.ಮೀ. ಉದ್ದಳತೆಗೆ ಸೀಮಿತಗೊಳಿಸತಕ್ಕದ್ದು. ಮತ್ತು ಸಂಘ / ಸಂಸ್ಥೆಗಳಿಗೆ ಗುತ್ತಿಗೆಗೆ ನೀಡುವಾಗ ಗರಿಷ್ಠ 20 ಕಿ.ಮೀ. ಉದ್ದಳತೆಗೆ ಸೀಮಿತಗೊಳಿಸತಕ್ಕದ್ದು. ನದಿಗಳ / ತೊರೆಗಳ/ ಅಳಿವೆಗಳ ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆ ಇಲಾಖೆಯಿಂದ ಕೇವಲ ನೇರ ಗುತ್ತಿಗೆ ಮುಖಾಂತರ ಅಥವಾ ಸ್ಥಳೀಯ ಮೀನುಗಾರರಿಗೆ ಪರವಾನಗಿ ನೀಡುವ ಮುಖಾಂತರ ಮಾತ್ರ ವಿಲೇವಾರಿ ಮಾಡತಕ್ಕದ್ದು. ಟೆಂಡರ್-ಕಂ-ಹರಾಜು ಮುಖಾಂತರ ವಿಲೇ ಮಾಡತಕ್ಕದ್ದಲ್ಲ.**

**ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ:**

**ಕಂಡಿಕೆ 9**:- ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿಯಲ್ಲಿ ಒಳನಾಡು ಮೀನುಗಾರಿಕೆ ಬಗ್ಗೆ ತರಬೇತಿ ಪಡೆದ ಕನಿಷ್ಠ 4 ಫಲಾನುಭವಿಗಳ ಗುಂಪಿಗೆ ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿರುವ 40 ಹೆಕ್ಟೇರ್‌ವರೆಗಿನ ಜಲವಿಸ್ತೀರ್ಣದ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಲಭ್ಯತೆಗನುಗುಣವಾಗಿ ಗುತ್ತಿಗೆಗೆ ನೀಡತಕ್ಕದ್ದು. ಈ ರೀತಿ ಗುತ್ತಿಗೆಗೆ ನೀಡುವಾಗ ಪ್ರತಿ ಅಭ್ಯರ್ಥಿಗೆ ರೂ.250-00ರಂತೆ (ರೂಪಾಯಿ ಎರಡುನೂರ ಐವತ್ತು ಮಾತ್ರ) ವಾರ್ಷಿಕ ಗುತ್ತಿಗೆ ಮೊತ್ತವನ್ನು ನಿಗದಿಪಡಿಸಿ **ಗರಿಷ್ಟ 5 ವರ್ಷಗಳ ಅವಧಿಗೆ** ಗುತ್ತಿಗೆಗೆ ನೀಡತಕ್ಕದ್ದು.

**ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡುವ ಸಂಬಂಧ ಅಧಿಕಾರ ವಿಕೇಂದ್ರಿಕರಣ:-**

**ಕಂಡಿಕೆ 10**:- ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆ ಇಲಾಖೆಯಿಂದ ನೇರ ಗುತ್ತಿಗೆ ಮುಖಾಂತರ ಅಥವಾ ಟೆಂಡರ್-ಕಂ-ಹರಾಜು ಮುಖಾಂತರ ಹೊಸದಾಗಿ ವಿಲೇವಾರಿ ಮಾಡುವ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ ಸಂಬಂಧ ಕೆಳಕಂಡಂತೆ ಅಧಿಕಾರ ವಿಕೇಂದ್ರಿಕರಣಗೊಳಿಸಿ ಆದೇಶಿಸಿದೆ:-

1. ನೇರ ಗುತ್ತಿಗೆ ಪ್ರಸ್ತಾವನೆಗಳು:

| ಪ್ರಾಧಿಕಾರ | ಅಧಿಕಾರದ ಮಿತಿ (ವಾರ್ಷಿಕ ಗುತ್ತಿಗೆ ಮೊತ್ತ) |
|---|---|
| ಸರ್ಕಾರ | ರೂ.50,000-00 ಕ್ಕಿಂತ ಮೇಲ್ಪಟ್ಟು |
| ಮೀನುಗಾರಿಕೆ ನಿರ್ದೇಶಕರು | ರೂ.50,000-00 ವರೆಗೆ |
| ಮೀನುಗಾರಿಕೆ ಜಂಟಿ ನಿರ್ದೇಶಕರು | ರೂ.30,000-00 ವರೆಗೆ |
| ಮೀನುಗಾರಿಕೆ ಉಪ ನಿರ್ದೇಶಕರು | ರೂ.20,000-00 ವರೆಗೆ |
| ಜಿಲ್ಲಾ ಮಟ್ಟದ ಅಧಿಕಾರಿಗಳು | ರೂ.10,000-00 ವರೆಗೆ |

2. ಟೆಂಡರ್-ಕಂ-ಹರಾಜು ಪ್ರಸ್ತಾವನೆಗಳು:

| ಪ್ರಾಧಿಕಾರ | ಅಧಿಕಾರದ ಮಿತಿ (ವಾರ್ಷಿಕ ಗುತ್ತಿಗೆ ಮೊತ್ತ) |
|---|---|
| ಸರ್ಕಾರ | ರೂ.1.00 ಲಕ್ಷಕ್ಕಿಂತ ಮೇಲ್ಪಟ್ಟು |
| ಮೀನುಗಾರಿಕೆ ನಿರ್ದೇಶಕರು | ರೂ.1,00,000-00 ವರೆಗೆ |
| ಮೀನುಗಾರಿಕೆ ಜಂಟಿ ನಿರ್ದೇಶಕರು | ರೂ. 50,000-00 ವರೆಗೆ |
| ಮೀನುಗಾರಿಕೆ ಉಪ ನಿರ್ದೇಶಕರು | ರೂ. 30,000-00 ವರೆಗೆ |
| ಜಿಲ್ಲಾ ಮಟ್ಟದ ಅಧಿಕಾರಿಗಳು | ರೂ. 20,000-00 ವರೆಗೆ |

**ಮೀನು ಪಾಶುವಾರು ಹಕ್ಕಿನ ವಿಲೇವಾರಿಗೆ ಸಂಬಂಧಪಟ್ಟಂತೆ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗಳು ಕಡ್ಡಾಯವಾಗಿ ಪಾಲಿಸಬೇಕಾದ ವಿಧಿವಿಧಾನಗಳು ಮತ್ತು ಮಾರ್ಗಸೂಚಿಗಳು:-**

**ಕಂಡಿಕೆ 11**:- ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆ ಇಲಾಖೆಯ ಮುಖಾಂತರ ನೇರ ಗುತ್ತಿಗೆ ಆಧಾರದ ಮೇರೆಗೆ ಅಥವಾ ಟೆಂಡರ್-ಕಂ-ಹರಾಜು ಮೂಲಕ ವಿಲೇವಾರಿ ಮಾಡುವಾಗ ಅನುಕ್ರಮವಾಗಿ ಈ ಆದೇಶದ ಅನುಬಂಧ-1 ಮತ್ತು ಅನುಬಂಧ-2ರಲ್ಲಿ ಸೂಚಿಸಲಾಗಿರುವ ವಿಧಿವಿಧಾನಗಳನ್ನು ಮತ್ತು ಮಾರ್ಗಸೂಚಿಗಳನ್ನು ತಾಲ್ಲೂಕು ಮೀನುಗಾರಿಕೆ ಅಧಿಕಾರಿಗಳು ಕಡ್ಡಾಯವಾಗಿ ಚಾಚೂ ತಪ್ಪದೆ ಅಳವಡಿಸತಕ್ಕದ್ದು. ಈ ಆದೇಶದ ಅನುಬಂಧ-7ರಲ್ಲಿರುವ ನಿಗದಿತ ನಮೂನೆಯಲ್ಲಿ ಟೆಂಡರ್-ಕಂ-ಹರಾಜು ಪ್ರಕ್ರಿಯೆಯನ್ನು ಪ್ರಾರಂಭಿಸತಕ್ಕದ್ದು.

**ಮೀನುಗಾರಿಕೆ ಫಸಲಿ ವರ್ಷ:-**

**ಕಂಡಿಕೆ 12**:- **ಮೀನುಗಾರಿಕೆ ಫಸಲಿ ವರ್ಷವು ಜುಲೈ 1 ರಿಂದ ಮುಂದಿನ ವರ್ಷದ ಜೂನ್ 30ರವರೆಗಿನ ಅವಧಿಯಾಗಿರುತ್ತದೆ.** ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿನ ಮೀನುಗಾರಿಕೆ ಅಭಿವೃದ್ಧಿಗೆ ಯೋಗ್ಯವಾದ ಎಲ್ಲಾ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಅಥವಾ ಟೆಂಡರ್-ಕಂ-ಹರಾಜು ಮೂಲಕ ವಿಲೇವಾರಿ ಮಾಡಲು ಅಗತ್ಯ ಕ್ರಮ ಕೈಗೊಂಡು ವಿಲೇವಾರಿಯ ಪೂರ್ಣ ಪ್ರಕ್ರಿಯೆಯನ್ನು ಮೀನುಗಾರಿಕೆ ಫಸಲಿ ವರ್ಷದ ಆರಂಭದಿಂದ **ಗರಿಷ್ಠ 5 ತಿಂಗಳೊಳಗಾಗಿ ಅಂದರೆ ಜುಲೈ 1 ರಿಂದ ನವೆಂಬರ್ 30ರೊಳಗಾಗಿ** ಮುಗಿಸಿ ಮೇಲಾಧಿಕಾರಿಗಳ /ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಅಥವಾ ದೃಢೀಕರಣವನ್ನು ಪಡೆದುಕೊಳ್ಳತಕ್ಕದ್ದು. ಪ್ರತಿಯೊಂದು ಜಲಸಂಪನ್ಮೂಲದ ಪೂರ್ಣ ಪ್ರಸ್ತಾವನೆಯನ್ನು ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳ ಹಂತದ ಪ್ರಕ್ರಿಯೆಯು ಮುಗಿದ **8 ದಿನಗಳೊಳಗಾಗಿ** ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು. ಅದೇ ರೀತಿ, ಜಿಲ್ಲಾ ಮಟ್ಟದ ಮತ್ತು ವಲಯ ಮಟ್ಟದ ಮೀನುಗಾರಿಕೆ ಅಧಿಕಾರಿಗಳು ಪೂರ್ಣ ಪ್ರಸ್ತಾವನೆಗಳನ್ನು ಸದರಿ ಪ್ರಸ್ತಾವನೆಗಳು ಅವರಿಗೆ ತಲುಪಿದ **ಗರಿಷ್ಠ 10 ದಿನಗಳೊಳಗಾಗಿ** (ತಲಾ ಪ್ರಸ್ತಾವನೆ ತಲುಪಿದ ಗರಿಷ್ಠ 10 ದಿನಗಳೊಳಗಾಗಿ) ಸಕ್ಷಮ ಪ್ರಾಧಿಕಾರಕ್ಕೆ ಅನುಮೋದನೆಗಾಗಿ/ದೃಢೀಕರಣಕ್ಕಾಗಿ ಸಲ್ಲಿಸತಕ್ಕದ್ದು.

**ವಿಲೇವಾರಿ ವಿನಾಯಿತಿ**:-

**ಕಂಡಿಕೆ 13**:- ಅನಾವೃಷ್ಠಿಯಿಂದ ಒಳನಾಡು ಜಲಸಂಪನ್ಮೂಲಗಳಲ್ಲಿ ಸಾಕಷ್ಟು ನೀರು ಸಂಗ್ರಹಣೆಯಾಗದಿರುವುದು, ಅತೀವೃಷ್ಠಿಯಿಂದ ಕೆರೆಕಟ್ಟೆ ಒಡೆದುಹೋಗಿ ನೀರು ಸಂಪೂರ್ಣವಾಗಿ ಸೋರಿ ಹೋಗುವುದು, ಕೆರೆಗಳ ದುರಸ್ತಿ ಕೈಗೊಂಡಿರುವುದು, ಮುಂತಾದ ಕಾರಣಗಳಿಂದಾಗಿ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡಲು ಸಾಧ್ಯವಾಗದೇ ಇರುವ ಸಂದರ್ಭಗಳಲ್ಲಿ, ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳು ಅಂತಹ ಜಲಸಂಪನ್ಮೂಲಗಳಿಗೆ ಸಂಬಂಧಪಟ್ಟಂತೆ ವಿಲೇವಾರಿ ವಿನಾಯಿತಿ ಕೋರಿ ಪ್ರಸ್ತಾವನೆಗಳನ್ನು ಆಯಾ **ಮೀನುಗಾರಿಕೆ ಫಸಲಿ ವರ್ಷದ ಡಿಸೆಂಬರ್ ಮಾಹೆಯ ಅಂತ್ಯದೊಳಗಾಗಿ** ಸಕ್ಷಮ ಪ್ರಾಧಿಕಾರದ/ಮೇಲಾಧಿಕಾರಿಗಳ ಮುಖಾಂತರ ಮೀನುಗಾರಿಕೆ ನಿರ್ದೇಶಕರಿಗೆ ಸಲ್ಲಿಸಿ ವಿಲೇವಾರಿ ವಿನಾಯಿತಿ ಆದೇಶಗಳನ್ನು ಪಡೆದುಕೊಳ್ಳತಕ್ಕದ್ದು. ಮೀನುಗಾರಿಕೆ ನಿರ್ದೇಶಕರು ನಿಯಮಾನುಸಾರ ಕ್ರಮವಹಿಸಿ **ವಿಲೇವಾರಿ ವಿನಾಯಿತಿ ಆದೇಶಗಳನ್ನು ತಪ್ಪದೇ ಜನವರಿ ಅಂತ್ಯದೊಳಗಾಗಿ ಮೀನುಗಾರಿಕೆ ನಿರ್ದೇಶಕರು ಹೊರಡಿಸತಕ್ಕದ್ದು. ಇಂತಹ ಪ್ರಸ್ತಾವನೆಗಳನ್ನು ಸಲ್ಲಿಸುವ ಪೂರ್ವಭಾವಿಯಾಗಿ ಈ ಪ್ರಕರಣಗಳಲ್ಲಿ ತಾಲ್ಲೂಕು ಮಟ್ಟದ ಮತ್ತು ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳು ಅಥವಾ ಮೀನುಗಾರಿಕೆ ನಿರ್ದೇಶಕರಿಂದ ನಿಯೋಜಿಸಲ್ಪಟ್ಟ ಇಲಾಖಾ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಛಾಯಾಚಿತ್ರದೊಂದಿಗೆ ಮಹಜರು ಮಾಡಿರತಕ್ಕದ್ದು ಹಾಗೂ ಈ ಬಗ್ಗೆ ಮೀನುಗಾರಿಕೆ ನಿರ್ದೇಶಕರು ಕಾಲಕಾಲಕ್ಕೆ ಹೊರಡಿಸಿರುವ/ಹೊರಡಿಸುವ ಮಾರ್ಗಸೂಚಿಗಳನ್ನು ಪಾಲಿಸಿರತಕ್ಕದ್ದು.** ಇಲ್ಲದಿದ್ದಲ್ಲಿ, ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಯಾಗದೆ ಸರ್ಕಾರಕ್ಕೆ ಉಂಟಾಗುವ ಆರ್ಥಿಕ ನಷ್ಟಕ್ಕೆ ಸಂಬಂಧಪಟ್ಟ ತಾಲ್ಲೂಕು ಮಟ್ಟದ ಮತ್ತು ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳನ್ನು ಜಂಟಿ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು.

**ಕಂಡಿಕೆ 14** :- ಮೀನು ಪಾಶುವಾರು ಹಕ್ಕಿನ ವಿಲೇವಾರಿಗೆ ಸಂಬಂಧಿಸಿದಂತೆ ಮೀನುಗಾರಿಕೆ ಇಲಾಖೆಯ ಮುಖಾಂತರ ವಿಲೇವಾರಿಗೊಂಡ ಜಲಸಂಪನ್ಮೂಲಗಳ ವಿವರದ ಬಗ್ಗೆ, ಬಂದ ಆದಾಯದ ಬಗ್ಗೆ, ವಿಲೇವಾರಿಯಿಂದ ವಿನಾಯಿತಿ ನೀಡಲಾದ ಕೆರೆಗಳ ಬಗ್ಗೆ, ಇತ್ಯಾದಿ ಮಾಹಿತಿಯನ್ನು ಮೀನುಗಾರಿಕೆ ನಿರ್ದೇಶಕರು ಪ್ರತಿವರ್ಷ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

**ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯ ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡುವ ಸಂಬಂಧ ಗ್ರಾಮ ಪಂಚಾಯತ್‌ಗಳಿಗೆ ಅನ್ವಯವಾಗುವ ಮಾರ್ಗಸೂಚಿಗಳು :-**

**ಕಂಡಿಕೆ** 15 :- ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯ (40 ಹೆಕ್ಟೇರ್ ಮತ್ತು ಅದಕ್ಕಿಂತ ಕಡಿಮೆ ಅಚ್ಚುಕಟ್ಟು ಪ್ರದೇಶದ - ಆದರೆ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳ ವ್ಯಾಪ್ತಿಗೆ ಒಳಪಡುವ 10 ಹೆಕ್ಟೇರ್‌ವರೆಗಿನ ಜಲವಿಸ್ತೀರ್ಣದ ಒಳನಾಡು ಜಲಸಂಪನ್ಮೂಲಗಳನ್ನು ಹೊರತುಪಡಿಸಿ) ಕೆರೆಗಳ ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡುವ ಸಂಬಂಧ ಗ್ರಾಮ ಪಂಚಾಯತ್‌ಗಳಿಗೆ ಅನ್ವಯವಾಗುವ ಮಾರ್ಗಸೂಚಿಗಳು:-

1) ಮೀನು ಪಾಶುವಾರು ಹಕ್ಕಿನ ವಿಲೇವಾರಿಗಾಗಿ ಮೀನುಗಾರಿಕೆ ಫಸಲಿ ವರ್ಷವು ಜುಲೈ 1 ರಿಂದ ಮರು ವರ್ಷದ ಜೂನ್ 30ರವರೆಗೆ ಇರುವುದು.

2) ಮೀನು ಕೃಷಿ ಮಾಡಲು ಗ್ರಾಮ ಪಂಚಾಯತ್‌ಗಳು ಮೀನುಗಾರಿಕೆ ಇಲಾಖೆಯಿಂದ ತಾಂತ್ರಿಕ ಸಹಾಯ, ಸಹಕಾರ ಮತ್ತು ಮಾರ್ಗದರ್ಶನ ಪಡೆಯುವುದು.

3) ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಗೆ ಬರುವ ಕೆರೆಗಳಲ್ಲಿ ಮೀನುಗಾರಿಕೆಯನ್ನು ಗ್ರಾಮ ಪಂಚಾಯತ್‌ಗಳೇ ಸ್ಥಳೀಯ ಮೀನುಗಾರರ ಮುಖಾಂತರ ಅಭಿವೃದ್ಧಿಪಡಿಸಬಹುದು ಅಥವಾ ಸ್ಥಳೀಯ ಮೀನುಗಾರಿಕೆ ಸಹಕಾರ ಸಂಘಗಳ ಮೂಲಕ ಅಭಿವೃದ್ಧಿಪಡಿಸಬಹುದು. ಇಲ್ಲವಾದಲ್ಲಿ, ಬಹಿರಂಗವಾಗಿ ಟೆಂಡರ್-ಕಂ-ಹರಾಜು ಮೂಲಕ ವಿಲೇವಾರಿ ಮಾಡಬಹುದು. ಯಶಸ್ವಿ ಟೆಂಡರ್‌ದಾರರು/ಬಿಡ್‌ದಾರರು ತಮ್ಮ ಜಿಲ್ಲೆಯಲ್ಲಿರುವ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯಿಂದ ಮೀನುಗಾರಿಕೆಯಲ್ಲಿ ತರಬೇತಿ ಪಡೆದು ಮೀನು ಕೃಷಿ ಬಗ್ಗೆ ತಾಂತ್ರಿಕ ಜ್ಞಾನ ಮತ್ತು ಸದರಿ ಸಂಸ್ಥೆಯಿಂದ ದೊರೆಯುವ ಸೌಲಭ್ಯಗಳನ್ನು ಪಡೆಯಬಹುದು.

4) ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವ ಜಿಲ್ಲೆಗಳಲ್ಲಿ ಆಯಾ ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಗೆ ಬರುವ ಕೆರೆಗಳ ಪೈಕಿ ಒಂದು ಕೆರೆಯಲ್ಲಿ ಮೀನು ಕೃಷಿ ಕೈಗೊಳ್ಳಲು ಪ್ರತಿವರ್ಷ ತಲಾ 2 ನಿರುದ್ಯೋಗಿ ಯುವಕ/ಯುವತಿಯರನ್ನು ಆಯಾ ಗ್ರಾಮ ಪಂಚಾಯತ್‌ಗಳು ಆಯ್ಕೆ ಮಾಡಿ ಭಾರತ ಸರ್ಕಾರದ ಯೋಜನೆಯ ಲಾಭವನ್ನು ಪಡೆಯಲು ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳಿಗೆ ಮೀನುಗಾರಿಕೆ ತರಬೇತಿಗಾಗಿ ಕಳುಹಿಸುವುದು. ತರಬೇತಿ ನಂತರ ಆಯ್ಕೆ ಮಾಡಿದ ಕೆರೆಗಳ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ತರಬೇತಿ ಪಡೆದವರಿಗೆ ಆದ್ಯತೆ ಮೇರೆಗೆ

ನೀಡುವುದು. ಕೆರೆಗಳ ಗುತ್ತಿಗೆ ಮೊತ್ತವನ್ನು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳು ಕೆರೆಗಳ ಜಲವಿಸ್ತೀರ್ಣದ ಆಧಾರದ ಮೇರೆಗೆ ಈ ಆದೇಶದಲ್ಲಿನ ಗುತ್ತಿಗೆ ದರದಂತೆ ನಿಗದಿಗೊಳಿಸುವುದು.

5) ವಿಲೇ ಮಾಡಿದ ಮೀನು ಪಾಶುವಾರು ಹಕ್ಕನ್ನು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳೇ ದೃಢೀಕರಿಸುವುದು.

6) ಗ್ರಾಮ ಪಂಚಾಯತ್‌ಗಳು ಮತ್ತು ಬಹಿರಂಗವಾಗಿ ಟೆಂಡರ್-ಕಂ-ಹರಾಜು ಮೂಲಕ ಗುತ್ತಿಗೆಗೆ ಪಡೆದವರು ಸ್ಥಳೀಯ ಮೀನುಗಾರಿಕೆ ಅಧಿಕಾರಿಗಳ ಶಿಫಾರಸ್ಸಿನಂತೆ ಮೀನುಗಾರಿಕೆ ಇಲಾಖೆಯಿಂದಲೇ ಅಥವಾ ಮೀನುಗಾರಿಕೆ ಇಲಾಖೆಯಿಂದ ಅಂಗೀಕೃತಗೊಂಡ ಮೀನುಮರಿ ಉತ್ಪಾದನಾ/ಪಾಲನಾ ಕೇಂದ್ರಗಳಿಂದ ಮೀನುಮರಿಗಳನ್ನು ಖರೀದಿಸಿ ಕೆರೆಗಳಲ್ಲಿ ಬಿತ್ತನೆ ಮಾಡುವುದು. ಮೀನುಗಾರಿಕೆ ಇಲಾಖೆಯಲ್ಲಿ ಮೀನು ಮರಿಗಳು ಸಿಗದಿದ್ದಲ್ಲಿ, ಖಾಸಗಿ ಮೀನುಮರಿ ಉತ್ಪಾದನಾ ಕೇಂದ್ರಗಳಿಂದ ಅಥವಾ ಹೊರ ರಾಜ್ಯದಿಂದ ಖರೀದಿಸಬಹುದು.

7) ನಿಷೇಧಿತ ಮೀನು ತಳಿಗಳಾದ ತಿಲಾಪಿಯ (ಜಿಲೇಬಿ) ಜಾತಿಯ ಮೀನುಗಳು, ವಿದೇಶಿ ಕ್ಯಾಟ್‌ಫಿಶ್‌ಗಳಾದ ಆಫ್ರಿಕನ್ ಕ್ಯಾಟ್ ಫಿಶ್ (ಅಣೆ ಮೀನು) ಮತ್ತು ಪಂಗೇಷಿಯಸ್ ಜಾತಿಯ ಮೀನು, ಚೈನೀಸ್ ಬಿಗ್ ಹೆಡ್ (ಅರೀಸ್ ದತ್ತೀಸ್ ನೊಬಲಿಸ್), ಇತ್ಯಾದಿ ತಳಿಯ ಮೀನು ಮರಿಗಳನ್ನು ಮತ್ತು ಸ್ಥಳೀಯ ಮೀನು ಸಂತತಿಯ ನಾಶಕ್ಕೆ ಕಾರಣವಾಗುವ ಮೀನು ತಳಿಗಳನ್ನು ಯಾವುದೇ ಕಾರಣಕ್ಕೂ ಕೆರೆಗಳಿಗೆ ಬಿತ್ತನೆ ಮಾಡತಕ್ಕದ್ದಲ್ಲ.

8) ಕೆರೆಗಳಲ್ಲಿ ಸಿಡಿಮದ್ದು ಮತ್ತು ವಿಷಪ್ರಯೋಗ ಮಾಡಿ ಮೀನು ಹಿಡಿಯುವುದನ್ನು ನಿಷೇಧಿಸತಕ್ಕದ್ದು.

9) ಗ್ರಾಮ ಪಂಚಾಯತ್‌ಗಳು ಅಥವಾ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಪಡೆದವರು ಕೆರೆಗಳಿಗೆ ದಾಸ್ತಾನು ಮಾಡಿದ ಮೀನುಮರಿಗಳ ವಿವರ ಮತ್ತು ಮೀನು ಹಿಡುವಳಿ ಮಾಡಿದ ಅಂಕಿಅಂಶಗಳನ್ನು ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ ಪ್ರತಿ ತಿಂಗಳ ಮೊದಲನೇ ವಾರದೊಳಗಾಗಿ ಒಪ್ಪಿಸುವುದು. ಈ ವಿವರಗಳನ್ನು ಗ್ರಾಮ ಪಂಚಾಯತ್ ಮತ್ತು ಗ್ರಾಮ ಸಭೆಗಳಿಗೂ ಮಾಹಿತಿಗಾಗಿ ಒಪ್ಪಿಸುವುದು.

10) ಕೆರೆಗಳ ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡಿದ ಬಗ್ಗೆ, ಗಳಿಸಿದ ಆದಾಯದ ಬಗ್ಗೆ ಮತ್ತು ಉದ್ಯೋಗಾವಕಾಶದ ವಿವರಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳು ಪ್ರತಿ ತಿಂಗಳು ಮೊದಲನೆಯ ವಾರದೊಳಗೆ ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ ತಪ್ಪದೆ ಕಳುಹಿಸುವುದು. ಈ ವಿವರಗಳನ್ನು ಸಹ ಗ್ರಾಮ ಪಂಚಾಯತ್ ಮತ್ತು ಗ್ರಾಮ ಸಭೆಗಳಿಗೂ ಮಾಹಿತಿಗಾಗಿ ಸಲ್ಲಿಸಬೇಕು.

11) ಗ್ರಾಮ ಪಂಚಾಯತ್ ವ್ಯಾಪ್ತಿಗೆ ಬರುವ ಎಲ್ಲಾ ಕೆರೆಗಳಲ್ಲಿ ವೈಜ್ಞಾನಿಕವಾಗಿ ಮೀನು ಕೃಷಿ ಕೈಗೊಂಡು ಅಧಿಕ ಮೀನು ಉತ್ಪತ್ತಿ ಮಾಡಿ ಹೆಚ್ಚಿನ ಆದಾಯ ಪಡೆಯಲು ಕಾಲಕಾಲಕ್ಕೆ ತಾಲ್ಲೂಕು ಮಟ್ಟದ ಮೀನುಗಾರಿಕೆ ಇಲಾಖೆಯ ಅಧಿಕಾರಿಗಳು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಗೆ ಭೇಟಿ ನೀಡಿ ಸಲಹೆ ಮತ್ತು ಮಾರ್ಗದರ್ಶನ ನೀಡುವುದು.

12) ಈಗಾಗಲೇ ಮೀನುಗಾರಿಕೆ ಇಲಾಖೆಯಿಂದ/ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳಿಂದ/ ಜಿಲ್ಲಾ ಪಂಚಾಯತ್‌ಗಳಿಂದ ವಿಲೇವಾರಿ ಮಾಡಿರುವ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಅವುಗಳ ಗುತ್ತಿಗೆ ಅವಧಿಯು ಪೂರ್ಣವಾಗಿ ಮುಗಿಯುವವರೆಗೆ ಅದೇ ಫಲಾನುಭವಿಗಳನ್ನು ಗ್ರಾಮ ಪಂಚಾಯತ್‌ಗಳು ಮುಂದುವರಿಸಬೇಕು.

13) ಸರ್ಕಾರದ ವಿಶೇಷ ಯೋಜನೆಗಳಡಿ (ವಿಶೇಷ ಘಟಕ ಯೋಜನೆಯಡಿ ಮತ್ತು ಗಿರಿಜನ ಉಪ ಯೋಜನೆಯಡಿ) ಗುರುತಿಸಿದ ಫಲಾನುಭವಿಗಳಿಗೆ ಕೆರೆಗಳನ್ನು ಆದ್ಯತೆಯ ಮೇರೆಗೆ ಐದು ವರ್ಷಗಳವರೆಗೆ ಗುತ್ತಿಗೆಗೆ ನೀಡುವುದು.

14) ಸ್ಥಳೀಯ ಕೆರೆ ಅಭಿವೃದ್ಧಿ ಸಂಘ / ಕೆರೆ ನಿರ್ವಹಣಾ ಸಂಘ / ಜಲ ಸಂವರ್ಧನೆ ಯೋಜನೆಯಡಿ ನೋಂದಾಯಿಸಿದ ಸಂಘ ಸಂಸ್ಥೆಗಳಿಗೂ ಆದ್ಯತೆಯ ಮೇರೆಗೆ ಕೆರೆಗಳ ಗುತ್ತಿಗೆ ನೀಡುವುದು.

15) ಈ ಆದೇಶದಲ್ಲಿ ತಿಳಿಸದೇ ಇರುವ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಹಾಗೂ ಮೀನುಗಾರಿಕೆ ಇಲಾಖೆಯಿಂದ ಕಾಲಕಾಲಕ್ಕೆ ಹೊರಡಿಸಲಾದ/ ಹೊರಡಿಸುವ ಆದೇಶಗಳನ್ನು / ಸೂಚನೆಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳತಕ್ಕದ್ದು.

**ಕಂಡಿಕೆ 16 :-** ಈ ಆದೇಶದಲ್ಲಿನ ನಿಯಮಗಳ ಬಗ್ಗೆ ಸ್ಪಷ್ಟೀಕರಣವು ಅಗತ್ಯವೆನಿಸಿದಲ್ಲಿ ಸರ್ಕಾರದಿಂದ ಪಡೆಯತಕ್ಕದ್ದು. ಸರ್ಕಾರದ ನಿರ್ಣಯವೇ ಅಂತಿಮವಾಗಿರುತ್ತದೆ.

ಈ ಆದೇಶವನ್ನು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ, ಜಲಸಂಪನ್ಮೂಲ ಇಲಾಖೆಯ (ಸಣ್ಣ ನೀರಾವರಿ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹಾಗೂ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಜಿ.ರಾಜು ಪ್ರೇಂಕುಮಾರ್**

ಸರ್ಕಾರದ ಪ್ರಧಾನ ಕಾರ್ಯದರ್ಶಿ

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

**ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ/167/ಮೀಇಇ/2005 ದಿನಾಂಕ:28-1-2006 ರ**

**ಅನುಬಂಧ-1**

**ಒಳನಾಡು ಜಲಸಂಪನ್ಮೂಲಗಳಲ್ಲಿನ ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆ ಇಲಾಖೆಯಿಂದ ನೇರ ಗುತ್ತಿಗೆ ಮುಖಾಂತರ ವಿಲೇವಾರಿ ಮಾಡುವ ಸಂಬಂಧ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗಳು ಕಡ್ಡಾಯವಾಗಿ ಪಾಲಿಸಬೇಕಾದ ವಿಧಿವಿಧಾನಗಳು ಮತ್ತು ಮಾರ್ಗಸೂಚಿಗಳು**

**ಕಂಡಿಕೆ 1**:- ತಾಲ್ಲೂಕು ಮೀನುಗಾರಿಕೆ ಅಧಿಕಾರಿಗಳು ಪ್ರತಿ ಮೀನುಗಾರಿಕೆ ಫಸಲಿ ವರ್ಷದ ಜೂನ್ ತಿಂಗಳ ಮೊದಲನೇ ವಾರದಲ್ಲಿ ತಮ್ಮ ವ್ಯಾಪ್ತಿಗೆ ಬರುವ ಜಲಸಂಪನ್ಮೂಲಗಳ ಪೈಕಿ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ನೀಡಲು ಲಭ್ಯವಿರುವ ಜಲಸಂಪನ್ಮೂಲಗಳ ಪಟ್ಟಿಯನ್ನು ತಯಾರು ಮಾಡಿ ಆದ್ಯತೆಯಲ್ಲಿ ನಮೂದಿಸಿರುವ ಸಂಘ/ಸಂಸ್ಥೆ/ವ್ಯಕ್ತಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು **ಅನುಬಂಧ-4**ರಲ್ಲಿರುವ ನಿಗದಿತ ನಮೂನೆಯಲ್ಲಿ ಪ್ರಕಟಣೆಯನ್ನು ಹೊರಡಿಸತಕ್ಕದ್ದು. ಪ್ರಕಟಣೆಯ ಪ್ರತಿಗಳನ್ನು ಕೆರೆಯ ವ್ಯಾಪ್ತಿಯ ಸಂಬಂಧಪಟ್ಟ ಎಲ್ಲಾ ಗ್ರಾಮ ಪಂಚಾಯತ್‌ಗಳ, ತಾಲ್ಲೂಕು ಪಂಚಾಯತ್‌ಗಳ, ತಾಲ್ಲೂಕಿನ ತಹಶೀಲ್ದಾರರ ಕಛೇರಿಯ ಮತ್ತು ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿ ಕಛೇರಿಯ ಜಾಹೀರಾತು ಫಲಕಗಳಲ್ಲಿ ಪ್ರದರ್ಶಿಸುವ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡತಕ್ಕದ್ದು. ಈ ಆದೇಶದ **ಅನುಬಂಧ-5**ರಲ್ಲಿನ ನಿಗದಿತ ನಮೂನೆಯಲ್ಲಿ ನೇರ ಗುತ್ತಿಗೆಯನ್ನು ಕೋರಿ ಬರುವ **ಅರ್ಜಿಗಳನ್ನು**

**ಸ್ವೀಕರಿಸಲು ಆಗಸ್ಟ್ 31ರ ಅಂತಿಮ ಗಡುವು ನೀಡತಕ್ಕದ್ದು.** ಈ ಪ್ರಕ್ರಿಯೆಯು ನೇರ ಗುತ್ತಿಗೆ/ಟೆಂಡರ್-ಕಂ-ಹರಾಜಿನ ಮುಖಾಂತರ ವಿಲೇವಾರಿ ಮಾಡಲಾದ ಗುತ್ತಿಗೆಯನ್ನು ನಿಗದಿತ ವೇಳೆಯೊಳಗಾಗಿ ಗುತ್ತಿಗೆದಾರರು ನವೀಕರಣಗೊಳಿಸದಿದ್ದ ಪ್ರಕರಣಗಳಿಗೂ ಅನ್ವಯಿಸುತ್ತದೆ.

**ಕಂಡಿಕೆ 2**:- ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆಯಲು ಆದ್ಯತೆಯನ್ನು ಹೊಂದಿರುವ ಮೀನುಗಾರರ ಸಹಕಾರ ಸಂಘಗಳು ಅಥವಾ ಇತರೆ ಸಂಘ/ಸಂಸ್ಥೆಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿರುವ **ಗರಿಷ್ಠ 300 ಹೆಕ್ಟೇರ್ ಜಲವಿಸ್ತೀರ್ಣಕ್ಕೆ ಮೀರದಂತೆ** ಗರಿಷ್ಠ 5 ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಮಾತ್ರ ಪಡೆಯಲು ಅರ್ಹತೆಯನ್ನು ಹೊಂದಿರುತ್ತವೆ. 300 ಹೆಕ್ಟೇರ್ ಜಲವಿಸ್ತೀರ್ಣ ಮೀರಿದ ಜಲಸಂಪನ್ಮೂಲಗಳಿದ್ದ ಸಂದರ್ಭದಲ್ಲಿ ಕೇವಲ ಒಂದು ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಮಾತ್ರ ಗುತ್ತಿಗೆಗೆ ಪಡೆಯಲು ಸದರಿ ಸಂಘ/ಸಂಸ್ಥೆಗಳು ಅರ್ಹತೆಯನ್ನು ಹೊಂದಿರುತ್ತವೆ.

**ಕಂಡಿಕೆ 3**:- ಹೊಸದಾಗಿ ನೋಂದಾಯಿಸಲ್ಪಟ್ಟ ಮೀನುಗಾರರ ಸಹಕಾರ ಸಂಘಗಳು ಮತ್ತು ಇತರೆ ಸಂಘ/ಸಂಸ್ಥೆಗಳು ನೋಂದಾಯಿಸಲ್ಪಟ್ಟ ದಿನಾಂಕದಿಂದ **ಒಂದು ವರ್ಷದ** ನಂತರ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆಯಲು ಅರ್ಹತೆಯನ್ನು ಹೊಂದುತ್ತವೆ (ಜಲ ಸಂವರ್ಧನೆ **ಯೋಜನಾ ಸಂಘದ ಕಾರ್ಯಕ್ರಮವು ವಿಶ್ವ ಬ್ಯಾಂಕಿನ ನೆರವಿನಡಿ ಹಮ್ಮಿಕೊಂಡಿರುವ ಕಾಲಮಿತಿ ಯೋಜನೆಯಾಗಿರುವುದರಿಂದ, ಈ ನಿಯಮವು ಜಲ ಸಂವರ್ಧನೆ ಯೋಜನಾ ಸಂಘದಡಿ ನೋಂದಾಯಿಸಲ್ಪಟ್ಟ ಸಂಘಗಳಿಗೆ ಅನ್ವಯಿಸುವುದಿಲ್ಲ**).

**ಕಂಡಿಕೆ 4**:- ಕೆರೆಗಳ ಮೀನು ಪಾಶವಾರು ಹಕ್ಕನ್ನು ಗುತ್ತಿಗೆಗೆ ಕೋರಿರುವ ಆಯಾ ಸಂಘ ಸಂಸ್ಥೆಗಳ ಇತ್ತೀಚಿನ ಆಡಿಟ್ ವರದಿ, ಸಂಘದ ಠರಾವು, ಬೈಲಾ ಪ್ರತಿ, ಮೀನುಗಾರಿಕೆ ಚಟುವಟಿಕೆಯನ್ನು ಕೈಗೊಂಡಿದ್ದಲ್ಲಿ ಕೆರೆವಾರು ಮೀನುಮರಿ ಬಿತ್ತನೆಯ ವಿವರಗಳನ್ನು, ಹಿಡುವಳಿಯ ವಿವರಗಳನ್ನು ಮತ್ತು ಗಳಿಸಿದ ಆದಾಯದ ವಿವರಗಳನ್ನು ಪಡೆದು ತುಲಾನಾತ್ಮಕವಾಗಿ ಪರಿಶೀಲಿಸಿ ಅರ್ಜಿ ಮತ್ತು ಎಲ್ಲಾ ದಾಸ್ತಾವೇಜುಗಳೊಡನೆ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು ಸ್ಪಷ್ಟವಾದ ವರದಿಯನ್ನು ತಯಾರು ಮಾಡಿ ಪೂರ್ಣ ಮಾಹಿತಿಯೊಂದಿಗೆ ಸೂಕ್ತ ಪ್ರಸ್ತಾವನೆಯನ್ನು **ಮೀನುಗಾರಿಕೆ ಫಸಲಿ ವರ್ಷದ ಸೆಪ್ಟೆಂಬರ್ ತಿಂಗಳಿನ 15ನೇ ತಾರೀಖಿನೊಳಗಾಗಿ ಮೇಲಾಧಿಕಾರಿಗೆ ಸಲ್ಲಿಸತಕ್ಕದ್ದು.** ಮೊದಲನೇ ವರ್ಷದ ಗುತ್ತಿಗೆ ಹಣವನ್ನು ಅರ್ಜಿ ಸಲ್ಲಿಸಿದ ಎಲ್ಲಾ ಸಂಘಗಳಿಂದ/ ಸಂಸ್ಥೆಗಳಿಂದ/ವ್ಯಕ್ತಿಯಿಂದ ಮುಂಗಡವಾಗಿ ನಗದು ಹುಂಡಿ (D.D.) ಮುಖಾಂತರ ಸ್ವೀಕರಿಸಿ **ತಾತ್ಕಾಲಿಕ ರಶೀದಿಯನ್ನು** ನೀಡತಕ್ಕದ್ದು. ತಾತ್ಕಾಲಿಕ ರಶೀದಿಯ ಮೇಲೆ **"ಗುತ್ತಿಗೆಯು ಮೇಲಾಧಿಕಾರಿಗಳ ದೃಢೀಕರಣಕ್ಕೆ ಒಳಪಟ್ಟಿದೆ"** ಎಂದು ನಮೂದಿಸತಕ್ಕದ್ದು. ಗುತ್ತಿಗೆ ಆದೇಶ ಬಂದನಂತರ, ಯಶಸ್ವಿಯಾಗದ ಸಂಘಗಳ/ಸಂಸ್ಥೆಗಳ/ವ್ಯಕ್ತಿಯ ನಗದು ಹುಂಡಿಯನ್ನು ನಿಯಮಾನುಸಾರ ಅವರಿಂದ ಸ್ವೀಕೃತಿ ಪಡೆದು ಹಿಂದಿರುಗಿಸತಕ್ಕದ್ದು.

**ಕಂಡಿಕೆ 5**:- ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆದ ಯಾವುದೇ ಗುತ್ತಿಗೆದಾರರು ನಿಷೇಧಿತ ಮೀನುಗಳಾದ ಪ್ರಮುಖವಾಗಿ ಆಫ್ರಿಕನ್ ಕ್ಯಾಟ್ ಫಿಶ್ (ಅಣೆ ಮೀನು), ಪಂಗೇಷಿಯಸ್ ಜಾತಿಯ ಮೀನು, ಚೈನೀಸ್ ಬಿಗ್ ಹೆಡ್, ತಿಲಾಪಿಯಾ (ಜಿಲೇಬಿ), ಇತ್ಯಾದಿ ನಿಷೇದಿತ ತಳಿಗಳ ಮೀನುಮರಿಗಳನ್ನು ಬಿತ್ತನೆ ಮಾಡುವುದು ಅಥವಾ ಅಭಿವೃದ್ಧಿಪಡಿಸುವುದು ಅಥವಾ ಮಾರಾಟ ಮಾಡುವುದು ಕಂಡುಬಂದಲ್ಲಿ, ಅವರಿಗೆ ನೀಡಲಾದ ಗುತ್ತಿಗೆಯನ್ನು ಕೂಡಲೇ ರದ್ದುಪಡಿಸುವ ಮತ್ತು ಆ ಸಾಲಿನ ಗುತ್ತಿಗೆ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರವನ್ನು ಮೀನುಗಾರಿಕೆ ಇಲಾಖೆ ಹೊಂದಿರುತ್ತದೆ. ಗುತ್ತಿಗೆದಾರರಿಂದ ಈ ನಿಷೇದಿತ ಮೀನುಮರಿಗಳ ಅಭಿವೃದ್ಧಿ, ಪಾಲನೆ ಮತ್ತು ಮಾರಾಟ ಮಾಡುವುದು ಕಂಡುಬಂದಲ್ಲಿ ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯನ್ನು ಜವಾಬ್ದಾರರನ್ನಾಗಿ ಮಾಡಿ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

**ಕಂಡಿಕೆ 6** :- ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ನೀಡಿದ ಎರಡನೇ ವರ್ಷದಿಂದ 5 ವರ್ಷಗಳ ಗುತ್ತಿಗೆ ಅವಧಿಯಲ್ಲಿ ಪ್ರತೀವರ್ಷ ಗುತ್ತಿಗೆಯನ್ನು ನವೀಕರಿಸುವ ಅಧಿಕಾರವನ್ನು ಜಿಲ್ಲಾ ಮೀನುಗಾರಿಕೆ ಅಧಿಕಾರಿಗಳಿಗೆ ನೀಡಲಾಗಿದೆ. ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಪ್ರತಿವರ್ಷ ಪೂರ್ಣ ಗುತ್ತಿಗೆ ಮೊತ್ತವನ್ನು ಮೀನುಗಾರಿಕೆ ಫಸಲಿ ವರ್ಷದ ಪ್ರಾರಂಭದಲ್ಲಿ ಅಂದರೆ ಜುಲೈ 31ರೊಳಗಾಗಿ ಪಾವತಿ ಮಾಡಿ ಗುತ್ತಿಗೆಯನ್ನು ನವೀಕರಿಸಿಕೊಳ್ಳತಕ್ಕದ್ದು. ಒಂದು ವೇಳೆ ಗುತ್ತಿಗೆದಾರರು ಗುತ್ತಿಗೆ ಮೊತ್ತವನ್ನು ನಿಗದಿತ ವೇಳೆಯೊಳಗಾಗಿ ಪಾವತಿಸದಿದ್ದಲ್ಲಿ ಹಾಗೂ ಇಲಾಖಾ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ಆದೇಶವನ್ನು ರದ್ದುಪಡಿಸುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರ ಹೊಂದಿರುತ್ತದೆ. ಸದರಿ ಕೆರೆಯ ಮೀನು ಪಾಶುವಾರು ಹಕ್ಕನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆಗೆ ಒಳಪಟ್ಟಂತೆ ಮರುವಿಲೇಗೊಳಿಸುವ ಅಧಿಕಾರವನ್ನು ಜಿಲ್ಲಾ ಮೀನುಗಾರಿಕೆ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಿದೆ.

**ಕಂಡಿಕೆ 7** :- ಗುತ್ತಿಗೆಗೆ ಪಡೆದ ಮೀನು ಪಾಶುವಾರು ಹಕ್ಕನ್ನು ಯಾವುದೇ ಕಾರಣಕ್ಕಾಗಿ ವರ್ಗಾಯಿಸತಕ್ಕದ್ದಲ್ಲ. ಹಾಗೂ ಉಪ ಗುತ್ತಿಗೆಗೆ ನೀಡತಕ್ಕದ್ದಲ್ಲ.

**ಕಂಡಿಕೆ 8** :- ಗುತ್ತಿಗೆದಾರರು ಗುತ್ತಿಗೆ ಪಡೆದ ಜಲಸಂಪನ್ಮೂಲದಲ್ಲಿ ಮೀನುಗಾರಿಕೆ ಚಟುವಟಿಕೆಯನ್ನು ಕೈಗೊಳ್ಳುವಾಗ ಸದರಿ ಜಲಸಂಪನ್ಮೂಲದ ಕಟ್ಟೆ, ಏರಿ, ತೂಬು, ಮುಂತಾದವುಗಳಿಗೆ ಯಾವುದೇ ರೀತಿಯ ಹಾನಿಯುಂಟಾಗದಂತೆ ನೋಡಿಕೊಳ್ಳತಕ್ಕದ್ದು.

**ಕಂಡಿಕೆ 9** :- ಗುತ್ತಿಗೆಗೆ ಪಡೆದ ಜಲಸಂಪನ್ಮೂಲಗಳಲ್ಲಿ ಗುತ್ತಿಗೆದಾರರು ಡೈನಾಮೈಟ್, ಸಿಡಿಮದ್ದಿನ ಅಥವಾ ವಿಷದ ಪ್ರಯೋಗವನ್ನಾಗಲಿ ಮಾಡಿ ಮೀನು ಹಿಡಿಯತಕ್ಕದ್ದಲ್ಲ. ಈ ನಿಬಂಧನೆಯನ್ನು ಉಲ್ಲಂಘಿಸಿದ ಗುತ್ತಿಗೆದಾರರ ಗುತ್ತಿಗೆಯನ್ನು ತತ್‌ಕ್ಷಣದಿಂದ ರದ್ದುಪಡಿಸಿ ಅವರ ವಿರುದ್ಧ ಕಾನೂನಿನ ಕ್ರಮ ಕೈಗೊಳ್ಳತಕ್ಕದ್ದು.

**ಕಂಡಿಕೆ 10**:- ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿನ ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಗೆ ಸಂಬಂಧಪಟ್ಟಂತೆ ರೂಪಿಸಲಾಗಿರುವ ಯಾವುದೇ ನಿಯಮಗಳನ್ನು ಉಲ್ಲಂಘಿಸಿದ ಗುತ್ತಿಗೆದಾರರ ಗುತ್ತಿಗೆಯನ್ನು ತತ್‌ಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸತಕ್ಕದ್ದು. ಹಾಗೂ ಸರ್ಕಾರವು/ಮೀನುಗಾರಿಕೆ ಇಲಾಖೆಯ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ವಿಧಿಸಬಹುದಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳಿಗೆ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು. ಈ ದಿಸೆಯಲ್ಲಿ ಈ ಆದೇಶದ **ಅನುಬಂಧ-6** ರಲ್ಲಿರುವ ನಿಗದಿತ ನಮೂನೆಯಲ್ಲಿರುವಂತೆ ಮುಚ್ಚಳಿಕೆ ಪತ್ರವನ್ನು ರೂ.100-00ರ ಮೌಲ್ಯದ ಛಾಪಾಕಾಗದದಲ್ಲಿ ಗುತ್ತಿಗೆದಾರರಿಂದ ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗಳು ಪಡೆದುಕೊಳ್ಳತಕ್ಕದ್ದು.

**ಕಂಡಿಕೆ 11**:- ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿನ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆದ ಸಂಘ/ಸಂಸ್ಥೆಗಳ ಲೆಕ್ಕಪತ್ರಗಳನ್ನು ಸಂಬಂಧಪಟ್ಟ ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳು ಪರಿಶೋಧನೆ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ.

**ಕಂಡಿಕೆ 12 :-** ಗುತ್ತಿಗೆದಾರರು ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಪಡೆದ ಜಲಸಂಪನ್ಮೂಲಗಳಲ್ಲಿ ಸಂಬಂಧಪಟ್ಟ ತಾಲ್ಲೂಕು ಮಟ್ಟದ ಅಧಿಕಾರಿಯು ಸೂಚಿಸಿದ ಪ್ರಮಾಣದಲ್ಲಿ ಮೀನುಗಾರಿಕೆ ಇಲಾಖೆಯಿಂದ ಅನುಮೋದಿತ ಜಾತಿಯ ಮೀನು ಮರಿಗಳನ್ನು ಮಾತ್ರ ಮೀನುಗಾರಿಕೆ ಇಲಾಖೆಯ ಅಥವಾ ಮೀನುಗಾರಿಕೆ ಇಲಾಖೆಯಿಂದ ಅನುಮೋದಿಸಲ್ಪಟ್ಟ ಮೀನುಮರಿ ಉತ್ಪಾದನಾ/ಪಾಲನಾ ಕೇಂದ್ರಗಳಿಂದ ಖರೀದಿಸಿ ಸದರಿ ಅಧಿಕಾರಿಯ ಸಮ್ಮುಖದಲ್ಲಿ ಬಿತ್ತನೆ ಮಾಡತಕ್ಕದ್ದು.

**ಕಂಡಿಕೆ 13:-** ಗುತ್ತಿಗೆಗೆ ಪಡೆಯಲಾದ ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳು ಪ್ರಕೃತಿ ವಿಕೋಪಕ್ಕೆ ಒಳಗಾಗಿ ಯಾವುದೇ ರೀತಿಯ ಹಾನಿಯುಂಟಾದಲ್ಲಿ ಅಂತಹ ನಷ್ಟಕ್ಕೆ ಮೀನುಗಾರಿಕೆ ಇಲಾಖೆಯು ಜವಾಬ್ದಾರಿಯಲ್ಲ. ಲಾಭ ನಷ್ಟಗಳಿಗೆ ಗುತ್ತಿಗೆದಾರರೇ ಹೊಣೆಗಾರರಾಗುತ್ತಾರೆ.

**ಕಂಡಿಕೆ 14** :- ಅರಣ್ಯ ಇಲಾಖೆಯ / ಕೆರೆ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಜಲಸಂಪನ್ಮೂಲಗಳಲ್ಲಿನ ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆ ಇಲಾಖೆಯ ಮುಖಾಂತರ ಗುತ್ತಿಗೆಗೆ ನೀಡಿ ವಿಲೇವಾರಿ ಮಾಡುವಾಗ ವಿಧಿಸಬೇಕಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳು :-

1) ಮೀನುಗಾರಿಕೆ ಇಲಾಖೆಯಿಂದ ಅನುಮೋದನೆ ಪಡೆದ ಮೀನುಮರಿಗಳನ್ನು ಕೆರೆಗೆ ಬಿತ್ತನೆ ಮಾಡುವಾಗ ಅರಣ್ಯ ಇಲಾಖೆಯ / ಕೆರೆ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳ ಸಮ್ಮುಖದಲ್ಲಿ ಬಿತ್ತನೆ ಮಾಡತಕ್ಕದ್ದು. ಮೀನುಮರಿ ಬಿತ್ತನೆ ಕಾರ್ಯಕ್ರಮದ ಬಗ್ಗೆ ಅರಣ್ಯ ಇಲಾಖೆಗೆ/ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಮುಂಚಿತವಾಗಿ ಲಿಖಿತ ಮೂಲಕ ತಿಳಿಸತಕ್ಕದ್ದು.
2) ಕೆರೆಯ ಪರಿಸರವನ್ನು ಶುಚಿಯಾಗಿಡಲು ಅರಣ್ಯ ಇಲಾಖೆಗೆ / ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಹಕರಿಸತಕ್ಕದ್ದು. ಮತ್ತು ಕೆರೆಯಲ್ಲಿ ಜಲಸಸ್ಯಗಳನ್ನು ತೆಗೆದು ಹಾಕಲು ಪ್ರಯತ್ನ ಮಾಡತಕ್ಕದ್ದು.
3) ಕೆರೆಯ ಸಂರಕ್ಷಣೆ ಮತ್ತು ಅಭಿವೃದ್ಧಿ ಸಂಬಂಧ ಅರಣ್ಯ ಇಲಾಖೆಯು / ಕೆರೆ ಅಭಿವೃದ್ಧಿ ಪ್ರಾಧಿಕಾರವು ಕಾಲಕಾಲಕ್ಕೆ ವಿಧಿಸಬಹುದಾದ ನಿಬಂಧನೆಗಳನ್ನು ಅನುಸರಿಸತಕ್ಕದ್ದು. ಅರಣ್ಯ ಇಲಾಖೆಯ / ಕೆರೆ ಅಭಿವೃದ್ಧಿ ಪ್ರಾಧಿಕಾರದ ಹಿತಾಸಕ್ತಿಗೆ ಭಂಗ ಉಂಟಾಗದಂತೆ ವಿಧಿಸುವ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸತಕ್ಕದ್ದು.
4) ಕೆರೆಯಲ್ಲಿ ಯಾವುದಾದರೂ ಕಾರಣದಿಂದ ಮೀನುಗಳ ಮರಣ ಉಂಟಾದರೆ ಅಥವಾ ಇನ್ನಾವುದೇ ಕಾರಣದಿಂದ ನಷ್ಟವುಂಟಾದರೆ ಅದಕ್ಕೆ ಅರಣ್ಯ ಇಲಾಖೆಯು / ಕೆರೆ ಅಭಿವೃದ್ಧಿ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
5) ಮೀನು ಹಿಡಿಯುವಾಗ ಕೆರೆಯಲ್ಲಿ ಅಭಿವೃದ್ಧಿಪಡಿಸಿರುವ ಕೆಲಸಗಳಿಗೆ ಯಾವುದೇ ರೀತಿಯ ಹಾನಿ ಉಂಟು ಮಾಡತಕ್ಕದ್ದಲ್ಲ. ಉದಾಹರಣೆಗೆ ತಂತಿ ಬೇಲಿ, ವಿದ್ಯುತ್ ವ್ಯವಸ್ಥೆ, ಉದ್ಯಾನವನ, ಇತ್ಯಾದಿ.
6) ಕೆರೆಯ ಏರಿ ದೀಪಗಳಿಗೆ ಯಾವುದೇ ದಕ್ಕೆಯನ್ನು ಉಂಟು ಮಾಡತಕ್ಕದ್ದಲ್ಲ.
7) ಕೆರೆಯ ನೀರನ್ನು ಮಾಲಿನ್ಯಗೊಳಿಸುವ ಯಾವುದೇ ಚಟುವಟಿಕೆಯನ್ನು ಕೈಗೊಳ್ಳತಕ್ಕದ್ದಲ್ಲ. ಉದಾಹರಣೆಗೆ ಸತ್ತ ಮೀನನ್ನು ಕೆರೆಗೆ ಹಾಕುವುದು, ಇತ್ಯಾದಿ.
8) ಸ್ಫೋಟಕ ವಸ್ತುಗಳನ್ನು ಅಥವಾ ವಿಷ ವಸ್ತುಗಳನ್ನು ಉಪಯೋಗಿಸಿ ಕೆರೆಯಲ್ಲಿನ ಮೀನನ್ನು ಹಿಡಿಯತಕ್ಕದ್ದಲ್ಲ.
9) ಅರಣ್ಯ ಇಲಾಖೆಯು/ಕೆರೆ ಅಭಿವೃದ್ಧಿ ಪ್ರಾಧಿಕಾರವು ನಿಗದಿಪಡಿಸುವ ಜಾಗದಲ್ಲಿ ಮಾತ್ರ ಮೀನನ್ನು ದಂಡೆಗೆ ತರತಕ್ಕದ್ದು.
10) ಕೆರೆಯಲ್ಲಿ ಬಿತ್ತಿರುವ ಮೀನುಮರಿಗಳ ವಿವರವನ್ನು ಮತ್ತು ಹಿಡಿದ ಮೀನುಗಳ ವಿವರಗಳನ್ನು (ಸಂಖ್ಯೆ, ತೂಕ, ಜಾತಿ, ಇತ್ಯಾದಿ) ಅರಣ್ಯ ಇಲಾಖೆಗೆ/ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡತಕ್ಕದ್ದು.
11) ಕೆರೆಯಲ್ಲಿ ಮೀನು ಹಿಡಿಯುವ ಚಟುವಟಿಕೆಯಿಂದ ಅರಣ್ಯ ಇಲಾಖೆಯ/ಕೆರೆ ಅಭಿವೃದ್ಧಿ ಪ್ರಾಧಿಕಾರದ ಯಾವುದೇ ಹಿತಾಸಕ್ತಿಗೆ ಕುಂದು ಉಂಟಾಗತಕ್ಕದ್ದಲ್ಲ.
12) ಕೆರೆಯಲ್ಲಿ ಮೀನು ಹಿಡಿಯುವವರ ಹೆಸರುಗಳನ್ನು ಮುಂಚಿತವಾಗಿ ಅರಣ್ಯ ಇಲಾಖೆಗೆ/ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ತಿಳಿಸಿ ಕೆರೆಯಲ್ಲಿ ಪ್ರವೇಶ ಪಡೆಯಲು ಅವರಿಂದ ಗುರುತಿನ ಚೀಟಿಯನ್ನು ಪಡೆಯತಕ್ಕದ್ದು.
13) ಅರಣ್ಯ ಇಲಾಖೆಗೆ/ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಸರ್ಕಾರವು ಮೀನುಗಾರಿಕೆ ವಿಲೇವಾರಿ ಮತ್ತು ಅಭಿವೃದ್ಧಿ ಬಗ್ಗೆ ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಪಾಲಿಸತಕ್ಕದ್ದು.
14) ಮೇಲ್ಕಂಡ ನಿಬಂಧನೆ ಮತ್ತು ಷರತ್ತುಗಳಿಗೆ ಒಪ್ಪಿಗೆ ಪತ್ರವನ್ನು ರೂ.100-00 ಛಾಪಾ ಕಾಗದದಲ್ಲಿ ಬರೆದು ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

**ಡಿ.ಕಮಲಕುಮಾರ್**
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ)

**ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ/167/ಮೀಇಇ/2005 ದಿನಾಂಕ: 28-1-2006ರ**

**ಅನುಬಂಧ-2**

**ಒಳನಾಡು ಜಲಸಂಪನ್ಮೂಲಗಳಲ್ಲಿನ ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆ ಇಲಾಖೆಯಿಂದ ಟೆಂಡರ್-ಕಂ-ಹರಾಜು ಮುಖಾಂತರ ವಿಲೇವಾರಿ ಮಾಡುವಾಗ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗಳು ಕಡ್ಡಾಯವಾಗಿ ಪಾಲಿಸಬೇಕಾದ ವಿಧಿವಿಧಾನಗಳು ಮತ್ತು ಮಾರ್ಗಸೂಚಿಗಳು**

**ಕಂಡಿಕೆ 1** :- ಎಲ್ಲೆಲ್ಲಿ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆಯಲು ಆದ್ಯತೆಯಲ್ಲಿನ ಸಂಘ/ಸಂಸ್ಥೆ/ವ್ಯಕ್ತಿಗಳು ಮುಂದೆ ಬರುವುದಿಲ್ಲವೋ, ಅಂತಹ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು **ಟೆಂಡರ್-ಕಂ-ಹರಾಜು ಮೂಲಕ** ವಿಲೇವಾರಿ ಮಾಡಲು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು **ಮೀನುಗಾರಿಕೆ ಫಸಲಿ ವರ್ಷದ ಸೆಪ್ಟೆಂಬರ್ 1 ರಿಂದ ಪ್ರಾರಂಭಿಸತಕ್ಕದ್ದು**. ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡಲು ಉದ್ದೇಶಿಸಲಾದ ಒಳನಾಡು ಜಲಸಂಪನ್ಮೂಲಗಳ ಟೆಂಡರ್/ಹರಾಜು ಪ್ರಕಟಣೆಗಳನ್ನು ಈ ಆದೇಶದ **ಅನುಬಂಧ-7**ರಲ್ಲಿನಂತೆ ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಿಸಿ ಪ್ರಕಟಣೆಯ ಕರಪತ್ರಗಳನ್ನು ಕೆರೆಯ ವ್ಯಾಪ್ತಿಯ ಗ್ರಾಮ ಪಂಚಾಯತ್‌ಗಳ, ತಾಲ್ಲೂಕು ಪಂಚಾಯತ್‌ಗಳ, ತಾಲ್ಲೂಕಿನ ತಹಶೀಲ್ದಾರರ ಕಛೇರಿಯ ಮತ್ತು ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿ ಕಛೇರಿಯ ಜಾಹೀರಾತು ಫಲಕಗಳಲ್ಲಿ ಪ್ರದರ್ಶಿಸುವ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡತಕ್ಕದ್ದು.

**ಕಂಡಿಕೆ** 2 :- ಟೆಂಡರ್/ಹರಾಜಿನ ಮೂಲಕ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆಯಲು ಇಚ್ಛಿಸುವವರು ಈ ಆದೇಶದ **ಅನುಬಂಧ-8** ರಲ್ಲಿನಂತೆ ಅಧಿಕೃತ ಟೆಂಡರ್ ಅರ್ಜಿ ನಮೂನೆಯನ್ನು ಸಂಬಂಧಪಟ್ಟ ತಾಲ್ಲೂಕಿನ ಮೀನುಗಾರಿಕೆ ಅಧಿಕಾರಿಯವರಿಂದ ಕಛೇರಿ ವೇಳೆಯಲ್ಲಿ ಅರ್ಜಿಯ ಶುಲ್ಕ ರೂ.50-00ನ್ನು (ರೂಪಾಯಿ ಐವತ್ತು ಮಾತ್ರ) ಪಾವತಿಸಿ ಪಡೆದುಕೊಳ್ಳತಕ್ಕದ್ದು.

**ಕಂಡಿಕೆ** 3 :- ಟೆಂಡರ್/ಹರಾಜಿನಲ್ಲಿ ಭಾಗವಹಿಸುವವರು ಮೀನುಗಾರಿಕೆ ಇಲಾಖೆಯಿಂದ ನಿಗದಿಪಡಿಸಿದ ಮೊತ್ತವನ್ನು ಬಡ್ಡಿ ರಹಿತ ಠೇವಣಿ ರೂಪದಲ್ಲಿ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯವರಲ್ಲಿ ಇಡತಕ್ಕದ್ದು. **ಈ ಠೇವಣಿ ಮೊತ್ತವನ್ನು ಆಯಾ ಜಲಸಂಪನ್ಮೂಲದ ಜಲ ವಿಸ್ತೀರ್ಣದ ಶೇ.50ರಷ್ಟನ್ನು ಗಣನೆಗೆ ತೆಗೆದುಕೊಂಡು ಪ್ರತಿ ಹೆಕ್ಟೇರ್‌ಗೆ ರೂ.150-00 ರಂತೆ (ರೂಪಾಯಿ ಒಂದುನೂರ ಐವತ್ತು ಮಾತ್ರ)** ನಿಗದಿಪಡಿಸತಕ್ಕದ್ದು. ಯಶಸ್ವಿ ಬಿಡ್‌ದಾರರ ಠೇವಣಿ ಮೊತ್ತವನ್ನು ಬಡ್ಡಿ ರಹಿತವಾಗಿ ಗುತ್ತಿಗೆಯ ಅವಧಿಯು ಮುಗಿದನಂತರ ಅವರಿಗೆ ಮರುಪಾವತಿಸತಕ್ಕದ್ದು. ಒಂದು ವೇಳೆ ಬಿಡ್‌ದಾರರು ಗುತ್ತಿಗೆ ಅವಧಿಯಲ್ಲಿ ಇಲಾಖಾ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಅವರ ಠೇವಣಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

**ಕಂಡಿಕೆ** 4 :- ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು ಟೆಂಡರ್-ಕಂ-ಹರಾಜು ಪ್ರಕಟಣೆಯನ್ನು ಪ್ರಕಟಿಸಿದ ದಿನಾಂಕದಿಂದ 15 ದಿನಗಳ ಕಾಲಾವಕಾಶ ನೀಡಿ ಟೆಂಡರ್-ಕಂ-ಹರಾಜನ್ನು ನಡೆಸತಕ್ಕದ್ದು. ನೀರು ತುಂಬಿದ ಒಳನಾಡು ಜಲಸಂಪನ್ಮೂಲಗಳ ಸರ್ವೇಕ್ಷಣೆ ನಡೆಸಿ ಅವುಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಯನ್ನು ಮೂರು ಸುತ್ತಿನಲ್ಲಿ ನಡೆಸತಕ್ಕದ್ದು. ಪೂರ್ಣವಾಗಿ ತುಂಬಿದ ಕೆರೆಗಳನ್ನು ಮೊದಲನೇ ಸುತ್ತಿನಲ್ಲಿ ಅಂದರೆ ಮೀನುಗಾರಿಕೆ ಫಸಲಿ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ, ಎರಡನೇ ಸುತ್ತನ್ನು ಅಕ್ಟೋಬರ್ ತಿಂಗಳಿನಲ್ಲಿ ಮತ್ತು ಮೂರನೇ ಹಾಗೂ ಅಂತಿಮ ಸುತ್ತನ್ನು ನವೆಂಬರ್ ತಿಂಗಳಿನಲ್ಲಿ ನಡೆಸತಕ್ಕದ್ದು. ಮೂರನೇ ಸುತ್ತಿನ ನಂತರ ವಿಲೇವಾರಿಯಾಗದ ಕೆರೆಗಳ ಪಟ್ಟಿಯನ್ನು ತಯಾರು ಮಾಡಿ ವಿಲೇವಾರಿಯಿಂದ ವಿನಾಯಿತಿ ಆದೇಶವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆಯಲು ಸೂಕ್ತ ಸಮರ್ಥನೆಯೊಂದಿಗೆ ಪ್ರಸ್ತಾವನೆಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು. **ಎಲ್ಲಾ ಜಲಸಂಪನ್ಮೂಲಗಳ ವಿಲೇವಾರಿ ಪ್ರಕ್ರಿಯೆಯನ್ನು ಮೀನುಗಾರಿಕೆ ಫಸಲಿ ವರ್ಷ ಪ್ರಾರಂಭವಾದ 5 ತಿಂಗಳುಗಳೊಳಗಾಗಿ ಅಂದರೆ ಮೀನುಗಾರಿಕೆ ಫಸಲಿ ವರ್ಷದ ನವೆಂಬರ್ ಮಾಹೆಯ ಅಂತ್ಯದೊಳಗಾಗಿ ಕಡ್ಡಾಯವಾಗಿ ಪೂರ್ಣಗೊಳಿಸತಕ್ಕದ್ದು.**

**ಕಂಡಿಕೆ** 5 :- ಮೀನು ಪಾಶುವಾರು ಹಕ್ಕನ್ನು ಪಡೆಯಲು ಟೆಂಡರ್ ಅರ್ಜಿ ಸಲ್ಲಿಸುವವರು ಈ ಆದೇಶದ **ಅನುಬಂಧ-8**ರಲ್ಲಿರುವ ನಿಗದಿತ ನಮೂನೆಯಲ್ಲಿ ಕೋರಿರುವ ಮಾಹಿತಿಯನ್ನು ನೀಡಿ ಮೊಹರು ಮಾಡಿದ ಲಕೋಟೆಯಲ್ಲಿ ಡಿ.ಡಿ. ಮುಖಾಂತರ ಠೇವಣಿ ಮೊಬಲಗಿನ ಸಮೇತ ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗೆ ನಿಗದಿತ ದಿನಾಂಕದೊಳಗಾಗಿ ಕಛೇರಿ ವೇಳೆಯಲ್ಲಿ ಸಲ್ಲಿಸತಕ್ಕದ್ದು. **ಮೊಹರಾದ ಲಕೋಟೆಯ ಮೇಲೆ ಕೆರೆಯ ಹೆಸರಿನೊಂದಿಗೆ ಮೀನು ಪಾಶುವಾರು ಹಕ್ಕನ್ನು ಪಡೆಯಲು ಟೆಂಡರ್ ಅರ್ಜಿಯೆಂದು ದಪ್ಪ ಅಕ್ಷರಗಳಲ್ಲಿ ನಮೂದಿಸಿರತಕ್ಕದ್ದು.**

**ಕಂಡಿಕೆ** 6 :- ಟೆಂಡರ್-ಕಂ-ಹರಾಜಿನಿಂದ ಬಂದ ಬಿಡ್ ಮೊತ್ತವು ಹಿಂದಿನ ವರ್ಷದ ಆದಾಯದ ಶೇ.50ಕ್ಕಿಂತ ಕಡಿಮೆಯಿದ್ದಲ್ಲಿ ಅಂತಹ ಟೆಂಡರ್-ಕಂ-ಹರಾಜು ಪ್ರಕ್ರಿಯೆಯನ್ನು ತಾಲ್ಲೂಕು ಮೀನುಗಾರಿಕೆ ಅಧಿಕಾರಿಯೇ ರದ್ದುಗೊಳಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆಗೆ ಒಳಪಟ್ಟಂತೆ ಮರು ವಿಲೇವಾರಿಗೆ ಕ್ರಮ ಕೈಗೊಳ್ಳತಕ್ಕದ್ದು.

**ಕಂಡಿಕೆ** 7 :- **ಟೆಂಡರ್ ಅರ್ಜಿಯಲ್ಲಿ ನಮೂದಿಸಲಾಗಿರುವ ಅತೀ ಹೆಚ್ಚಿನ ಮೊತ್ತದ ಮೇಲ್ಪಟ್ಟು ನಂತರ ನಡೆಸಲಾಗುವ ಹರಾಜಿನಲ್ಲಿ ಸೂಚಿಸಲಾಗುವ ಅತೀ ಹೆಚ್ಚಿನ ಬಿಡ್ ಮೊತ್ತವನ್ನು ವಾರ್ಷಿಕ ಗುತ್ತಿಗೆ ಮೊತ್ತವೆಂದು ಪರಿಗಣಿಸತಕ್ಕದ್ದು.**

**ಕಂಡಿಕೆ** 8 :- ಮೀನು ಪಾಶುವಾರು ಹಕ್ಕಿನ ಟೆಂಡರ್/ಹರಾಜು ಮುಗಿದ ಕೂಡಲೇ ಅತೀ ಹೆಚ್ಚಿನ ಮೊತ್ತವನ್ನು ಸೂಚಿಸಿದ ಯಶಸ್ವಿ ಟೆಂಡರ್‌ದಾರರು/ಬಿಡ್‌ದಾರರು **ಪೂರ್ಣ ಬಿಡ್ ಮೊತ್ತವನ್ನು** ಹರಾಜು ನಡೆದ ಸ್ಥಳದಲ್ಲಿಯೇ ಪಾವತಿ ಮಾಡಿ ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯಿಂದ ಅಧಿಕೃತ ರಶೀದಿಯನ್ನು ಪಡೆದುಕೊಳ್ಳತಕ್ಕದ್ದು. ತಪ್ಪಿದಲ್ಲಿ ಸದರಿ ಟೆಂಡರ್-ಕಂ-ಹರಾಜಿನ ಬಗ್ಗೆ ಅವರು ನೀಡಲಾಗಿದ್ದ ಠೇವಣಿಯ ಮೊಬಲಗನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು. ಗರಿಷ್ಟ ಬಿಡ್‌ದಾರರು ಸೂಚಿಸಿದ ಮೊತ್ತವನ್ನೇ 2ನೇ ಅತೀ ಹೆಚ್ಚಿನ ಮೊತ್ತವನ್ನು ಸೂಚಿಸಿದ ಟೆಂಡರ್‌ದಾರರು/ಬಿಡ್‌ದಾರರು ಪಾವತಿಸಲು ಒಪ್ಪಿದಲ್ಲಿ ಹಾಗೂ ಅವರು ಸದರಿ ಮೊತ್ತವನ್ನು ಸ್ಥಳದಲ್ಲೇ ಪಾವತಿಸಿದಲ್ಲಿ ಅವರ ಹೆಸರಿಗೆ ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ವಿಲೇಗೊಳಿಸಲು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿ ಕ್ರಮ ಕೈಗೊಳ್ಳತಕ್ಕದ್ದು. ಒಂದು ವೇಳೆ 2ನೇ ಅತೀ ಹೆಚ್ಚಿನ ಟೆಂಡರ್‌ದಾರರು/ಬಿಡ್‌ದಾರರು ಇದಕ್ಕೆ ಒಪ್ಪದಿದ್ದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆಗೆ ಒಳಪಟ್ಟಂತೆ ಮರು ಟೆಂಡರ್/ಹರಾಜು ಮೂಲಕ ವಿಲೇವಾರಿಗೊಳಿಸಲು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿ ಕ್ರಮಕೈಗೊಳ್ಳತಕ್ಕದ್ದು.

**ಕಂಡಿಕೆ** 9 :- ಟೆಂಡರ್-ಕಂ-ಹರಾಜಿನ ಮುಖಾಂತರ ವಿಲೇಗೊಳಿಸಲಾದ ಮೀನು ಪಾಶುವಾರು ಹಕ್ಕಿನ ದೃಢೀಕರಣವು ಮೇಲಾಧಿಕಾರಿಗಳ ಅನುಮೋದನೆಗೆ ಒಳಪಟ್ಟಿರುತ್ತದೆ.

**ಕಂಡಿಕೆ** 10 :- ಟೆಂಡರ್-ಕಂ-ಹರಾಜು ಮುಖಾಂತರ ಪಡೆದ **ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಅವಧಿಯಲ್ಲಿ ಎರಡನೇ ವರ್ಷದಿಂದ ಪ್ರತೀವರ್ಷ ಗುತ್ತಿಗೆಯನ್ನು ನವೀಕರಿಸುವ ಅಧಿಕಾರವನ್ನು ಜಿಲ್ಲಾ ಮೀನುಗಾರಿಕೆ ಅಧಿಕಾರಿಗಳಿಗೆ ನೀಡಲಾಗಿದೆ. ಎರಡನೇ ವರ್ಷ ಮತ್ತು ತದನಂತರದ ವಾರ್ಷಿಕ ಟೆಂಡರ್/ಬಿಡ್ ಮೊತ್ತವನ್ನು ಬಿಡ್‌ದಾರರು ಮೀನುಗಾರಿಕೆ ಫಸಲಿ ವರ್ಷದ ಪ್ರಾರಂಭದಲ್ಲಿ ಅಂದರೆ ಜುಲೈ 31ರೊಳಗಾಗಿ ಪಾವತಿ ಮಾಡಿ ಗುತ್ತಿಗೆಯನ್ನು ನವೀಕರಿಸಿಕೊಳ್ಳತಕ್ಕದ್ದು.** ಒಂದು ವೇಳೆ ಬಿಡ್‌ದಾರರು ನಿಗದಿತ ಅವಧಿಯೊಳಗಾಗಿ ಗುತ್ತಿಗೆ ಮೊತ್ತವನ್ನು ಪಾವತಿಸದಿದ್ದಲ್ಲಿ ಹಾಗೂ ಇಲಾಖಾ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಪಕ್ಷದಲ್ಲಿ ಅವರ ಹರಾಜು ದೃಢೀಕರಣ ಆದೇಶವನ್ನು ರದ್ದುಪಡಿಸುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರವು ಹೊಂದಿರುತ್ತದೆ. ಮತ್ತು ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆಗೆ ಒಳಪಟ್ಟಂತೆ ಮರು ವಿಲೇವಾರಿಗೊಳಿಸುವ ಅಧಿಕಾರವನ್ನು ಜಿಲ್ಲಾ ಮೀನುಗಾರಿಕೆ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಿದೆ.

**ಕಂಡಿಕೆ** 11 :- ಟೆಂಡರ್-ಕಂ-ಹರಾಜು ಮುಖಾಂತರ ಗುತ್ತಿಗೆಗೆ ಪಡೆದ ಮೀನು ಪಾಶುವಾರು ಹಕ್ಕನ್ನು ಯಾವುದೇ ಕಾರಣಕ್ಕಾಗಿ ವರ್ಗಾಯಿಸತಕ್ಕದ್ದಲ್ಲ. ಹಾಗೂ ಉಪ ಗುತ್ತಿಗೆಗೆ ನೀಡತಕ್ಕದ್ದಲ್ಲ.

**ಕಂಡಿಕೆ** 12 :- ಟೆಂಡರ್‌ದಾರರು/ಬಿಡ್‌ದಾರರು ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆದ ಜಲಸಂಪನ್ಮೂಲಗಳಲ್ಲಿ ಸಂಬಂಧಪಟ್ಟ ತಾಲ್ಲೂಕು ಮಟ್ಟದ ಅಧಿಕಾರಿಯು ಸೂಚಿಸಿದ ಪ್ರಮಾಣದಲ್ಲಿ ಮೀನುಗಾರಿಕೆ ಇಲಾಖೆಯಿಂದ ಅನುಮೋದಿತ ಜಾತಿಯ

ಮೀನುಮರಿಗಳನ್ನು ಮಾತ್ರ ಮೀನುಗಾರಿಕೆ ಇಲಾಖೆಯ ಅಥವಾ ಮೀನುಗಾರಿಕೆ ಇಲಾಖೆಯಿಂದ ಅನುಮೋದಿಸಲ್ಪಟ್ಟ ಮೀನುಮರಿ ಉತ್ಪಾದನಾ/ಪಾಲನಾ ಕೇಂದ್ರಗಳಿಂದ ಖರೀದಿಸಿ ಸದರಿ ಅಧಿಕಾರಿಯ ಸಮ್ಮುಖದಲ್ಲಿ ಬಿತ್ತನೆ ಮಾಡತಕ್ಕದ್ದು.

**ಕಂಡಿಕೆ 13** :- ಟೆಂಡರ್/ಹರಾಜು ಮುಖಾಂತರ ಗುತ್ತಿಗೆಗೆ ಪಡೆಯಲಾದ ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳು ಪ್ರಕೃತಿ ವಿಕೋಪಕ್ಕೆ ಒಳಗಾಗಿ ಯಾವುದೇ ರೀತಿಯ ಹಾನಿಯುಂಟಾದಲ್ಲಿ ಅಂತಹ ನಷ್ಟಕ್ಕೆ ಮೀನುಗಾರಿಕೆ ಇಲಾಖೆಯು ಜವಾಬ್ದಾರಿಯಲ್ಲ. ಲಾಭ ನಷ್ಟಗಳಿಗೆ ಟೆಂಡರ್‌ದಾರರೇ/ಬಿಡ್‌ದಾರರೇ ಹೊಣೆಗಾರರಾಗುತ್ತಾರೆ.

**ಕಂಡಿಕೆ 14** :- ಯಾವುದೇ ಅಥವಾ ಎಲ್ಲಾ ಟೆಂಡರ್/ಹರಾಜು ಪ್ರಸ್ತಾವನೆಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ/ಸರ್ಕಾರಕ್ಕೆ ಇರುತ್ತದೆ. ಯಾವುದೇ ಕಾರಣ ನೀಡದೆ ಟೆಂಡರ್/ಹರಾಜನ್ನು ತಿರಸ್ಕರಿಸಿ ಮರು ಹರಾಜು ಮಾಡುವ ಹಕ್ಕು ಮೀನುಗಾರಿಕೆ ಇಲಾಖೆಗೆ ಸೇರಿರುತ್ತದೆ.

**ಕಂಡಿಕೆ 15** :- ಟೆಂಡರ್/ಹರಾಜು ಮುಖಾಂತರ ಗುತ್ತಿಗೆಗೆ ಪಡೆದ ಜಲಸಂಪನ್ಮೂಲಗಳಲ್ಲಿ ಗುತ್ತಿಗೆದಾರರು ಡೈನಾಮೈಟ್, ಸಿಡಿಮದ್ದಿನ ಅಥವಾ ವಿಷದ ಪ್ರಯೋಗವನ್ನಾಗಲಿ ಮಾಡಿ ಮೀನು ಹಿಡಿಯತಕ್ಕದ್ದಲ್ಲ. ಈ ನಿಬಂಧನೆಯನ್ನು ಉಲ್ಲಂಘಿಸಿದ ಟೆಂಡರ್‌ದಾರರ/ಬಿಡ್‌ದಾರರ ಗುತ್ತಿಗೆಯನ್ನು ತತ್‌ಕ್ಷಣದಿಂದ ರದ್ದುಪಡಿಸಿ ಗುತ್ತಿಗೆ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

**ಕಂಡಿಕೆ 16** :- ಒಳನಾಡು ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಟೆಂಡರ್-ಕಂ-ಹರಾಜು ಮುಖಾಂತರ ಗುತ್ತಿಗೆಗೆ ಪಡೆದ ಯಾವುದೇ ಟೆಂಡರ್‌ದಾರರು/ಬಿಡ್‌ದಾರರು ನಿಷೇಧಿತ ಮೀನುಗಳಾದ, ಪ್ರಮುಖವಾಗಿ ಆಫ್ರಿಕನ್ ಕ್ಯಾಟ್ ಫಿಶ್ (ಅಣೆ ಮೀನು), ಪಂಗೇಷಿಯಸ್ ಜಾತಿಯ ಮೀನು, ಚೈನೀಸ್ ಬಿಗ್ ಹೆಡ್, ತಿಲಾಪಿಯಾ (ಜಿಲೇಬಿ), ಇತ್ಯಾದಿಗಳ ಬಿತ್ತನೆ ಮಾಡುವುದು ಅಥವಾ ಅಭಿವೃದ್ಧಿ ಪಡಿಸುವುದು ಅಥವಾ ಮಾರಾಟ ಮಾಡುವುದು ಕಂಡುಬಂದಲ್ಲಿ ಅವರಿಗೆ ನೀಡಲಾಗಿದ್ದ ಗುತ್ತಿಗೆಯನ್ನು ಕೂಡಲೇ ರದ್ದುಪಡಿಸುವ ಮತ್ತು ಆ ಸಾಲಿನ ಗುತ್ತಿಗೆ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರವನ್ನು ಮೀನುಗಾರಿಕೆ ಇಲಾಖೆ ಹೊಂದಿರುತ್ತದೆ. ಟೆಂಡರ್‌ದಾರರಿಂದ/ಬಿಡ್‌ದಾರರಿಂದ ಈ ನಿಷೇದಿತ ಮೀನುಮರಿಗಳ ಅಭಿವೃದ್ಧಿ, ಪಾಲನೆ ಮತ್ತು ಮಾರಾಟ ಮಾಡುವುದು ಕಂಡುಬಂದಲ್ಲಿ ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯನ್ನು ಜವಾಬ್ದಾರರನ್ನಾಗಿ ಮಾಡಿ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

**ಕಂಡಿಕೆ 17** :- ಟೆಂಡರ್‌ದಾರರು/ಗುತ್ತಿಗೆದಾರರು ಗುತ್ತಿಗೆ ಪಡೆದ ಜಲಸಂಪನ್ಮೂಲದಲ್ಲಿ ಮೀನುಗಾರಿಕೆ ಚಟುವಟಿಕೆಯನ್ನು ಕೈಗೊಳ್ಳುವಾಗ ಸದರಿ ಜಲಸಂಪನ್ಮೂಲದ ಕಟ್ಟೆ, ಏರಿ, ತೂಬು, ಮುಂತಾದವುಗಳಿಗೆ ಯಾವುದೇ ರೀತಿಯ ಹಾನಿಯುಂಟಾಗದಂತೆ ನೋಡಿಕೊಳ್ಳತಕ್ಕದ್ದು.

**ಕಂಡಿಕೆ 18** :- ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿನ ಒಳನಾಡು ಜಲಸಂಪನ್ಮೂಲಗಳಲ್ಲಿನ ಮೀನು ಪಾಶುವಾರು ಹಕ್ಕಿನ ವಿಲೇವಾರಿಗೆ ಸಂಬಂಧಪಟ್ಟಂತೆ ರೂಪಿಸಲಾಗಿರುವ ಯಾವುದೇ ನಿಯಮವನ್ನು ಉಲ್ಲಂಘಿಸಿದ ಟೆಂಡರ್‌ದಾರರ/ಗುತ್ತಿಗೆದಾರರ ಗುತ್ತಿಗೆಯನ್ನು ತತ್‌ಕ್ಷಣದಿಂದ ಜಾರಿಗೆ ಬರುವಂತೆ ಸಕ್ಷಮ ಪ್ರಾಧಿಕಾರವು ರದ್ದುಪಡಿಸತಕ್ಕದ್ದು. ಹಾಗೂ ಸರ್ಕಾರವು/ಮೀನುಗಾರಿಕೆ ನಿರ್ದೇಶಕರು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ವಿಧಿಸಬಹುದಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳಿಗೆ ಟೆಂಡರ್‌ದಾರರು/ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು. ಈ ದಿಸೆಯಲ್ಲಿ ಈ ಆದೇಶದ **ಅನುಬಂಧ-9**ರಲ್ಲಿನ ನಮೂನೆಯಲ್ಲಿರುವಂತೆ ಮುಚ್ಚಳಿಕೆ ಪತ್ರವನ್ನು ರೂ.100-00 ಮೌಲ್ಯದ ಛಾಪಾಕಾಗದದಲ್ಲಿ ಟೆಂಡರ್‌ದಾರರಿಂದ/ಗುತ್ತಿಗೆದಾರರಿಂದ ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗಳು ಪಡೆದುಕೊಳ್ಳತಕ್ಕದ್ದು.

**ಕಂಡಿಕೆ 19 :- ಅರಣ್ಯ ಇಲಾಖೆಯ/ಕೆರೆ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಜಲಸಂಪನ್ಮೂಲಗಳಲ್ಲಿನ ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆ ಇಲಾಖೆಯ ಮುಖಾಂತರ ಟೆಂಡರ್-ಕಂ-ಹರಾಜು ಮುಖಾಂತರ ವಿಲೇವಾರಿ ಮಾಡಿ ಗುತ್ತಿಗೆಗೆ ನೀಡುವಾಗ ವಿಧಿಸಬೇಕಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳು:-**

1) ಮೀನುಗಾರಿಕೆ ಇಲಾಖೆಯಿಂದ ಅನುಮೋದನೆ ಪಡೆದ ಮೀನುಮರಿಗಳನ್ನು ಕೆರೆಗೆ ಬಿತ್ತನೆ ಮಾಡುವಾಗ ಅರಣ್ಯ ಇಲಾಖೆಯ/ಕೆರೆ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳ ಸಮ್ಮುಖದಲ್ಲಿ ಬಿತ್ತನೆ ಮಾಡತಕ್ಕದ್ದು. ಮೀನುಮರಿ ಬಿತ್ತನೆ ಕಾರ್ಯಕ್ರಮದ ಬಗ್ಗೆ ಅರಣ್ಯ ಇಲಾಖೆಗೆ/ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಮುಂಚಿತವಾಗಿ ಲಿಖಿತ ಮೂಲಕ ತಿಳಿಸತಕ್ಕದ್ದು.
2) ಕೆರೆಯ ಪರಿಸರವನ್ನು ಶುಚಿಯಾಗಿಡಲು ಅರಣ್ಯ ಇಲಾಖೆಗೆ/ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಹಕರಿಸತಕ್ಕದ್ದು. ಮತ್ತು ಕೆರೆಯಲ್ಲಿ ಜಲಸಸ್ಯಗಳನ್ನು ತೆಗೆದು ಹಾಕಲು ಪ್ರಯತ್ನ ಮಾಡತಕ್ಕದ್ದು.
3) ಕೆರೆಯ ಸಂರಕ್ಷಣೆ ಮತ್ತು ಅಭಿವೃದ್ಧಿ ಸಂಬಂಧ ಅರಣ್ಯ ಇಲಾಖೆಯು/ಕೆರೆ ಅಭಿವೃದ್ಧಿ ಪ್ರಾಧಿಕಾರವು ಕಾಲಕಾಲಕ್ಕೆ ವಿಧಿಸಬಹುದಾದ ನಿಬಂಧನೆಗಳನ್ನು ಅನುಸರಿಸತಕ್ಕದ್ದು. ಅರಣ್ಯ ಇಲಾಖೆಯ/ಕೆರೆ ಅಭಿವೃದ್ಧಿ ಪ್ರಾಧಿಕಾರದ ಹಿತಾಸಕ್ತಿಗೆ ಭಂಗ ಉಂಟಾಗದಂತೆ ವಿಧಿಸುವ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸತಕ್ಕದ್ದು.
4) ಕೆರೆಯಲ್ಲಿ ಯಾವುದಾದರೂ ಕಾರಣದಿಂದ ಮೀನುಗಳ ಮರಣ ಉಂಟಾದರೆ ಅಥವಾ ಇನ್ನಾವುದೇ ಕಾರಣದಿಂದ ನಷ್ಟವುಂಟಾದರೆ ಅದಕ್ಕೆ ಅರಣ್ಯ ಇಲಾಖೆಯು/ಕೆರೆ ಅಭಿವೃದ್ಧಿ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
5) ಮೀನು ಹಿಡಿಯುವಾಗ ಕೆರೆಯಲ್ಲಿ ಅಭಿವೃದ್ಧಿ ಪಡಿಸಿರುವ ಕೆಲಸಗಳಿಗೆ ಯಾವುದೇ ರೀತಿಯ ಹಾನಿ ಉಂಟು ಮಾಡತಕ್ಕದ್ದಲ್ಲ. ಉದಾಹರಣೆಗೆ ತಂತಿ ಬೇಲಿ, ವಿದ್ಯುತ್ ವ್ಯವಸ್ಥೆ, ಉದ್ಯಾನವನ, ಇತ್ಯಾದಿ.
6) ಕೆರೆಯ ಏರಿ ದೀಪಗಳಿಗೆ ಯಾವುದೇ ದಕ್ಕೆಯನ್ನು ಉಂಟು ಮಾಡತಕ್ಕದ್ದಲ್ಲ.
7) ಕೆರೆಯ ನೀರನ್ನು ಮಾಲಿನ್ಯಗೊಳಿಸುವ ಯಾವುದೇ ಚಟುವಟಿಕೆಯನ್ನು ಕೈಗೊಳ್ಳತಕ್ಕದ್ದಲ್ಲ. ಉದಾಹರಣೆಗೆ ಸತ್ತ ಮೀನನ್ನು ಕೆರೆಗೆ ಹಾಕುವುದು, ಇತ್ಯಾದಿ.
8) ಸ್ಫೋಟಕ ವಸ್ತುಗಳನ್ನು ಅಥವಾ ವಿಷ ವಸ್ತುಗಳನ್ನು ಉಪಯೋಗಿಸಿ ಕೆರೆಯಲ್ಲಿನ ಮೀನನ್ನು ಹಿಡಿಯತಕ್ಕದ್ದಲ್ಲ.
9) ಅರಣ್ಯ ಇಲಾಖೆಯು/ಕೆರೆ ಅಭಿವೃದ್ಧಿ ಪ್ರಾಧಿಕಾರವು ನಿಗದಿಪಡಿಸುವ ಜಾಗದಲ್ಲಿ ಮಾತ್ರ ಮೀನನ್ನು ದಂಡೆಗೆ ತರತಕ್ಕದ್ದು.
10) ಕೆರೆಯಲ್ಲಿ ಬಿತ್ತಿರುವ ಮೀನುಮರಿಗಳ ವಿವರವನ್ನು ಮತ್ತು ಹಿಡಿದ ಮೀನುಗಳ ವಿವರಗಳನ್ನು (ಸಂಖ್ಯೆ, ತೂಕ, ಜಾತಿ, ಇತ್ಯಾದಿ) ಅರಣ್ಯ ಇಲಾಖೆಗೆ/ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡತಕ್ಕದ್ದು.

11) ಕೆರೆಯಲ್ಲಿ ಮೀನು ಹಿಡಿಯುವ ಚಟುವಟಿಕೆಯಿಂದ ಅರಣ್ಯ ಇಲಾಖೆಯ/ಕೆರೆ ಅಭಿವೃದ್ಧಿ ಪ್ರಾಧಿಕಾರದ ಯಾವುದೇ ಹಿತಾಸಕ್ತಿಗೆ ಕುಂದು ಉಂಟಾಗತಕ್ಕದ್ದಲ್ಲ.

12) ಕೆರೆಯಲ್ಲಿ ಮೀನು ಹಿಡಿಯುವವರ ಹೆಸರುಗಳನ್ನು ಮುಂಚಿತವಾಗಿ ಅರಣ್ಯ ಇಲಾಖೆಗೆ/ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ತಿಳಿಸಿ ಕೆರೆಯಲ್ಲಿ ಪ್ರವೇಶ ಪಡೆಯಲು ಅವರಿಂದ ಗುರುತಿನ ಚೀಟಿಯನ್ನು ಪಡೆಯತಕ್ಕದ್ದು.

13) ಅರಣ್ಯ ಇಲಾಖೆಗೆ/ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಸರ್ಕಾರವು ಮೀನುಗಾರಿಕೆ ವಿಲೇವಾರಿ ಮತ್ತು ಅಭಿವೃದ್ಧಿ ಬಗ್ಗೆ ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಪಾಲಿಸತಕ್ಕದ್ದು.

14) ಮೇಲ್ಕಂಡ ನಿಬಂಧನೆ ಮತ್ತು ಷರತ್ತುಗಳಿಗೆ ಒಪ್ಪಿಗೆ ಪತ್ರವನ್ನು ರೂ.100-00 ಛಾಪಾ ಕಾಗದದಲ್ಲಿ ಬರೆದು ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

**ಡಿ.ಕಮಲಕುಮಾರ್**
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ)

**ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ/167/ಮೀಇಇ/2005 ದಿನಾಂಕ: 28-1-2006ರ**

**ಅನುಬಂಧ-3**

**ಕೆಳಕಂಡ ಸರ್ಕಾರಿ ಸ್ವಾಮ್ಯದ ಜಲಾಶಯಗಳ ಮೀನು ಪಾಶುವಾರು ಹಕ್ಕನ್ನು ಸ್ಥಳೀಯ ಮೀನುಗಾರರಿಗೆ ಪರವಾನಗಿ ನೀಡುವುದರ ಮೂಲಕ ವಿಲೇವಾರಿ ಮಾಡತಕ್ಕದ್ದು. ಗುತ್ತಿಗೆ ಅಥವಾ ಟೆಂಡರ್-ಕಂ-ಹರಾಜು ಮುಖಾಂತರ ವಿಲೇವಾರಿ ಮಾಡತಕ್ಕದ್ದಲ್ಲ.**

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ಜಲಾಶಯ ಇರುವ ಸ್ಥಳ | ಜಲಾಶಯದ ಹೆಸರು | ಗರಿಷ್ಠ ಜಲ ವಿಸ್ತೀರ್ಣ (ಹೆ.) | ವಿತರಿಸಬೇಕಾದ ಕನಿಷ್ಟ ಪರವಾನಗಿಗಳ ಸಂಖ್ಯೆ* |
|---|---|---|---|---|---|---|
| 1 | 2 | 3 | 4 | 5 | 6 | 7 |
| 1) | ಬೆಂಗಳೂರು(ನಗರ) | ಬೆಂಗಳೂರು (ದಕ್ಷಿಣ) | ತಿಪ್ಪಗೊಂಡನಹಳ್ಳಿ | ತಿಪ್ಪಗೊಂಡನಹಳ್ಳಿ | 1162.00 | 15 |
| 2) | ಬೆಂಗಳೂರು(ನಗರ) | ಬೆಂಗಳೂರು (ಉತ್ತರ) | ಹೆಸರಘಟ್ಟ | ಹೆಸರಘಟ್ಟ | 1160.00 | 15 |
| 3) | ಬೆಂಗಳೂರು (ಗ್ರಾ) | ರಾಮನಗರ | ಬೈರಮಂಗಲ | ಬೈರಮಂಗಲ | 437.00 | 05 |
| 4) | ಕೋಲಾರ | ಬಂಗಾರಪೇಟೆ | ಬೇತಮಂಗಲ | ಬೇತಮಂಗಲ | 317.00 | 05 |
| 5) | ತುಮಕೂರು | ಕುಣಿಗಲ್ | ಮಾರ್ಕೋನಹಳ್ಳಿ | ಮಾರ್ಕೋನಹಳ್ಳಿ | 1336.00 | 15 |
| 6) | ತುಮಕೂರು | ಚಿಕ್ಕನಾಯಕನಹಳ್ಳಿ | ಹೊಯ್ಸಳಕಟ್ಟೆ | ಬೋರನಕಣಿವೆ | 1346.00 | 15 |
| 7) | ಶಿವಮೊಗ್ಗ | ಸಾಗರ | ಕಾರ್ಗಲ್ | ಲಿಂಗನಮಕ್ಕಿ | 32256.00 | 200 |
| 8) | ಶಿವಮೊಗ್ಗ | ಶಿಕಾರಿಪುರ | ಅಂಜನಾಪುರ | ಅಂಜನಾಪುರ | 750.00 | 25 |
| 9) | ಶಿವಮೊಗ್ಗ | ಶಿಕಾರಿಪುರ | ಅಂಬ್ಲಿಗೋಳ | ಅಂಬ್ಲಿಗೋಳ | 400.00 | 45 |
| 10) | ಶಿವಮೊಗ್ಗ | ಶಿವಮೊಗ್ಗ | ಗಾಜನೂರು | ತುಂಗ | 825.00 | 85 |
| 11) | ಚಿಕ್ಕಮಗಳೂರು | ನರಸಿಂಹರಾಜಪುರ | ಬಿ.ಆರ್.ಪಿ. | ಭದ್ರಾ ಜಲಾಶಯ | 11250.00 | 115 |
| 12) | ಚಿಕ್ಕಮಗಳೂರು | ತರೀಕೆರೆ | ಜಂಬದಳ್ಳ | ಜಂಬದಹಳ್ಳಿ | 384.00 | 15 |
| 13) | ಚಿತ್ರದುರ್ಗ | ಹಿರಿಯೂರು | ವಿ.ವಿ.ಸಾಗರ | ವಿ.ವಿ.ಸಾಗರ | 8640.00 | 50 |
| 14) | ಚಿತ್ರದುರ್ಗ | ಹಿರಿಯೂರು | ಜೆ.ಜೆ.ಹಳ್ಳಿ | ಗಾಯಿತ್ರಿ | 793.00 | 10 |
| 15) | ವಿಜಾಪುರ | ಮುದ್ದೇಬಿಹಾಳ | ನಾರಾಯಣಪುರ | ಬಸವಸಾಗರ | 13048.00 | 250 |
| 16) | ಬೆಳಗಾವಿ | ಬಸವನಬಾಗೇವಾಡಿ | ಆಲಮಟ್ಟಿ | ಆಲಮಟ್ಟಿ | 48787.00 | 250 |
| 17) | ಬೆಳಗಾವಿ | ಬೆಳಗಾವಿ | ರಾಕಸಕೊಪ್ಪ | ರಾಕಸಕೊಪ್ಪ | 360.00 | 10 |
| 18) | ಬೆಳಗಾವಿ | ಹುಕ್ಕೇರಿ | ಹಿಡ್ಕಲ್ | ಘಟಪ್ರಭಾ | 7800.00 | 25 |
| 19) | ಬೆಳಗಾವಿ | ಸೌಂದತ್ತಿ | ನವಿಲುತೀರ್ಥ | ಮಲಪ್ರಭಾ | 13568.00 | 100 |
| 20) | ಮಂಡ್ಯ | ಶ್ರೀರಂಗಪಟ್ಟಣ | ಕೆ.ಆರ್.ಸಾಗರ | ಕೆ.ಆರ್.ಸಾಗರ | 12924.00 | 50 |
| 21) | ಹಾಸನ | ಹಾಸನ | ಗೋರೂರು | ಹೇಮಾವತಿ | 9162.00 | 90 |
| 22) | ಮೈಸೂರು | ಹೆಚ್.ಡಿ.ಕೋಟೆ | ಬೀಚನಹಳ್ಳಿ | ಕಬಿನಿ | 6092.00 | 50 |
| 23) | ಗುಲ್ಬರ್ಗಾ | ಚಿತಾಪುರ | ಬೆಣ್ಣೆತೂರಾ | ಬೆಣ್ಣೆತೂರಾ | 2201.00 | 20 |
| 24) | ಗುಲ್ಬರ್ಗಾ | ಅಫಜಲಪುರ | ಮಹಾಗಾಂವ್ | ಭೀಮಲಿಫ್ಟ್ | 1098.30 | 10 |

| 1 | 2 | 3 | 4 | 5 | 6 | 7 |
|---|---|---|---|---|---|---|
| 25) | ಬೀದರ್ | ಭಾಲ್ಕಿ | ಭಾಲ್ಕಿ | ಕಾರಂಜಾ | 5672.00 | 50 |
| 26) | ಉತ್ತರ ಕನ್ನಡ | ಹಳಿಯಾಳ | ಬೊಮ್ಮನಹಳ್ಳಿ | ಬೊಮ್ಮನಹಳ್ಳಿ | 1539.00 | 15 |
| 27) | ಉತ್ತರ ಕನ್ನಡ | ಹಳಿಯಾಳ | ತಟ್ಟಿಹಳ್ಳ | ತಟ್ಟಿಹಳ್ಳ | 2537.00 | 15 |
| 28) | ದಾವಣಗೆರೆ | ಚನ್ನಗಿರಿ | ಚನ್ನಗಿರಿ | ಶಾಂತಿಸಾಗರ | 2977.00 | 90 |
| 29) | ಧಾರವಾಡ | ಕಲಘಟಗಿ | ನೀರಸಾಗರ | ನೀರಸಾಗರ | 490.00 | 05 |

* ಮೀನುಗಾರಿಕೆ ಪರವಾನಿಗೆ ಕೋರಿ ಸ್ಥಳೀಯ ಮೀನುಗಾರರಿಂದ ಮೇಲಿನ ಕಲಂ 7ರಲ್ಲಿ ನಿಗದಿಗೊಳಿಸಲ್ಪಟ್ಟಷ್ಟು ಕನಿಷ್ಠ ಸಂಖ್ಯೆಯ ಅರ್ಜಿಗಳು ಮೀನುಗಾರಿಕೆ ಫಸಲಿ ವರ್ಷದ ಜುಲೈ 31ರೊಳಗಾಗಿ ಸ್ವೀಕೃತವಾಗದಿದ್ದಲ್ಲಿ, ಅಂತಹ ಜಲಾಶಯಗಳ ಮೀನು ಪಾಶುವಾರು ಹಕ್ಕನ್ನು ವಿಳಂಬವಿಲ್ಲದೆ ನೇರ ಗುತ್ತಿಗೆ ಅಥವಾ ಟೆಂಡರ್-ಕಂ-ಹರಾಜು ಮುಖಾಂತರ ವಿಲೇವಾರಿ ಮಾಡಲು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು ಕ್ರಮವನ್ನು ಕೈಗೊಳ್ಳತಕ್ಕದ್ದು.

**ಡಿ.ಕಮಲಕುಮಾರ್**
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ)

**ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ/167/ಮೀಇಇ/2005, ದಿನಾಂಕ: 28-1-2006ರ**

**ಅನುಬಂಧ-4**

**(ಮೀನುಗಾರಿಕೆ ಇಲಾಖೆ)**

ಸಂಖ್ಯೆ:

ಮೀನುಗಾರಿಕೆ ಸಹಾಯಕ ನಿರ್ದೇಶಕರು(ಶ್ರೇಣಿ-2)ರವರ ಕಛೇರಿ
--------------- ತಾಲ್ಲೂಕು, -------- ಜಿಲ್ಲೆ
ದಿನಾಂಕ: --------------

**ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ನೇರ ಗುತ್ತಿಗೆ ಮುಖಾಂತರ ವಿಲೇವಾರಿ ಮಾಡುವ ಬಗ್ಗೆ ಪ್ರಕಟಣೆ**

. . . . . . . . . . ಜಿಲ್ಲೆಯ . . . . . . . . . . . . . . . ತಾಲ್ಲೂಕಿನ ಈ ಕೆಳಕಂಡ ಜಲ ಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು . . . . . ನೇ ಮೀನುಗಾರಿಕೆ ಫಸಲಿ ವರ್ಷದಿಂದ . . . . . .ನೇ ಮೀನುಗಾರಿಕೆ ಫಸಲಿ ವರ್ಷದವರೆಗೆ (ಅಂದರೆ ದಿನಾಂಕ 01-07- ರಿಂದ 30-06- ರವರೆಗೆ) ಗರಿಷ್ಠ ಐದು (05) ವರ್ಷಗಳ ಅವಧಿಗೆ ಸರ್ಕಾರದ ನಿಯಮಗಳ ಮೇರೆಗೆ ಹಾಗೂ ಇದಕ್ಕೆ ಲಗತ್ತಿಸಿರುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟಂತೆ ಅರ್ಹ ಸಂಘ/ಸಂಸ್ಥೆ/ವ್ಯಕ್ತಿ (ಮೀನುಗಾರಿಕೆ ಪದವೀಧರ)ಗಳಿಗೆ ನೇರ ಗುತ್ತಿಗೆ ಮೂಲಕ ವಿಲೇ ಮಾಡಲಾಗುವುದು.

**ವಿಲೇವಾರಿ ಮಾಡಲು ಪ್ರಸ್ತಾಪಿಸಿರುವ ಸರ್ಕಾರಿ ಜಲಸಂಪನ್ಮೂಲಗಳ (ಕೆರೆಗಳ, ಇತ್ಯಾದಿ) ವಿವರಗಳು**

| ಕ್ರಮ ಸಂಖ್ಯೆ | ಜಲಸಂಪನ್ಮೂಲದ ಹೆಸರು | ಗ್ರಾಮ / ಹೋಬಳಿ | ಜಲವಿಸ್ತೀರ್ಣ/ ಅಚ್ಚುಕಟ್ಟು ಪ್ರದೇಶ (ಹೆಕ್ಟೇರುಗಳಲ್ಲಿ) |
|---|---|---|---|
| 1 | 2 | 3 | 4 |
| | | | |

ಮೇಲ್ಕಂಡ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಸರ್ಕಾರದ ನಿಯಮಗಳ ಮೇರೆಗೆ ಹಾಗೂ ಈ ಪ್ರಕಟಣೆಗೆ ಲಗತ್ತಿಸಿರುವ ಮುಚ್ಚಳಿಕೆ ಪತ್ರದಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟಂತೆ ಗುತ್ತಿಗೆಗೆ ಪಡೆಯಲಿಚ್ಛಿಸುವ ಅರ್ಹ ಸಂಘ/ಸಂಸ್ಥೆ/ವ್ಯಕ್ತಿಗಳು ಮಾತ್ರ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ದಿನಾಂಕ:31-08- ರೊಳಗಾಗಿ ಕಛೇರಿ ವೇಳೆಯಲ್ಲಿ ಈ ಕಛೇರಿಗೆ ಸಲ್ಲಿಸತಕ್ಕದ್ದು. ನಿಗದಿತ ಅವಧಿಯ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸದರಿ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಸರ್ಕಾರದ ನಿಯಮಗಳನ್ವಯ ಕೆಳಕಾಣಿಸಿದ ಸಂಘ/ಸಂಸ್ಥೆ /ವ್ಯಕ್ತಿ (ಮೀನುಗಾರಿಕೆ ಪದವೀಧರ) ಮಾತ್ರ ಆದ್ಯತೆ ಮೇರೆಗೆ ಗುತ್ತಿಗೆಗೆ ಪಡೆಯಲು ಅರ್ಹತೆಯನ್ನು ಹೊಂದಿರುತ್ತವೆ/ತ್ತಾನೆ.

1) ಜಲ ಸಂವರ್ಧನೆ ಯೋಜನಾ ಸಂಘದ ನೋಂದಾಯಿತ ಸಂಘಗಳು (ಈ ಪ್ರಥಮ ಆದ್ಯತೆಯು ಕೇವಲ ಜಲ ಸಂವರ್ಧನೆ ಯೋಜನಾ ಸಂಘದ ವ್ಯಾಪ್ತಿಯಲ್ಲಿ ಬರುವ ಜಲಸಂಪನ್ಮೂಲಗಳಿಗೆ ಮಾತ್ರ ಅನ್ವಯಿಸುತ್ತದೆ).
2) ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿ (ನಿ), ಮೈಸೂರು
3) ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿ (ನಿ), ಮೈಸೂರು ಇದರ ಸದಸ್ಯತ್ವ ಹೊಂದಿರುವ ಮೀನುಗಾರರ ಸಹಕಾರ ಸಂಘಗಳು (ಈ ಆದ್ಯತೆಗೆ ಸೇರಿದ ಮೀನುಗಾರರ ಸಹಕಾರ ಸಂಘಗಳು ಒಂದೇ ಕೆರೆಗೆ ಪೈಪೋಟಿ ನಡೆಸಿದಲ್ಲಿ ಪ್ರಥಮ ಆದ್ಯತೆಯನ್ನು ಗ್ರಾಮದ ವ್ಯಾಪ್ತಿಗೆ ಬರುವ ಮೀನುಗಾರರ ಸಹಕಾರ ಸಂಘಕ್ಕೆ ಮತ್ತು ನಂತರದ ಆದ್ಯತೆಯನ್ನು ಅನುಕ್ರಮವಾಗಿ ಸಂಬಂಧಪಟ್ಟ ಹೋಬಳಿ ಮಟ್ಟದ, ತಾಲ್ಲೂಕು ಮಟ್ಟದ, ಮತ್ತು ಜಿಲ್ಲಾ ಮಟ್ಟದ ಕಾರ್ಯವ್ಯಾಪ್ತಿ ಹೊಂದಿರುವ ಮೀನುಗಾರರ ಸಹಕಾರ ಸಂಘಗಳಿಗೆ ನೀಡಲಾಗಿದೆ. ಮೀನು ಪಾಶುವಾರು ಹಕ್ಕನ್ನು ಪಡೆಯಲು ಶಿಫಾರಸ್ಸುಗೊಂಡ ಮೀನುಗಾರರ ಸಹಕಾರ ಸಂಘವು ಮಹಾಮಂಡಳಿಯಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಪಡೆದು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು).
4) ನೊಂದಾಯಿಸಲ್ಪಟ್ಟ ಮೀನುಗಾರಿಕೆ ಸಹಕಾರ ಸಂಘಗಳು (ಈ ಆದ್ಯತೆಗೆ ಸೇರಿದ ಮೀನುಗಾರರ ಸಹಕಾರ ಸಂಘಗಳು ಒಂದೇ ಕೆರೆಗೆ ಪೈಪೋಟಿ ನಡೆಸಿದಲ್ಲಿ ಸದರಿ ಕೆರೆಯ ಗ್ರಾಮದ ವ್ಯಾಪ್ತಿಗೆ ಬರುವ ಮೀನುಗಾರರ ಸಹಕಾರ ಸಂಘಕ್ಕೆ ಪ್ರಥಮ ಆದ್ಯತೆ ನೀಡಲಾಗುವುದು. ನಂತರದ ಆದ್ಯತೆಯನ್ನು ಅನುಕ್ರಮವಾಗಿ ಸಂಬಂಧಪಟ್ಟ ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಕಾರ್ಯವ್ಯಾಪ್ತಿ ಹೊಂದಿರುವ ಮೀನುಗಾರರ ಸಹಕಾರ ಸಂಘಗಳಿಗೆ ನೀಡಲಾಗುವುದು.)

5) ಮೀನುಗಾರಿಕೆ ವಿಷಯದಲ್ಲಿ ಪದವಿ ಹೊಂದಿದ ನಿರುದ್ಯೋಗಿ ಮೀನುಗಾರಿಕೆ ಪದವೀಧರರು (ಮೀನುಗಾರಿಕೆ ಪದವೀಧರರು ಕರ್ನಾಟಕದಲ್ಲಿ ಜನಿಸಿದ ವ್ಯಕ್ತಿಯಾಗಿರತಕ್ಕದ್ದು ಅಥವಾ ಕರ್ನಾಟಕದಲ್ಲಿ ಕನಿಷ್ಠ 10(ಹತ್ತು) ವರ್ಷಗಳಿಗೆ ಕಡಿಮೆಯಿಲ್ಲದಂತೆ ವಾಸವಾಗಿರತಕ್ಕದ್ದು). ಅರ್ಜಿಯೊಂದಿಗೆ ಮೀನುಗಾರಿಕೆಯಲ್ಲಿ ಪದವಿ ಪ್ರಮಾಣ ಪತ್ರದ ಪ್ರತಿಯನ್ನು ಮತ್ತು ಸಂಬಂಧಪಟ್ಟ ತಹಶೀಲ್ದಾರರಿಂದ ಪಡೆದ ಅಧಿವಾಸ ಪ್ರಮಾಣ ಪತ್ರವನ್ನು (Domicile Certificate) ಸಲ್ಲಿಸತಕ್ಕದ್ದು.

6) ಕರ್ನಾಟಕ ನೀರಾವರಿ ಕಾಯಿದೆಯನ್ವಯ ನೋಂದಾಯಿಸಲ್ಪಟ್ಟ ಸಣ್ಣ ನೀರಾವರಿ ಬಳಕೆದಾರರ ಸಹಕಾರ ಸಂಘಗಳು /ಕೆರೆ ಅಭಿವೃದ್ಧಿ ಸಂಘಗಳು/ಕೆರೆ ಬಳಕೆದಾರರ ಸಂಘಗಳು/ಕೆರೆ ನಿರ್ವಹಣಾ ಸಂಘಗಳು/ವನ್ಯಜೀವಿ/ಜೀವ ವೈವಿಧ್ಯ ಸಂರಕ್ಷಣಾ ಸಂಘಗಳು. ಈ ಆದ್ಯತೆಯಲ್ಲಿ ಬರುವ ಸಂಘಗಳು ಒಂದೇ ಕೆರೆಗೆ ಪೈಪೋಟಿ ನಡೆಸಿದಲ್ಲಿ, ಪೈಪೋಟಿ ನಡೆಸಿದಂತಹ ಸಂಘ/ಸಂಸ್ಥೆಗಳಲ್ಲಿ ಮಾತ್ರ ಸೀಮಿತಗೊಳಿಸಿ ಹರಾಜು ಮಾಡಿ ಗರಿಷ್ಠ ಬಿಡ್‌ದಾರರಿಗೆ ಗುತ್ತಿಗೆಗೆ ನೀಡಲಾಗುವುದು.

**ಮೇಲ್ಕಾಣಿಸಿದ ಅರ್ಹ ಮತ್ತು ಆಸಕ್ತಿವುಳ್ಳ ಸಂಘ/ಸಂಸ್ಥೆ/ವ್ಯಕ್ತಿಗಳು ಮಾತ್ರ ಈ ಕಛೇರಿಯಿಂದ ಗುತ್ತಿಗೆಯ ಷರತ್ತು ಮತ್ತು ನಿಬಂಧನೆಗಳನ್ನು ಹಾಗೂ ಹೆಚ್ಚಿನ ಮಾಹಿತಿಗಳನ್ನು ಪಡೆದು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ನಿಗದಿತ ವೇಳೆಯೊಳಗಾಗಿ ಸಲ್ಲಿಸಬಹುದಾಗಿದೆ.**

ಸಹಿ/-
ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇ–2),
-------------- ತಾಲ್ಲೂಕು.

**ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ/167/ಮೀಇಇ/2005, ದಿನಾಂಕ: 28-1-2006ರ**

**ಅನುಬಂಧ–5**

**(ಮೀನುಗಾರಿಕೆ ಇಲಾಖೆ)**

**ಮೀನುಗಾರಿಕೆ ಇಲಾಖೆಯ ಪ್ರಕಟಣೆ ಸಂಖ್ಯೆ: -------------------------- ದಿನಾಂಕ:--------------**

**ರಂತೆ ---------------- ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ನೇರ ಗುತ್ತಿಗೆಗೆ ಪಡೆಯಲು ಅರ್ಜಿ.**

**ಸಂಘ / ಸಂಸ್ಥೆಗಳಿಂದ ನೀಡಬೇಕಾದ ಮಾಹಿತಿ.**

| | |
|---|---|
| 1) ಸಂಘದ / ಸಂಸ್ಥೆಯ ಹೆಸರು ಮತ್ತು ಪೂರ್ಣ ವಿಳಾಸ : | |
| 2) ಸಂಘದ / ಸಂಸ್ಥೆಯ ನೋಂದಣಿ ಸಂಖ್ಯೆ ಮತ್ತು ದಿನಾಂಕ (ನೋಂದಣಿ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಲಗತ್ತಿಸುವುದು). : | |
| 3) ಸಂಘದ / ಸಂಸ್ಥೆಯ ಅಧಿಕೃತ ಬೈಲಾ ಪ್ರತಿಯನ್ನು ಲಗತ್ತಿಸಲಾಗಿದೆಯೇ? : | |
| 4) ಸಂಘದ / ಸಂಸ್ಥೆಯ ಕಾರ್ಯಕ್ಷೇತ್ರ ಮತ್ತು ಉದ್ದೇಶದ ವಿವರ. : | |
| 5) ಸಂಘದ / ಸಂಸ್ಥೆಯ ಸದಸ್ಯರ ಪಟ್ಟಿ ಲಗತ್ತಿಸಲಾಗಿದೆಯೇ? (ಅರ್ಜಿ ಸಲ್ಲಿಸುವ ದಿನಾಂಕದಂದಿನಂತೆ ಸದಸ್ಯರ ಹೆಸರು, ಪೂರ್ಣ ವಿಳಾಸ, ವಯಸ್ಸು, ವೃತ್ತಿ, ಇತ್ಯಾದಿ ವಿವರಗಳನ್ನೊಳಗೊಂಡ ಪಟ್ಟಿಯನ್ನು ಲಗತ್ತಿಸುವುದು). : | |
| 6) ಸಂಘವು / ಸಂಸ್ಥೆಯು ಈ ಹಿಂದೆ ಗುತ್ತಿಗೆಗೆ ಪಡೆದಿದ್ದ ಜಲಸಂಪನ್ಮೂಲಗಳ ವಿವರ ನೀಡುವುದು (ಅವುಗಳ ಪೈಕಿ ಪ್ರಸಕ್ತ ವರ್ಷ ದಲ್ಲಿ ಚಾಲ್ತಿಯಲ್ಲಿರುವ ಜಲಸಂಪನ್ಮೂಲಗಳ ಜಲವಿಸ್ತೀರ್ಣ, ಅಚ್ಚುಕಟ್ಟು ಪ್ರದೇಶ, ಬಿತ್ತನೆ ಮಾಡಲಾದ ಮೀನುಮರಿ, ಹಿಡುವಳಿ ಮಾಡಿದ ಬಗ್ಗೆ ಮತ್ತು ಬಂದ ಆದಾಯದ ವಿವರಗಳು ನೀಡತಕ್ಕದ್ದು). : | |
| 7) ಸಂಘದ / ಸಂಸ್ಥೆಯ ಕಳೆದ 3 ವರ್ಷಗಳ ಅವಧಿಯ ಲೆಕ್ಕ ಪರಿಶೋಧನಾ ವರದಿ ಮತ್ತು ಕಾರ್ಯ ಚಟುವಟಿಕಾ ವರದಿ ಲಗತ್ತಿಸುವುದು. : | |
| 8) ಸಂಘದಿಂದ / ಸಂಸ್ಥೆಯಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ವಿವರ ನೀಡುವುದು (ಸಾಲ ಮತ್ತು ಷೇರು ಬಂಡವಾಳದ ವಿವರಗಳು). : | |
| 9) ಸಂಘವು / ಸಂಸ್ಥೆಯು ಗುತ್ತಿಗೆಗೆ ಕೋರಿರುವ ಜಲಸಂಪನ್ಮೂಲದ ಬಗ್ಗೆ ಠರಾವು ಪ್ರತಿಯನ್ನು ಲಗತ್ತಿಸುವುದು. : | |
| 10) ಜಲಸಂಪನ್ಮೂಲದ ಗುತ್ತಿಗೆ ಮೊತ್ತವನ್ನು ಮತ್ತು ಠೇವಣಿ ಮೊತ್ತವನ್ನು ಮುಂಗಡವಾಗಿ ಡಿ.ಡಿ. ಮುಖಾಂತರ ಪಾವತಿಸಲಾಗಿದೆಯೇ? (ಡಿ.ಡಿ. ಸಂಖ್ಯೆ, ದಿನಾಂಕ ಮತ್ತು ಮೊತ್ತದ ವಿವರ ನೀಡುವುದು) . : | |

| | |
|---|---|
| 11) ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿ (ನಿ), ಮೈಸೂರು ಇದರ ಸದಸ್ಯತ್ವವನ್ನು ಹೊಂದಿರುವ ಸಂಘವು ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆಯಲು ಮಹಾಮಂಡಳಿಯ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಪಡೆದು ಲಗತ್ತಿಸುವುದು. | : |
| 12) ಇತರೆ ವಿವರಗಳೇನಾದರೂ ಇದ್ದಲ್ಲಿ, ನೀಡುವುದು. | : |

**ನಿರುದ್ಯೋಗಿ ಮೀನುಗಾರಿಕೆ ಪದವೀಧರರಿಂದ ನೀಡಬೇಕಾದ ಮಾಹಿತಿ**

| | |
|---|---|
| 1) ಹೆಸರು ಮತ್ತು ಪೂರ್ಣ ವಿಳಾಸ | : |
| 2) ಮೀನುಗಾರಿಕೆ ಪದವಿಯ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿ ಲಗತ್ತಿಸುವುದು. | : |
| 3) ಗುತ್ತಿಗೆಗೆ ಕೋರಿರುವ ಜಲಸಂಪನ್ಮೂಲದ ಹೆಸರು, ಜಲವಿಸ್ತೀರ್ಣ ಹಾಗೂ ಅಚ್ಚುಕಟ್ಟು ವಿಸ್ತೀರ್ಣದ ವಿವರ ನೀಡುವುದು. | : |
| 4) ಗುತ್ತಿಗೆಗೆ ಪಡೆಯಲು ಕೋರಿರುವ ಜಲಸಂಪನ್ಮೂಲವು ಅವರ ಜಿಲ್ಲೆಯ ವ್ಯಾಪ್ತಿಯಲ್ಲಿ ಇದೆಯೇ? | : |
| 5) ಗುತ್ತಿಗೆಗೆ ಕೋರಲಾದ ಜಲಸಂಪನ್ಮೂಲದ ಗುತ್ತಿಗೆಯ ಮೊತ್ತವನ್ನು ಮತ್ತು ಠೇವಣಿ ಮೊತ್ತವನ್ನು ಮುಂಗಡವಾಗಿ ಡಿ.ಡಿ. ಮುಖಾಂತರ ಪಾವತಿಸಲಾಗಿದೆಯೇ? (ಡಿ.ಡಿ. ಸಂಖ್ಯೆ, ದಿನಾಂಕ ಹಾಗೂ ಮೊತ್ತದ ವಿವರ ನೀಡುವುದು) | : |
| 6) ಅರ್ಜಿದಾರರು ಕರ್ನಾಟಕದಲ್ಲಿ ಜನಿಸಿದವರಾಗಿರತಕ್ಕದ್ದು ಅಥವಾ ಕರ್ನಾಟಕದಲ್ಲಿ ಕನಿಷ್ಟ ಪಕ್ಷ 10 ವರ್ಷಗಳಿಗೆ ಕಡಿಮೆ ಇಲ್ಲದಂತೆ ವಾಸಿಸಿರತಕ್ಕದ್ದು. ಈ ಸಂಬಂಧಿತ ಅಧಿವಾಸ ಪ್ರಮಾಣ ಪತ್ರವನ್ನು (Domicile Certificate) ಸಂಬಂಧಪಟ್ಟ ತಹಶೀಲ್ದಾರರಿಂದ ಪಡೆದು ಸಲ್ಲಿಸಲಾಗಿದೆಯೇ? | : |
| 7) ಈ ಹಿಂದೆ ಜಲಸಂಪನ್ಮೂಲವನ್ನು ಗುತ್ತಿಗೆಗೆ ಪಡೆದಿದ್ದಲ್ಲಿ, ಸದರಿ ಜಲಸಂಪನ್ಮೂಲದಲ್ಲಿನ ಮೀನು ಕೃಷಿ ಬಗ್ಗೆ ವಿವರ ನೀಡುವುದು. (ಜಲವಿಸ್ತೀರ್ಣದ, ಅಚ್ಚುಕಟ್ಟು ಪ್ರದೇಶದ, ಬಿತ್ತನೆ ಮಾಡಲಾದ ಮೀನುಮರಿಗಳ, ಹಿಡುವಳಿ ಮಾಡಿದ ಬಗ್ಗೆ ಮತ್ತು ಬಂದ ಆದಾಯದ ವಿವರಗಳನ್ನು ನೀಡತಕ್ಕದ್ದು). | : |
| 8) ಇತರೆ ವಿವರಗಳೇನಾದರೂ ಇದ್ದಲ್ಲಿ, ನೀಡುವುದು. | : |

ಮೇಲ್ಕಾಣಿಸಿದ ಜಲಸಂಪನ್ಮೂಲವನ್ನು ಗುತ್ತಿಗೆಗೆ ಪಡೆದಲ್ಲಿ ಸರ್ಕಾರದ/ಮೀನುಗಾರಿಕೆ ಇಲಾಖೆಯ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧರಾಗಿರುತ್ತೇವೆಂದು/ನೆಂದು ಹಾಗೂ ಕಾಲಕಾಲಕ್ಕೆ ವಿಧಿಸಬಹುದಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳಿಗೂ ಬದ್ಧರಾಗಿರುತ್ತೇವೆಂದು/ನೆಂದು ಮತ್ತು ನಿಗದಿತ ಮೌಲ್ಯದ ಛಾಪಾ ಕಾಗದದಲ್ಲಿ ಈ ಬಗ್ಗೆ ಮುಚ್ಚಳಿಕೆ ಪತ್ರವನ್ನು ಬರೆದುಕೊಡುತ್ತೇವೆಂದು/ನೆಂದು ತಿಳಿಸಬಯಸುತ್ತೇವೆ/ತ್ತೇನೆ.

ಸ್ಥಳ

ಅರ್ಜಿದಾರರ ಸಹಿ

ದಿನಾಂಕ:

**ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ/167/ಮೀಇಇ/2005, ದಿನಾಂಕ: 28-1-2006ರ**

**ಅನುಬಂಧ-6**

**(ಮೀನುಗಾರಿಕೆ ಇಲಾಖೆ)**

**ಸರ್ಕಾರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆದ ಗುತ್ತಿಗೆದಾರರು ಬರೆದು ಕೊಡಬೇಕಾದ ಮುಚ್ಚಳಿಕೆಯ ಪತ್ರ**

ಸನ್ ಎರಡು ಸಾವಿರದ . . . . . . . . ನೇ ಇಸವಿ . . . . . . . . ಮಾಹೆಯ. . . . . ದಿನಾಂಕದಂದು. . . . . ಗ್ರಾಮಕ್ಕೆ ಸೇರಿದ . . . . . . . . ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆದು ಈ ದಿನ ಅಂದರೆ ದಿನಾಂಕ . . . . . . ರಂದು ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇ-2), . . . . . . . . ತಾಲ್ಲೂಕು ಇವರಿಗೆ . . . . . . . . . . ಎಂಬ ನಾನು / . . . . . . . . ಮೀನುಗಾರರ ಸಹಕಾರ ಸಂಘ / . . . . . . . . . ಸಂಸ್ಥೆಯು ಖುದ್ದಾಗಿ ಬರೆದು ಕೊಟ್ಟ ಮುಚ್ಚಳಿಕೆ ಪತ್ರ.

ಈ ಮೇಲ್ಕಂಡ . . . . . . . . . . ಗ್ರಾಮದ . . . . . . . ಜಲಸಂಪನ್ಮೂಲದಲ್ಲಿ ಮೀನು ಹಿಡಿಯುವ ಪಾಶುವಾರು ಹಕ್ಕನ್ನು ದಿನಾಂಕ:. . . . . . . . ರಿಂದ . . . . . . . . ದಿನಾಂಕದವರೆಗೆ ನಾನು / ನಾವು ಗುತ್ತಿಗೆ ಮೂಲಕ ಪಡೆದುಕೊಂಡಿದ್ದೇನೆ / ದ್ದೇವೆ. ಸದರಿ ಗುತ್ತಿಗೆಯ ಪ್ರಥಮ ವರ್ಷದ ಗುತ್ತಿಗೆ ಹಣದ ಬಾಬ್ತು ರೂ. /- ಗಳನ್ನು ಮತ್ತು ಇದಕ್ಕೆ ಸಂಬಂಧಪಟ್ಟ ಠೇವಣಿ ಮೊತ್ತ ರೂ. . . . . ಗಳನ್ನು ಅಂದರೆ ಈ ರೀತಿಯಾಗಿ ಒಟ್ಟು ರೂ. . . . . . . ಗಳನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇ-2) . . . . . ರವರ ಕಛೇರಿಯಲ್ಲಿ . . . . . . . . ಬ್ಯಾಂಕಿನ

ಹುಂಡಿ (ಡಿ.ಡಿ.) ಸಂಖ್ಯೆ: . . . . . . . . ದಿನಾಂಕ: . . . . . . . . ರ ಮುಖಾಂತರ ಪಾವತಿ ಮಾಡಿ ರಶೀದಿಯನ್ನು ಪಡೆಯಲಾಗಿದೆ.

ಗುತ್ತಿಗೆಗೆ ಪಡೆಯಲಾದ . . . . . . . . ಜಲಸಂಪನ್ಮೂಲದಲ್ಲಿ ಮೀನು ಕೃಷಿ ಕೈಗೊಳ್ಳುವ ಪೂರ್ಣ ಗುತ್ತಿಗೆ ಅವಧಿಯಲ್ಲಿ ಈ ಸಂಬಂಧಿತವಾಗಿ ಸರ್ಕಾರದಿಂದ/ಮೀನುಗಾರಿಕೆ ಇಲಾಖೆಯಿಂದ ಈಗಾಗಲೇ ವಿಧಿಸಿರುವ/ಇನ್ನು ಮುಂದೆ ವಿಧಿಸಬಹುದಾದ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸಲು ನಾನು/ನಮ್ಮ ಸಂಘವು/ಸಂಸ್ಥೆಯು ಬದ್ಧನಾಗಿರುತ್ತೇನೆ/ಬದ್ಧವಾಗಿರುತ್ತದೆ. ಸದರಿ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ನನಗೆ/ನಮ್ಮ ಸಂಘಕ್ಕೆ/ಸಂಸ್ಥೆಗೆ ನೀಡಿದ ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಆದೇಶವನ್ನು ತಕ್ಷಣ ರದ್ದುಪಡಿಸಲು ನನ್ನ/ನಮ್ಮ ಅಭ್ಯಂತರವಿರುವುದಿಲ್ಲ.

ಈ ಗುತ್ತಿಗೆ ಅವಧಿಯ ನಂತರ ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕು ನನಗೆ/ ನಮ್ಮ ಸಂಘಕ್ಕೆ/ಸಂಸ್ಥೆಗೆ ಇರುವುದಿಲ್ಲವೆಂದು ನನಗೆ/ನಮಗೆ ಮನವರಿಕೆಯಾಗಿದೆ.

## ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆದ ಗುತ್ತಿಗೆದಾರರು ಕಡ್ಡಾಯವಾಗಿ ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳು

1. ಸರ್ಕಾರಿ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆಯಲು ಬಯಸುವ ಅರ್ಹ ಸಂಘ/ಸಂಸ್ಥೆಗಳು, ಆಯಾಯ ಸಂಘ/ಸಂಸ್ಥೆಗಳ ಠರಾವು, ಕಳೆದ ಮೂರು ವರ್ಷಗಳ ಲೆಕ್ಕ ಪರಿಶೋಧನಾ ವರದಿ, ಬೈಲಾ ಪ್ರತಿ, ಈಗಾಗಲೇ ಮೀನುಗಾರಿಕೆ ಚಟುವಟಿಕೆಯನ್ನು ಕೈಗೊಂಡಿದ್ದಲ್ಲಿ ಕಳೆದ ಮೂರು ವರ್ಷಗಳ ಕೆರೆವಾರು ಮೀನುಮರಿಗಳ ಬಿತ್ತನೆ ವಿವರಗಳನ್ನು, ಹಿಡುವಳಿ ವಿವರಗಳನ್ನು ಮತ್ತು ಅವುಗಳಿಂದ ಬಂದ ಆದಾಯದ ವಿವರಗಳನ್ನು, ಇತ್ಯಾದಿ ವಿವರಗಳನ್ನೊಳಗೊಂಡ ಮಾಹಿತಿಯನ್ನು ಸಂಬಂಧಪಟ್ಟ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)ರವರಿಗೆ ನಿಗದಿತ ಅರ್ಜಿಯೊಂದಿಗೆ ನೀಡತಕ್ಕದ್ದು. ನಿರುದ್ಯೋಗಿ ಮೀನುಗಾರಿಕೆ ಪದವೀಧರರು ಮೀನು ಪಾಶುವಾರು ಹಕ್ಕನ್ನು ಕೋರಿ ಸಲ್ಲಿಸುವ ತಮ್ಮ ಅರ್ಜಿಯೊಂದಿಗೆ ಮೀನುಗಾರಿಕೆ ಪದವಿಯ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಹಾಗೂ ಕರ್ನಾಟಕ ರಾಜ್ಯದಲ್ಲಿ ಕನಿಷ್ಠ 10 ವರ್ಷಗಳಿಗೆ ಕಡಿಮೆ ಇಲ್ಲದಂತೆ ವಾಸವಾಗಿರುವುದಕ್ಕೆ ಸಂಬಂಧಪಟ್ಟ ತಹಶೀಲ್ದಾರರಿಂದ ವಸತಿ ಪ್ರಮಾಣ ಪತ್ರವನ್ನು ಪಡೆದು ಲಗತ್ತಿಸಿರತಕ್ಕದ್ದು.
2. ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿ (ನಿ), ಮೈಸೂರು ಇದರ ಸದಸ್ಯತ್ವವನ್ನು ಹೊಂದಿರುವ ನೋಂದಾಯಿತ ಮೀನುಗಾರರ ಸಹಕಾರ ಸಂಘಗಳು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಕೋರಿ ಅರ್ಜಿ ಸಲ್ಲಿಸುವಾಗ ಮೇಲಿನ ಕ್ರಮ ಸಂಖ್ಯೆ 1ರಲ್ಲಿ ಹೇಳಲಾಗಿರುವ ದಾಖಲಾತಿಗಳನ್ನು/ಮಾಹಿತಿಗಳೊಂದಿಗೆ ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿಯ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
3. ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆಯಲು ಆದ್ಯತೆಯಲ್ಲಿರುವ ನೋಂದಾಯಿತ ಮೀನುಗಾರಿಕೆ ಸಹಕಾರ ಸಂಘಗಳು ಅಥವಾ ಇತರೆ ಸಂಘ/ಸಂಸ್ಥೆಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿರುವ ಗರಿಷ್ಠ 300 ಹೆಕ್ಟೇರ್‌ಗಳ ಜಲವಿಸ್ತೀರ್ಣಕ್ಕೆ ಮೀರದಂತೆ ಗರಿಷ್ಠ ಐದು (5) ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಪಡೆಯಲು ಮಾತ್ರ ಅರ್ಹತೆಯನ್ನು ಹೊಂದಿರುತ್ತವೆ. ಒಂದು ವೇಳೆ ಒಂದು ಜಲಸಂಪನ್ಮೂಲದ ಜಲವಿಸ್ತೀರ್ಣವು 300 ಹೆಕ್ಟೇರ್‌ಗಳಿಗಿಂತ ಹೆಚ್ಚಿದ್ದಲ್ಲಿ, ಅಂತಹ ಒಂದು ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಮಾತ್ರ ಗುತ್ತಿಗೆಗೆ ನೀಡಲಾಗುವುದು. ನಿರುದ್ಯೋಗಿ ಮೀನುಗಾರಿಕೆ ಪದವೀಧರರು ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿಯ ಒಂದು ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆಯಲು ಅರ್ಹರಿರುತ್ತಾರೆ.
4. ಹೊಸದಾಗಿ ನೋಂದಾಯಿಸಲ್ಪಟ್ಟ ಮೀನುಗಾರಿಕೆ ಸಹಕಾರ ಸಂಘಗಳು ಮತ್ತು ಇತರೇ ಸಂಘ / ಸಂಸ್ಥೆಗಳು ನೋಂದಾಯಿಸಲ್ಪಟ್ಟ ದಿನಾಂಕದಿಂದ **ಒಂದು ವರ್ಷದ ನಂತರ** ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಪಡೆಯಲು ಅರ್ಹತೆಯನ್ನು ಹೊಂದುತ್ತವೆ (ಜಲ ಸಂವರ್ಧನೆ ಯೋಜನಾ ಸಂಘದ ಕಾರ್ಯಕ್ರಮವು ವಿಶ್ವ ಬ್ಯಾಂಕಿನ ನೆರವಿನಡಿ ಹಮ್ಮಿಕೊಂಡಿರುವ ಕಾಲಮಿತಿ ಯೋಜನೆಯಾಗಿರುವುದರಿಂದ, ಈ ನಿಯಮವು ಜಲ ಸಂವರ್ಧನೆ ಯೋಜನಾ ಸಂಘದಡಿ ನೋಂದಾಯಿಸಲ್ಪಟ್ಟ ಸಂಘಗಳಿಗೆ ಅನ್ವಯಿಸುವುದಿಲ್ಲ).
5. ಸರ್ಕಾರಿ ಜಲಸಂಪನ್ಮೂಲದ ಒಟ್ಟು ಜಲವಿಸ್ತೀರ್ಣದ ಶೇಕಡ 50ರಷ್ಟು ಜಲವಿಸ್ತೀರ್ಣವನ್ನು ಉಪಯುಕ್ತತಾ ಜಲವಿಸ್ತೀರ್ಣ ಪ್ರದೇಶವೆಂದು ಗಣನೆಗೆ ತೆಗೆದುಕೊಂಡು, ಈ ರೀತಿ ಗಣನೆಗೆ ತೆಗೆದುಕೊಂಡ ಜಲವಿಸ್ತೀರ್ಣಕ್ಕೆ ಪ್ರತಿ ಹೆಕ್ಟೇರಿಗೆ ರೂ.150-00ರಂತೆ ಮೊದಲನೇ ವರ್ಷ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಲಾಗುವುದು. ಈ ರೀತಿ ನಿಗಧಿಪಡಿಸಿದ ಗುತ್ತಿಗೆ ಮೊತ್ತಕ್ಕೆ ಗುತ್ತಿಗೆ ಅವಧಿಯಲ್ಲಿ ಪ್ರತಿವರ್ಷ ಹಿಂದಿನ ವರ್ಷದ ಗುತ್ತಿಗೆ ಮೊತ್ತಕ್ಕೆ ಶೇಕಡ 5ರಂತೆ ಹೆಚ್ಚಿಸಿ ಗುತ್ತಿಗೆ ಮೊತ್ತವನ್ನು ನಿಗದಿಪಡಿಸಲಾಗುವುದು.
6. ಗುತ್ತಿಗೆಗೆ ಪಡೆಯಲು ಬಯಸಿದವರು ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕಿನ ಮೊದಲನೇ ವರ್ಷದ ಗುತ್ತಿಗೆ ಹಣವನ್ನು ಅರ್ಜಿ ಸಲ್ಲಿಸುವ ಸಮಯದಲ್ಲಿ ಮುಂಗಡವಾಗಿ ನಗದು ಹುಂಡಿ ಮುಖಾಂತರ ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗೆ ನೀಡಿ, ತಾತ್ಕಾಲಿಕ ರಶೀದಿಯನ್ನು ಪಡೆಯತಕ್ಕದ್ದು. ಜಲಸಂಪನ್ಮೂಲಗಳ ಗುತ್ತಿಗೆಯು ಮೇಲಾಧಿಕಾರಿಗಳ ಮಂಜೂರಾತಿಗೆ ಒಳಪಟ್ಟಿದ್ದರಿಂದ, ಮುಂಗಡವಾಗಿ ಪಾವತಿಸಿದ ಬಾಬ್ತು ಯಾವುದೇ ಕಾರಣಕ್ಕೂ ಮೊದಲನೇ ವರ್ಷದ ಗುತ್ತಿಗೆ ಹಣವೆಂದು ಭಾವಿಸಿ ಮೀನು ಪಾಶುವಾರು ಹಕ್ಕನ್ನು ಹೊಂದಲು ಬರುವುದಿಲ್ಲ.
7. ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಆದೇಶವನ್ನು ಹೊರಡಿಸಿದ ದಿನಾಂಕವನ್ನು ಗಣನೆಗೆ ತೆಗೆದುಕೊಳ್ಳದೆ ಮೀನು ಪಾಶುವಾರು ಹಕ್ಕಿನ ಅವಧಿಯು ಪ್ರತಿವರ್ಷ ಜುಲೈ 1ರಿಂದ ಮುಂದಿನ ವರ್ಷದ ಜೂನ್ 30ರವರೆಗೆ ಮಾತ್ರ ಇರುತ್ತದೆ.
8. ಗುತ್ತಿಗೆದಾರರು ಜಲಸಂಪನ್ಮೂಲದ ಗುತ್ತಿಗೆ ಮೊತ್ತದ ಶೇಕಡ 25ರಷ್ಟು ಹಣವನ್ನು ಠೇವಣಿಯಾಗಿ ಮೊದಲನೇ ವರ್ಷದ ಗುತ್ತಿಗೆ ಮೊತ್ತದೊಂದಿಗೆ ಡಿ.ಡಿ. ಮುಖಾಂತರ ಪಾವತಿಸತಕ್ಕದ್ದು. ಯಾವುದೇ ಷರತ್ತಿನ ಅಥವಾ

ನಿಬಂಧನೆಯ ಉಲ್ಲಂಘನೆಯಾದಲ್ಲಿ ಸದರಿ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಇಲ್ಲದಿದ್ದಲ್ಲಿ ಈ ಠೇವಣಿ ಹಣವನ್ನು ಬಡ್ಡಿರಹಿತವಾಗಿ ಗುತ್ತಿಗೆ ಅವಧಿಯು ಮುಗಿದನಂತರ ಗುತ್ತಿಗೆದಾರರಿಗೆ ಹಿಂದಿರುಗಿಸಲಾಗುವುದು.

9. ಗುತ್ತಿಗೆದಾರರು ಗುತ್ತಿಗೆ ಅವಧಿಯ ಪ್ರತಿ ಮೀನುಗಾರಿಕೆ ಫಸಲಿ ವರ್ಷದ ಪ್ರಾರಂಭದಲ್ಲಿ ಅಂದರೆ ಜುಲೈ 31ರೊಳಗಾಗಿ ಪೂರ್ಣ ಗುತ್ತಿಗೆ ಮೊತ್ತವನ್ನು ಪಾವತಿ ಮಾಡಿ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ನವೀಕರಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಗುತ್ತಿಗೆ ಆದೇಶವನ್ನು ತಕ್ಷಣ ರದ್ದುಗೊಳಿಸಲಾಗುತ್ತದೆ.
10. ಗುತ್ತಿಗೆಗೆ ಪಡೆದ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆದಾರರು ಯಾವುದೇ ಕಾರಣಕ್ಕೂ ವರ್ಗಾಯಿಸತಕ್ಕದ್ದಲ್ಲ ಅಥವಾ ಉಪ ಗುತ್ತಿಗೆಗೆ ನೀಡತಕ್ಕದ್ದಲ್ಲ.
11. ಗುತ್ತಿಗೆದಾರರು ಗುತ್ತಿಗೆಗೆ ಪಡೆದ ಜಲಸಂಪನ್ಮೂಲಗಳಲ್ಲಿ ಇಲಾಖೆಯ ಅಧಿಕಾರಿಗಳು ಸೂಚಿಸಿದ ಪ್ರಮಾಣದಲ್ಲಿ ಮೀನುಮರಿಗಳ ಬಿತ್ತನೆ ಮಾಡತಕ್ಕದ್ದು. ಮೀನುಗಾರಿಕೆ ಇಲಾಖೆಯಿಂದ ಅನುಮೋದಿತ ತಳಿಯ ಮೀನುಮರಿಗಳನ್ನು ಮಾತ್ರ ಮೀನುಗಾರಿಕೆ ಇಲಾಖೆಯಿಂದಾಗಲಿ ಅಥವಾ ಮೀನುಗಾರಿಕೆ ಇಲಾಖೆಯಿಂದ ಅನುಮೋದಿಸಲ್ಪಟ್ಟ ಮೀನುಮರಿ ಉತ್ಪಾದನಾ / ಪಾಲನಾ ಕೇಂದ್ರಗಳಿಂದಾಗಲಿ ಖರೀದಿಸಿದ ನಂತರ ಇಲಾಖಾ ಅಧಿಕಾರಿಗಳ ಸಮ್ಮುಖದಲ್ಲಿಯೇ ಬಿತ್ತನೆ ಮಾಡತಕ್ಕದ್ದು. ರಾಜ್ಯದಲ್ಲಿ ಬಿತ್ತನೆ ಮೀನುಮರಿಗಳು ಲಭ್ಯವಿಲ್ಲದಿದ್ದಲ್ಲಿ, ಹೊರ ರಾಜ್ಯಗಳಿಂದ ಮೀನುಮರಿ ಪಡೆಯಲು ಸಂಬಂಧಪಟ್ಟ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)ರವರ ಅನುಮತಿ ಪಡೆದು, ಆಮದು ಮಾಡಿಕೊಂಡು ಅವರ ಸಮ್ಮುಖದಲ್ಲಿಯೇ ಬಿತ್ತನೆ ಮಾಡತಕ್ಕದ್ದು.
12. ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆದ ಯಾವುದೇ ಗುತ್ತಿಗೆದಾರರು ನಿಷೇಧಿತ ಮೀನು ತಳಿಗಳಾದ ಪ್ರಮುಖವಾಗಿ ಆಫ್ರಿಕನ್ ಕ್ಯಾಟ್ ಫಿಶ್ (ಆನೆ ಮೀನು), ಪಂಗೇಷಿಯಸ್ ಜಾತಿಯ ಮೀನು, ಚೈನೀಸ್ ಬಿಗ್‌ಹೆಡ್, ತಿಲಾಪಿಯ (ಜಿಲೇಬಿ), ಮತ್ತು ಇತರೆ ನಿಷೇದಿತ ಮೀನುಮರಿಗಳ ಬಿತ್ತನೆ ಮಾಡುವುದು ಅಥವಾ ಅಭಿವೃದ್ಧಿಪಡಿಸುವುದು ಅಥವಾ ಮಾರಾಟ ಮಾಡುವುದು ಕಂಡುಬಂದಲ್ಲಿ ಅವರಿಗೆ ನೀಡಲಾದ ಗುತ್ತಿಗೆಯನ್ನು ಕೂಡಲೇ ರದ್ದುಪಡಿಸಿ ಆ ಸಾಲಿನ ಗುತ್ತಿಗೆ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದಲ್ಲದೇ, ಸಂಬಂಧಪಟ್ಟ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರ್ಪಡಿಸಿ ಅವರಿಗೆ ಮೀನುಗಾರಿಕೆ ಇಲಾಖೆಯಿಂದ ಯಾವುದೇ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಮುಂದಕ್ಕೆ ನೀಡಲಾಗುವುದಿಲ್ಲ.
13. ಗುತ್ತಿಗೆದಾರರು ಗುತ್ತಿಗೆ ಪಡೆದ ಜಲಸಂಪನ್ಮೂಲದಲ್ಲಿ ಮೀನನ್ನು ಹಿಡಿಯುವಾಗ ಸದರಿ ಜಲಸಂಪನ್ಮೂಲದ ಕಟ್ಟೆ, ಏರಿ, ತೂಬು ಮುಂತಾದವುಗಳಿಗೆ ಯಾವುದೇ ರೀತಿಯ ಹಾನಿ ಉಂಟಾಗದಂತೆ ನೋಡಿಕೊಳ್ಳತ್ತಕ್ಕದ್ದು. ಹಾನಿ ಉಂಟಾದಲ್ಲಿ ಅಂತಹ ನಷ್ಟಕ್ಕೆ ಅವರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.
14. ಗುತ್ತಿಗೆ ಪಡೆದ ಜಲಸಂಪನ್ಮೂಲಗಳಲ್ಲಿ ಗುತ್ತಿಗೆದಾರರು ಸಿಡಿಮದ್ದಿನ ಅಥವಾ ವಿಷದ ಪ್ರಯೋಗವನ್ನಾಗಲಿ ಮಾಡಿ ಮೀನು ಹಿಡಿಯತಕ್ಕದ್ದಲ್ಲ. ಈ ನಿಬಂಧನೆಯನ್ನು ಉಲ್ಲಂಘಿಸಿದ ಗುತ್ತಿಗೆದಾರರ ಗುತ್ತಿಗೆಯನ್ನು ತಕ್ಷಣದಿಂದ ರದ್ದುಪಡಿಸಲಾಗುವುದು.
15. ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿನ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆದ ಸಂಘ/ಸಂಸ್ಥೆಗಳ ಲೆಕ್ಕ ಪತ್ರಗಳನ್ನು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು ಪರಿಶೋಧನೆ ಮಾಡುವ ಅಧಿಕಾರವನ್ನು ಹೊಂದಿರುತ್ತಾನೆ.
16. ಗುತ್ತಿಗೆದಾರರ ಜಲಸಂಪನ್ಮೂಲಗಳಲ್ಲಿ ಪಂಜರಗಳಲ್ಲಿ ಮೀನುಮರಿಗಳನ್ನು ಸಾಕುವ ಹಕ್ಕು ಮೀನುಗಾರಿಕೆ ಇಲಾಖೆಗೆ ಇರುತ್ತದೆ. ಅಲ್ಲದೇ ಸದರಿ ಜಲಸಂಪನ್ಮೂಲಗಳಲ್ಲಿ ಮೀನುಗಾರಿಕೆ ಸಂಶೋಧನೆ ಮತ್ತು ಸಂಬಂಧಪಟ್ಟ ಚಟುವಟಿಕೆಗಳನ್ನು ಕೈಗೊಳ್ಳುವ ಹಕ್ಕು ಮೀನುಗಾರಿಕೆ ಇಲಾಖೆಗೆ ಇರುತ್ತದೆ.
17. ಅರಣ್ಯ ಇಲಾಖೆ/ಕೆರೆ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆ ಇಲಾಖೆಯ ಮುಖಾಂತರ ಪಡೆಯುವಾಗ ಅರಣ್ಯ ಇಲಾಖೆಯು/ಕೆರೆ ಅಭಿವೃದ್ಧಿ ಪ್ರಾಧಿಕಾರವು ವಿಧಿಸಬಹುದಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳನ್ನು ಗುತ್ತಿಗೆದಾರರು ಪಾಲಿಸತಕ್ಕದ್ದು.
18. ಗುತ್ತಿಗೆದಾರರು ಮೇಲಿನ ಯಾವುದೇ ಷರತ್ತು ಅಥವಾ ನಿಬಂಧನೆಯನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆಗೆ ಪಡೆಯಲಾದ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಆದೇಶವನ್ನು ರದ್ದುಪಡಿಸಲಾಗುವುದು.
19. ಸರ್ಕಾರದ ಮತ್ತು ಸ್ಥಳೀಯ ಮೀನುಗಾರರ ಹಿತದೃಷ್ಠಿಯಿಂದ ಸಂಘ/ಸಂಸ್ಥೆಗಳಿಗೆ ನೀಡಿದ ಜಲಸಂಪನ್ಮೂಲಗಳ ಗುತ್ತಿಗೆ ಅವಧಿಯನ್ನು ಮೊಟಕುಗೊಳಿಸುವ ಅಥವಾ ರದ್ದುಗೊಳಿಸುವ ಅಧಿಕಾರ ಸರ್ಕಾರಕ್ಕಿರುತ್ತದೆ.
20. ಸರ್ಕಾರದಿಂದ/ಮೀನುಗಾರಿಕೆ ಇಲಾಖೆಯಿಂದ ಕಾಲ ಕಾಲಕ್ಕೆ ವಿಧಿಸಲ್ಪಡುವ ಅಥವಾ ಮಾರ್ಪಡಿಸಲಾಗುವ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳಿಗೆ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.

ದಿನಾಂಕ:

ಗುತ್ತಿಗೆದಾರರ ಸಹಿ ಮತ್ತು ವಿಳಾಸ

ಸಾಕ್ಷಿಗಳು

1)

2)

3)

(ವಿ.ಸೂ. :- ರೂ.100-00ರ ಮೌಲ್ಯದ ಛಾಪಾ ಕಾಗದದಲ್ಲಿ ಗುತ್ತಿಗೆದಾರರು ಬರೆದುಕೊಡಬೇಕಾದ ಮುಚ್ಚಳಿಕೆ ಪತ್ರ)

**ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ/167/ಮೀಇಇ/2005, ದಿನಾಂಕ: 28-1-2006ರ**

**ಅನುಬಂಧ-7**

**(ಮೀನುಗಾರಿಕೆ ಇಲಾಖೆ)**

ಸಂಖ್ಯೆ: ಮೀನುಗಾರಿಕೆ ಸಹಾಯಕ ನಿರ್ದೇಶಕರು(ಶ್ರೇಣಿ-2)ರವರ ಕಛೇರಿ

--------------- ತಾಲ್ಲೂಕು, -------- ಜಿಲ್ಲೆ

ದಿನಾಂಕ: ---------------

**ಟೆಂಡರ್ ಮತ್ತು ಹರಾಜು ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ------------ಜಿಲ್ಲೆಯ ---------------- -ತಾಲ್ಲೂಕಿನ ಕೆಳಕಂಡ ಸರ್ಕಾರಿ ಜಲಸಂಪನ್ಮೂಲಗಳ (ಕೆರೆಗಳ, ಇತ್ಯಾದಿ) ಮೀನು ಪಾಶುವಾರು ಹಕ್ಕನ್ನು ----------ನೇ ಮೀನುಗಾರಿಕೆ ಫಸಲಿ ವರ್ಷದಿಂದ-------ನೇ ಮೀನುಗಾರಿಕೆ ಫಸಲಿ ವರ್ಷದವರೆಗೆ (ಅಂದರೆ ದಿನಾಂಕ:01-07- ರಿಂದ 30-06- ರವರೆಗೆ) ಒಟ್ಟು 5 (ಐದು) ವರ್ಷಗಳ ಅವಧಿಗೆ ಟೆಂಡರು ಮತ್ತು ಹರಾಜು ಮೂಲಕ ಈ ಕೆಳಗೆ ನಮೂದಿಸಿರುವ ದಿನಾಂಕದಂದು ಮತ್ತು ವೇಳೆಯಲ್ಲಿ ಸರ್ಕಾರದ/ಮೀನುಗಾರಿಕೆ ಇಲಾಖೆಯ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟಂತೆ ಈ ಕಛೇರಿಯಲ್ಲಿ ವಿಲೇವಾರಿ ಮಾಡಲಾಗುವುದು. ಸದರಿ ಟೆಂಡರು ಮತ್ತು ಹರಾಜಿನಲ್ಲಿ ಭಾಗವಹಿಸಲು ಆಸಕ್ತಿವುಳ್ಳವರು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ನಿಗದಿತ ದಿನಾಂಕ ಮತ್ತು ವೇಳೆಯೊಳಗಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು. ಟೆಂಡರ್/ಹರಾಜಿನ ಅರ್ಜಿಗೆ ಲಗತ್ತಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸುವುದಾಗಿ ಯಶಸ್ವಿ ಟೆಂಡರ್‌ದಾರರು/ಬಿಡ್‌ದಾರರು ನಿಗದಿತ ನಮೂನೆಯಲ್ಲಿ ಮುಚ್ಚಳಿಕೆ ಪತ್ರವನ್ನು ಬರೆದುಕೊಡತಕ್ಕದ್ದು.

**ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡಲು ಪ್ರಸ್ತಾಪಿಸಿರುವ ಜಲಸಂಪನ್ಮೂಲಗಳ ವಿವರಗಳು**

| ಕ್ರಮ ಸಂಖ್ಯೆ | ಜಲಸಂಪನ್ಮೂಲದ ಹೆಸರು | ಗ್ರಾಮದ ಹೆಸರು | ಜಲವಿಸ್ತೀರ್ಣ/ಅಚ್ಚುಕಟ್ಟು ಪ್ರದೇಶ (ಹೆಕ್ಟೇರ್‌ಗಳಲ್ಲಿ) | ಠೇವಣಿ ಮೊತ್ತ (ರೂ.) |
|---|---|---|---|---|
| | | | | |

ಮೊಹರಾದ ಲಕೋಟೆಯಲ್ಲಿ ಟೆಂಡರ್‌ನ್ನು ಸಲ್ಲಿಸುವ ಕೊನೆಯ ದಿನಾಂಕ : (ದಿನಾಂಕ ಮತ್ತು ವೇಳೆ ನಮೂದಿಸುವುದು)

ಮೊಹರಾದ ಲಕೋಟೆಯಲ್ಲಿನ ಟೆಂಡರ್ ತೆರೆಯುವ ಮತ್ತು ಹರಾಜು ನಡೆಸುವ ದಿನಾಂಕ ಮತ್ತು ವೇಳೆ : (ದಿನಾಂಕ ಮತ್ತು ವೇಳೆ ನಮೂದಿಸುವುದು)

ಸರ್ಕಾರಿ ಸವಾಲ್ ಮೊತ್ತ : ರೂ. --------------

ಮೀನುಗಾರಿಕೆ ಸಹಾಯಕ ನಿರ್ದೇಶಕರು(ಶ್ರೇಣಿ-2)

------------- ತಾಲ್ಲೂಕು.

**ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ/167/ಮೀಇಇ/2005, ದಿನಾಂಕ: 28-1-2006ರ**

**ಅನುಬಂಧ-8** **"ಗೌಪ್ಯ"**

**(ಮೀನುಗಾರಿಕೆ ಇಲಾಖೆ)**

**ದಿನಾಂಕ:**

**ಕ್ರಮ ಸಂಖ್ಯೆ :**

**ಸರ್ಕಾರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಪಡೆಯಲು ಸಲ್ಲಿಸಬೇಕಾದ ಟೆಂಡರ್ ಅರ್ಜಿ.**

. . . . . . . . . . ಜಿಲ್ಲೆಯ . . . . . . . . . . . . ತಾಲ್ಲೂಕಿನ. . . . . . . . ಜಲಸಂಪನ್ಮೂಲದ (ಕೆರೆ, ಇತ್ಯಾದಿ) ಮೀನು ಪಾಶುವಾರು ಹಕ್ಕನ್ನು ಗರಿಷ್ಟ 05 (ಐದು) ವರ್ಷಗಳ ಅವಧಿಗೆ (ದಿನಾಂಕ: 01.07. . . . ರಿಂದ 30.06. . . . ರವರೆಗೆ) ಗುತ್ತಿಗೆಗೆ ಪಡೆಯಲು ಟೆಂಡರ್ ಅರ್ಜಿ.

ತಮ್ಮ ಕಛೇರಿಯ ಟೆಂಡರ್/ಹರಾಜು ಪ್ರಕಟಣೆ ಸಂಖ್ಯೆ: . . . . . . . .ದಿನಾಂಕ . . . . . ರ ಮೇರೆಗೆ ಈ ಕೆಳಗೆ ಸಹಿ ಮಾಡಿರುವ ನಾನು/ಸಂಘವು/ಸಂಸ್ಥೆಯು . . . . . . . . . ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಪಡೆದುಕೊಳ್ಳಲು ಪ್ರಥಮ ವಾರ್ಷಿಕ ಗುತ್ತಿಗೆ ಮೊತ್ತ ರೂ . . . . . . . . . (ರೂಪಾಯಿ . . . . . . . . . . . . . . . . . . . . . ಮಾತ್ರ)ಗಳನ್ನು ಪಾವತಿಸಲು ನನಗೆ/ನಮಗೆ ಒಪ್ಪಿಗೆ ಇರುತ್ತದೆ. ಅದರಂತೆಯೆ ಇದರೊಂದಿಗೆ ಟೆಂಡರ್ ಬಾಬ್ತು ರೂ. . . . . . . . ಗಳ ನಗದು ಹುಂಡಿಯನ್ನು ( . . . . . . . . . ಬ್ಯಾಂಕಿನ ಹುಂಡಿ ಸಂಖ್ಯೆ: . . . . . . . ದಿನಾಂಕ:. . . . . . . . . .) ಲಗತ್ತಿಸಿರುತ್ತೇನೆ.

ಈ ಅರ್ಜಿಯೊಂದಿಗೆ ಲಗತ್ತಿಸಿರುವ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಹಾಗೂ ಸರ್ಕಾರವು/ಮೀನುಗಾರಿಕೆ ಇಲಾಖೆಯು ಕಾಲಕಾಲಕ್ಕೆ ವಿಧಿಸಬಹುದಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧನಾಗಿರುತ್ತೇನೆಂದು/ವೆಂದು ಮತ್ತು ಟೆಂಡರ್/ಹರಾಜಿನಲ್ಲಿ ಯಶಸ್ವಿಗೊಂಡಲ್ಲಿ ನಿಗದಿತ ಮೌಲ್ಯದ ಛಾಪಾಕಾಗದದಲ್ಲಿ ಮುಚ್ಚಳಿಕೆ ಪತ್ರವನ್ನು ಬರೆದುಕೊಡಲು ಒಪ್ಪಿಗೆ ಇರುತ್ತದೆಂದು ತಿಳಿಸಬಯಸುತ್ತೇನೆ/ತ್ತೇವೆ.

ದಿನಾಂಕ:

ಸ್ಥಳ

ಟೆಂಡರ್‌ದಾರರ ಸಹಿ
ಮತ್ತು ಪೂರ್ಣವಿಳಾಸ

(ವಿ.ಸೂ:- ಅರ್ಜಿ ಶುಲ್ಕ ರೂ.50-00)

**ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆದ ಟೆಂಡರ್‌ದಾರರು /ಬಿಡ್‌ದಾರರು ಕಡ್ಡಾಯವಾಗಿ ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳು**

1. ನಿಗದಿತ ಟೆಂಡರ್ ಅರ್ಜಿಯನ್ನು ಕಛೇರಿ ವೇಳೆಯಲ್ಲಿ ಟೆಂಡರ್ ಅರ್ಜಿ ಶುಲ್ಕ ರೂ.50-00ನ್ನು ಪಾವತಿಸಿ ಪಡೆಯತಕ್ಕದ್ದು. ಪ್ರತಿ ಜಲಸಂಪನ್ಮೂಲಕ್ಕೆ ಪ್ರತ್ಯೇಕ ಟೆಂಡರ್ ಅರ್ಜಿಯನ್ನು ಸಲ್ಲಿಸತಕ್ಕದ್ದು.
2. ಟೆಂಡರ್ ಮತ್ತು ಹರಾಜಿನಲ್ಲಿ ಭಾಗವಹಿಸುವವರು ಆಯಾ ಜಲಸಂಪನ್ಮೂಲಗಳ ಮುಂದೆ ಸೂಚಿಸಿರುವ ಠೇವಣಿ ಹಣವನ್ನು ಪ್ರತ್ಯೇಕ ನಗದು ಹುಂಡಿಯ (D.D.) ಮೂಲಕ ಪಾವತಿಸತಕ್ಕದ್ದು.
3. ಭರ್ತಿ ಮಾಡಿದ ಟೆಂಡರ್ ಅರ್ಜಿಯನ್ನು ಠೇವಣಿ ಮೊಬಲಗಿನ ನಗದು ಹುಂಡಿಯೊಡನೆ ಮೊಹರು ಮಾಡಿದ ಲಕೋಟೆಯಲ್ಲಿ ಸಂಬಂಧಪಟ್ಟ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)ರವರಿಗೆ ನಿಗದಿತ ದಿನಾಂಕ/ವೇಳೆಯೊಳಗಾಗಿ ಕಛೇರಿಯ ವೇಳೆಯಲ್ಲಿ ಸಲ್ಲಿಸತಕ್ಕದ್ದು. ಟೆಂಡರನ್ನೊಳಗೊಂಡ ಮೊಹರಾದ ಲಕೋಟೆಯ ಮೇಲೆ "______ ಕೆರೆಯ ಮೀನು ಪಾಶುವಾರು ಹಕ್ಕು ಪಡೆಯಲು ಟೆಂಡರು" ಎಂದು ಸ್ಪಷ್ಟವಾಗಿ ನಮೂದಿಸಿರತಕ್ಕದ್ದು.
4. ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್ ಮತ್ತು ಹರಾಜು ಮೂಲಕ ಗರಿಷ್ಠ ಐದು (05) ವರ್ಷಗಳ ಅವಧಿಗೆ ವಿಲೇವಾರಿ ಮಾಡಲಾಗುವುದು ಮತ್ತು ಬಿಡ್ (ಗುತ್ತಿಗೆ) ಮೊತ್ತವನ್ನು ಪ್ರತಿವರ್ಷ ಹಿಂದಿನ ವರ್ಷದ ಗುತ್ತಿಗೆ ಮೊತ್ತಕ್ಕೆ ಶೇ.5ರಂತೆ ಹೆಚ್ಚಿಸಿ ನಿಗದಿಪಡಿಸಲಾಗುವುದು.
5. ಟೆಂಡರ್‌ನಲ್ಲಿ ನಮೂದಿಸಿರುವ ಅತೀ ಹೆಚ್ಚಿನ ಮೊತ್ತ ಹಾಗೂ ಹರಾಜಿನಲ್ಲಿ ಸೂಚಿಸಲಾಗುವ ಅತೀ ಹೆಚ್ಚಿನ ಬಿಡ್ ಮೊತ್ತ ಈ ಎರಡರಲ್ಲಿ ಯಾವುದು ಹೆಚ್ಚಿಗೆ ಇರುವುದೋ ಅದನ್ನು ವಾರ್ಷಿಕ ಗುತ್ತಿಗೆ ಮೊತ್ತವೆಂದು ಪರಿಗಣಿಸಲಾಗುವುದು.
6. ಟೆಂಡರ್/ಬಿಡ್ ಮೊತ್ತವು ಸರ್ಕಾರಿ ಸವಾಲಿಗಿಂತ ಕಡಿಮೆ ಇದ್ದಲ್ಲಿ, ಟೆಂಡರ್/ಹರಾಜನ್ನು ತಿರಸ್ಕರಿಸಿ ಮರು ಟೆಂಡರ್/ಹರಾಜಿನ ಮೂಲಕ ವಿಲೇವಾರಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.
7. ಟೆಂಡರ್/ಹರಾಜು ಮುಗಿದ ಕೂಡಲೆ ಆಖೈರಾದ ಅತಿ ಹೆಚ್ಚಿನ ಟೆಂಡರ್/ಬಿಡ್ ಮೊತ್ತವನ್ನು ಯಶಸ್ವಿ ಟೆಂಡರ್‌ದಾರರು/ಬಿಡ್‌ದಾರರು ಹರಾಜು ಮಾಡಿದ ಸ್ಥಳದಲ್ಲೇ ಪಾವತಿ ಮಾಡಿ ಸಂಬಂಧಪಟ್ಟ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2) ರವರಿಂದ ಅಧಿಕೃತ ರಸೀದಿಯನ್ನು ಪಡೆಯತಕ್ಕದ್ದು. ತಪ್ಪಿದಲ್ಲಿ ಸದರಿಯವರು ಟೆಂಡರ್-ಕಂ-ಹರಾಜಿನ ಬಗ್ಗೆ ನೀಡಿದ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಎರಡನೇ ಅತಿ ಹೆಚ್ಚಿನ ಟೆಂಡರ್‌ದಾರರು/ಬಿಡ್‌ದಾರರು, ಮೊದಲನೇ ಟೆಂಡರುದಾರರು/ಬಿಡ್‌ದಾರರು ಸೂಚಿಸಿದ ಗರಿಷ್ಠ ಟೆಂಡರ್ ಅಥವಾ ಬಿಡ್ ಮೊತ್ತವನ್ನು ಸ್ಥಳದಲ್ಲಿಯೇ ಪಾವತಿಸಲು ಒಪ್ಪಿದಲ್ಲಿ ಮಾತ್ರ ಅವರ ಹೆಸರಿಗೆ ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ನೀಡಲು ಪರಿಗಣಿಸಲಾಗುವುದು. ಒಂದು ವೇಳೆ ಎರಡನೇ ಅತೀ ಹೆಚ್ಚು ಮೊತ್ತವನ್ನು ಸೂಚಿಸಿದ ಟೆಂಡರ್‌ದಾರರು/ಬಿಡ್‌ದಾರರು ಕೂಡ ಇದಕ್ಕೆ ಒಪ್ಪದಿದ್ದ ಪಕ್ಷದಲ್ಲಿ, ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಮರು ಟೆಂಡರ್ ಮತ್ತು ಹರಾಜು ಮೂಲಕ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುವುದು.
8. ಟೆಂಡರ್/ಹರಾಜಿನಲ್ಲಿ ಯಶಸ್ವಿಯಾದ ಟೆಂಡರ್‌ದಾರರು/ಬಿಡ್‌ದಾರರು ಚಾಲ್ತಿಯಲ್ಲಿರುವ ಇಲಾಖಾ ಷರತ್ತು ಮತ್ತು ನಿಬಂಧನೆಗಳಿಗೆ ಹಾಗೂ ಈ ದಿಸೆಯಲ್ಲಿ ಸರ್ಕಾರವು/ಮೀನುಗಾರಿಕೆ ಇಲಾಖೆಯು ಕಾಲಕಾಲಕ್ಕೆ ವಿಧಿಸಬಹುದಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧರಾಗಿರುವುದಾಗಿ ರೂ.100-00ರ ಮೌಲ್ಯದ ಛಾಪಾಕಾಗದದಲ್ಲಿ ನಿಗದಿತ ಮುಚ್ಚಳಿಕೆ ಪತ್ರವನ್ನು ಬರೆದು ಕೊಟ್ಟು ಸಂಬಂಧಪಟ್ಟ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2) ರವರಿಂದ ವಿಲೇವಾರಿ ದೃಢೀಕರಣ ಪತ್ರ ಪಡೆಯತಕ್ಕದ್ದು.
9. ಟೆಂಡರ್/ಹರಾಜನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವು ಇಲಾಖಾ ಮೇಲಾಧಿಕಾರಿಗಳಿಗೆ/ಸರ್ಕಾರಕ್ಕೆ ಇರುತ್ತದೆ. ಅಲ್ಲದೆ ಸರ್ಕಾರದ ಹಿತದೃಷ್ಟಿಯಿಂದ ಟೆಂಡರ್/ಹರಾಜನ್ನು ತಿರಸ್ಕರಿಸಿ ಮರು ವಿಲೇವಾರಿ ಮಾಡುವ ಹಕ್ಕು ಮೀನುಗಾರಿಕೆ ಇಲಾಖೆಗೆ ಸೇರಿರುತ್ತದೆ.
10. ಮೀನುಗಾರಿಕೆ ಫಸಲಿ ವರ್ಷವು ಪ್ರತೀ ವರ್ಷದ ಜುಲೈ 1 ರಿಂದ ಮರು ವರ್ಷದ ಜೂನ್ 30 ರವರೆಗೆ ಇರುತ್ತದೆ. ಮೀನು ಪಾಶುವಾರು ಹಕ್ಕನ್ನು ಟೆಂಡರ್/ಹರಾಜು ಮಾಡಿದ ದಿನಾಂಕವನ್ನು ಮತ್ತು ದೃಢೀಕರಣ ಮಾಡಿದ ದಿನಾಂಕವನ್ನು ಗಣನೆಗೆ ತೆಗೆದುಕೊಳ್ಳದೆ ಮೀನು ಪಾಶುವಾರು ಹಕ್ಕಿನ ಅವಧಿಯು ಪ್ರತೀವರ್ಷ ಜುಲೈ 1 ರಿಂದ ಮುಂದಿನ ವರ್ಷದ ಜೂನ್ 30ರವರೆಗೆ ಮಾತ್ರ ಇರುತ್ತದೆ.
11. ಯಶಸ್ವಿ ಟೆಂಡರ್‌ದಾರರು/ಬಿಡ್‌ದಾರರು ಗುತ್ತಿಗೆಗೆ ಪಡೆದ ಜಲಸಂಪನ್ಮೂಲದ ಒಟ್ಟು ಜಲ ವಿಸ್ತೀರ್ಣದ ಶೇ.50ರ ಭಾಗಕ್ಕೆ ಪ್ರತಿ ಹೆಕ್ಟೇರಿಗೆ ರೂ.150-00ರಂತೆ ಬಡ್ಡಿ ರಹಿತ ಠೇವಣಿ ಮೊತ್ತವನ್ನು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗೆ ಡಿ.ಡಿ. ಮುಖಾಂತರ ನೀಡತಕ್ಕದ್ದು. ಯಾವುದೇ ಷರತ್ತಿನ ಅಥವಾ ನಿಬಂಧನೆಯ ಉಲ್ಲಂಘನೆಯಾದಲ್ಲಿ ಸದರಿ ಠೇವಣಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಈ ಠೇವಣಿ ಮೊತ್ತವನ್ನು ಗುತ್ತಿಗೆ ಅವಧಿಯು ಮುಗಿದನಂತರ ಟೆಂಡರ್‌ದಾರರು/ಬಿಡ್‌ದಾರರು ಮರುಪಾವತಿಸಿಕೊಳ್ಳುವುದು.
12. ಟೆಂಡರ್‌ದಾರರು/ಬಿಡ್‌ದಾರರು ಗುತ್ತಿಗೆ ಅವಧಿಯ ಎರಡನೇ ವರ್ಷದ ಮತ್ತು ತದನಂತರದ ವಾರ್ಷಿಕ ಟೆಂಡರ್/ಬಿಡ್ ಮೊತ್ತವನ್ನು ಪ್ರತೀವರ್ಷ ಜುಲೈ 31ರೊಳಗಾಗಿ ಸಂಬಂಧಪಟ್ಟ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2) ರವರ ಕಛೇರಿಯಲ್ಲಿ ಪಾವತಿಸಿ ಅಧಿಕೃತ ರಸೀದಿಯನ್ನು ಪಡೆದುಕೊಳ್ಳತಕ್ಕದ್ದು. ತಪ್ಪಿದಲ್ಲಿ ಗುತ್ತಿಗೆಗೆ ಪಡೆಯಲಾದ ಮೀನು ಪಾಶುವಾರು ಹಕ್ಕನ್ನು ರದ್ದುಗೊಳಿಸಿ ಮರು ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

13. ಟೆಂಡರ್‌ದಾರರು/ಬಿಡ್‌ದಾರರು ಗುತ್ತಿಗೆಗೆ ಪಡೆದ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಯಾವುದೇ ಕಾರಣಕ್ಕೂ ಇತರರಿಗೆ ವರ್ಗಾಯಿಸತಕ್ಕದ್ದಲ್ಲ ಹಾಗೂ ಉಪ ಗುತ್ತಿಗೆಗೆ ನೀಡತಕ್ಕದ್ದಲ್ಲ.
14. ಟೆಂಡರ್‌ದಾರರು/ಬಿಡ್‌ದಾರರು ಗುತ್ತಿಗೆಗೆ ಪಡೆದ ಜಲಸಂಪನ್ಮೂಲಗಳಲ್ಲಿ ಇಲಾಖೆಯ ಅಧಿಕಾರಿಗಳು ಸೂಚಿಸಿದ ಪ್ರಮಾಣದಲ್ಲಿ ಮೀನುಮರಿಗಳ ಬಿತ್ತನೆ ಮಾಡತಕ್ಕದ್ದು. ಮೀನುಗಾರಿಕೆ ಇಲಾಖೆಯಿಂದ ಅನುಮೋದಿತ ತಳಿಯ ಮೀನುಮರಿಗಳನ್ನು ಮಾತ್ರ ಮೀನುಗಾರಿಕೆ ಇಲಾಖೆಯಿಂದಾಗಲಿ ಅಥವಾ ಮೀನುಗಾರಿಕೆ ಇಲಾಖೆಯಿಂದ ಅನುಮೋದಿಸಲ್ಪಟ್ಟ ಮೀನುಮರಿ ಉತ್ಪಾದನಾ/ಪಾಲನಾ ಕೇಂದ್ರಗಳಿಂದಾಗಲಿ ಖರೀದಿಸಿದ ನಂತರ ಇಲಾಖಾ ಅಧಿಕಾರಿಗಳ ಸಮ್ಮುಖದಲ್ಲಿಯೇ ಬಿತ್ತನೆ ಮಾಡತಕ್ಕದ್ದು. ರಾಜ್ಯದಲ್ಲಿ ಬಿತ್ತನೆ ಮೀನುಮರಿಗಳು ಲಭ್ಯವಿಲ್ಲದಿದ್ದಲ್ಲಿ, ಹೊರ ರಾಜ್ಯಗಳಿಂದ ಮೀನುಮರಿ ಪಡೆಯಲು ಸಂಬಂಧಪಟ್ಟ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)ರವರ ಅನುಮತಿ ಪಡೆದು, ಆಮದು ಮಾಡಿಕೊಂಡು ಅವರ ಸಮ್ಮುಖದಲ್ಲಿಯೇ ಬಿತ್ತನೆ ಮಾಡತಕ್ಕದ್ದು.
15. ನಿಷೇಧಿತ ಮೀನು ತಳಿಗಳಾದ ಪ್ರಮುಖವಾಗಿ ಆಫ್ರಿಕನ್ ಕ್ಯಾಟ್ ಫಿಶ್ (ಅಣೆ ಮೀನು), ಪಂಗೇಷಿಯಸ್ ಜಾತಿಯ ಮೀನು, ಚೈನೀಸ್ ಬಿಗ್‌ಹೆಡ್, ತಿಲಾಪಿಯಾ (ಜಿಲೇಬಿ) ಮತ್ತು ಇತರೆ ನಿಷೇಧಿತ ಮೀನು ತಳಿಗಳ ಬಿತ್ತನೆ ಮಾಡುವುದು ಅಥವಾ ಅಭಿವೃದ್ಧಿಪಡಿಸುವುದು ಅಥವಾ ಮಾರಾಟ ಮಾಡುವುದು ಕಂಡುಬಂದಲ್ಲಿ ಅಂತಹ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ರದ್ದುಪಡಿಸಿ ಗುತ್ತಿಗೆದಾರರು ಪಾವತಿಸಿದ ಠೇವಣಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೆ, **ಸಂಬಂಧಪಟ್ಟ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರ್ಪಡಿಸಿ ಅವರಿಗೆ ಮೀನುಗಾರಿಕೆ ಇಲಾಖೆಯಿಂದ ಯಾವುದೇ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಮುಂದಕ್ಕೆ ನೀಡಲಾಗುವುದಿಲ್ಲ.**
16. ಅಭಿವೃದ್ಧಿಪಡಿಸಿದ ಜಲಸಂಪನ್ಮೂಲಗಳು ಪ್ರಕೃತಿಯ ವಿಕೋಪಕ್ಕೆ ಒಳಗಾಗಿ ಯಾವುದೇ ರೀತಿಯ ಹಾನಿ ಉಂಟಾದರೆ ಅಂತಹ ನಷ್ಟಕ್ಕೆ ಸರ್ಕಾರವು/ಮೀನುಗಾರಿಕೆ ಇಲಾಖೆಯು ಜವಾಬ್ದಾರಿಯಲ್ಲ. ಲಾಭನಷ್ಟಗಳಿಗೆ ಟೆಂಡರ್‌ದಾರರೇ/ಬಿಡ್‌ದಾರರೇ ಹೊಣೆಗಾರರಾಗಿರುತ್ತಾರೆ.
17. ಗುತ್ತಿಗೆಗೆ ಪಡೆಯಲಾದ ಜಲಸಂಪನ್ಮೂಲಗಳಲ್ಲಿ ಸಿಡಿಮದ್ದುಗಳ ಮತ್ತು ವಿಷದ ಪ್ರಯೋಗದಿಂದ ಮೀನು ಹಿಡಿಯುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.
18. ಯಶಸ್ವಿ ಟೆಂಡರ್‌ದಾರರು/ಬಿಡ್‌ದಾರರು ಜಲಸಂಪನ್ಮೂಲಗಳಲ್ಲಿ ಹಿಡಿದ ಮೀನಿನ ಅಂಕಿ ಅಂಶಗಳನ್ನು ಪ್ರತಿವರ್ಷ ಮೀನುಗಾರಿಕೆ ಇಲಾಖೆಯ ಸಂಬಂಧಪಟ್ಟ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2) ರವರಿಗೆ ಒದಗಿಸತಕ್ಕದ್ದು.
19. ಟೆಂಡರ್‌ದಾರರಿಗೆ/ಬಿಡ್‌ದಾರರಿಗೆ ಗುತ್ತಿಗೆ ಅವಧಿಯ ಯಾವುದೇ ವರ್ಷದಲ್ಲಿ ಯಾವುದೇ ಕಾರಣಕ್ಕಾಗಿ ಟೆಂಡರ್/ಬಿಡ್ ಹಣವನ್ನು ಪಾವತಿ ಮಾಡುವುದರಲ್ಲಿ ರಿಯಾಯಿತಿ ನೀಡಲಾಗುವುದಿಲ್ಲ ಮತ್ತು ಟೆಂಡರ್/ಹರಾಜು ಅವಧಿಯನ್ನು ವಿಸ್ತರಿಸಲಾಗುವುದಿಲ್ಲ.
20. ಯಶಸ್ವಿ ಟೆಂಡರ್‌ದಾರರು/ಬಿಡ್‌ದಾರರು ಜಲಸಂಪನ್ಮೂಲಗಳಲ್ಲಿ ಮೀನು ಹಿಡಿದುಕೊಳ್ಳುವಾಗ ಜಲಸಂಪನ್ಮೂಲಗಳ ಕಟ್ಟೆ, ಏರಿ, ತೂಬು ಮುಂತಾದವುಗಳಿಗೆ ಯಾವುದೇ ರೀತಿಯ ಹಾನಿಯಾಗದಂತೆ ನೋಡಿಕೊಳ್ಳತಕ್ಕದ್ದು. ಹೀಗೆ ಸಂಭವಿಸುವ ನಷ್ಟಗಳೆಲ್ಲಕ್ಕೂ ಗುತ್ತಿಗೆದಾರರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.
21. ಟೆಂಡರ್/ಹರಾಜಿನ ಮೂಲಕ ಜಲಸಂಪನ್ಮೂಲಗಳ ವಿಲೇವಾರಿಯು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳಿಗೆ, ಷರತ್ತುಗಳಿಗೆ ಹಾಗೂ ನಿಬಂಧನೆಗಳಿಗೆ ಒಳಪಟ್ಟಿರುವುದಲ್ಲದೆ ಸರ್ಕಾರವು/ಮೀನುಗಾರಿಕೆ ಇಲಾಖೆಯು ಕಾಲ ಕಾಲಕ್ಕೆ ವಿಧಿಸಬಹುದಾದ ಮತ್ತು ಮಾರ್ಪಡಿಸಬಹುದಾದ ಹೆಚ್ಚುವರಿ ನಿಯಮಗಳಿಗೆ, ಷರತ್ತುಗಳಿಗೆ ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
22. ಯಾವುದೇ ನಿಯಮದ ಉಲ್ಲಂಘನೆಯಾದಲ್ಲಿ, ಗುತ್ತಿಗೆಗೆ ಪಡೆಯಲಾದ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ರದ್ದುಪಡಿಸುವ ಮತ್ತು ಮರು ವಿಲೇವಾರಿ ಮಾಡುವ ಅಧಿಕಾರವು ಮೀನುಗಾರಿಕೆ ಇಲಾಖೆಗೆ ಇರುತ್ತದೆ.
23. ಗುತ್ತಿಗೆಗೆ ಪಡೆಯಲಾದ ಜಲಸಂಪನ್ಮೂಲದಲ್ಲಿ ಸಂಶೋಧನೆ ಮತ್ತು ಇತರೆ ಸಂಬಂಧಿತ ಚಟುವಟಿಕೆಗಳನ್ನು ಕೈಗೊಳ್ಳುವ ಹಕ್ಕು ಮೀನುಗಾರಿಕೆ ಇಲಾಖೆಗೆ ಇರುತ್ತದೆ.
24. ಟೆಂಡರ್-ಕಂ-ಹರಾಜಿನ ಮುಖಾಂತರ ವಿಲೇಗೊಳಿಸಲಾದ ಮೀನು ಪಾಶುವಾರು ಹಕ್ಕಿನ ದೃಢೀಕರಣವು ಮೇಲಾಧಿಕಾರಿಗಳ ಅನುಮೋದನೆಗೆ ಒಳಪಟ್ಟಿರುತ್ತದೆ.
25. ಅರಣ್ಯ ಇಲಾಖೆ/ಕೆರೆ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆ ಇಲಾಖೆಯ ಮುಖಾಂತರ ಟೆಂಡರ್-ಕಂ-ಹರಾಜಿನಲ್ಲಿ ಪಡೆಯುವಾಗ ಅರಣ್ಯ ಇಲಾಖೆಯು/ಕೆರೆ ಅಭಿವೃದ್ಧಿ ಪ್ರಾಧಿಕಾರವು ವಿಧಿಸಬಹುದಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳನ್ನು ಟೆಂಡರ್‌ದಾರರು/ ಬಿಡ್‌ದಾರರು ಪಾಲಿಸತಕ್ಕದ್ದು.

ದಿನಾಂಕ:

ಯಶಸ್ವಿ ಟೆಂಡರ್‌ದಾರರು / ಬಿಡ್‌ದಾರರು
ಹೆಸರು ಮತ್ತು ಪೂರ್ಣ ವಿಳಾಸದೊಂದಿಗೆ

ಸಾಕ್ಷಿಗಳು:
(1)
(2)
(3)

(ವಿ.ಸೂ :- ರೂ.100-00ರ ಮೌಲ್ಯದ ಛಾಪಾ ಕಾಗದದಲ್ಲಿ ಟೆಂಡರ್‌ದಾರರು / ಬಿಡ್‌ದಾರರು ಬರೆದು ಕೊಡಬೇಕಾದ ಮುಚ್ಚಳಿಕೆ ಪತ್ರ)

23

**ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ/167/ಮೀಇಇ/2005, ದಿನಾಂಕ: 28-1-2006ರ**

**ಅನುಬಂಧ-9**

**(ಮೀನುಗಾರಿಕೆ ಇಲಾಖೆ)**

**ಸರ್ಕಾರಿ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್-ಕಂ-ಹರಾಜು ಮುಖಾಂತರ ಗುತ್ತಿಗೆಗೆ ಪಡೆದ ಯಶಸ್ವಿ ಟೆಂಡರ್‌ದಾರರು/ಬಿಡ್‌ದಾರರು ನಿಗದಿತ ಛಾಪಾ ಕಾಗದದಲ್ಲಿ ಬರೆದು ಕೊಡುವ ಮುಚ್ಚಳಿಕೆ ಪತ್ರ**

. . . . . . . ಜಿಲ್ಲೆಯ. . . . . . . . . ತಾಲ್ಲೂಕಿನ . . . . . ಗ್ರಾಮಕ್ಕೆ ಸೇರಿದ . . . . . ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಸನ್ ಎರಡು ಸಾವಿರದ . . . . . . . . . ನೇ ಇಸವಿ . . . . . . . . . . ಮಾಹೆಯ. . . . . ನೇ ದಿನಾಂಕದಲ್ಲಿ ನಡೆದ ಬಹಿರಂಗ ಟೆಂಡರ್/ಹರಾಜು ಮೂಲಕ ಅತೀ ಹೆಚ್ಚಿನ ಸವಾಲು ಮಾಡಿ ಗುತ್ತಿಗೆಗೆ ಪಡೆದು ಈ ದಿನ ಅಂದರೆ ದಿನಾಂಕ:. . . . . . . ರಂದು ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇ-2), . . . . . . . ತಾಲ್ಲೂಕು ಇವರಿಗೆ ನಾನು/ನಾವು ಖುದ್ದು ಬರೆದು ಕೊಟ್ಟು ಮುಚ್ಚಳಿಕೆ ಪತ್ರ.

ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ದಿನಾಂಕ: . . . . . . . . . ರಿಂದ . . . . . . . . . . . ದಿನಾಂಕದವರೆಗೆ ಗುತ್ತಿಗೆ ಮೂಲಕ ಪಡೆದಿರುತ್ತೇನೆ/ವೆ. ಇದರ ಬಿಡ್/ಟೆಂಡರ್ ಮೊತ್ತ ಅಂದರೆ ರೂ. . . . . . . . . ಗಳನ್ನು ಮತ್ತು ಇದಕ್ಕೆ ಸಂಬಂಧಿಸಿದ ಠೇವಣಿ ಮೊತ್ತ ರೂ. . . . . . . . ಗಳನ್ನು ಅಂದರೆ ಈ ರೀತಿಯಾಗಿ ಒಟ್ಟು ರೂ. . . . ಗಳನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇ-2), . . . . . . . ರವರಿಗೆ ಬ್ಯಾಂಕ್ ಹುಂಡಿ (. . . . . . ಬ್ಯಾಂಕಿನ ಡಿ.ಡಿ. ಸಂಖ್ಯೆ:------- ದಿನಾಂಕ:----------- ರ) ಮುಖಾಂತರ ಪಾವತಿ ಮಾಡಿ ರಶೀದಿ ಪಡೆದಿರುತ್ತೇನೆ/ವೆ.

ಈ ಜಲಸಂಪನ್ಮೂಲದಲ್ಲಿ ಮೀನು ಕೃಷಿ ಕೈಗೊಳ್ಳುವಾಗ ಗುತ್ತಿಗೆಗೆ ಪಡೆದಿರುವ ಪೂರ್ಣ ಅವಧಿಯಲ್ಲಿ ಟೆಂಡರ್ ಅರ್ಜಿಗೆ ಲಗತ್ತಿಸಿದ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಹಾಗೂ ಸರ್ಕಾರವು/ಮೀನುಗಾರಿಕೆ ಇಲಾಖೆಯು ಕಾಲಕಾಲಕ್ಕೆ ವಿಧಿಸಬಹುದಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸಲು ಬದ್ಧರಾಗಿರುತ್ತೇನೆ/ಬದ್ಧರಾಗಿರುತ್ತೇವೆ. ಒಂದು ವೇಳೆ ಸದರಿ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ನನಗೆ/ನಮಗೆ ನೀಡಿದ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಆದೇಶವನ್ನು ರದ್ದುಗೊಳಿಸುವ ಹಾಗೂ ಠೇವಣಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಕ್ರಮವು ನನಗೆ/ನಮಗೆ ಒಪ್ಪಿಗೆಯಾಗಿರುತ್ತದೆ.

ಈ ಗುತ್ತಿಗೆ ಅವಧಿಯ ನಂತರ ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕು ನನಗೆ/ನಮಗೆ ಇರುವುದಿಲ್ಲವೆಂಬುದು ಕೂಡ ನನಗೆ/ನಮಗೆ ಮನವರಿಕೆಯಾಗಿರುತ್ತದೆ.

ದಿನಾಂಕ:

ಯಶಸ್ವಿ ಟೆಂಡರ್‌ದಾರರು / ಬಿಡ್‌ದಾರರು
ಹೆಸರು ಮತ್ತು ಪೂರ್ಣ ವಿಳಾಸದೊಂದಿಗೆ

**ಸಾಕ್ಷಿಗಳು:**

(1)

(2)

(3)

**(ವಿ.ಸೂ :- ರೂ.100-00ರ ಮೌಲ್ಯದ ಛಾಪಾ ಕಾಗದದಲ್ಲಿ ಟೆಂಡರ್‌ದಾರರು / ಬಿಡ್‌ದಾರರು ಬರೆದು ಕೊಡಬೇಕಾದ ಮುಚ್ಚಳಿಕೆ ಪತ್ರ)**

**ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ/167/ಮೀಇಇ/2005, ದಿನಾಂಕ: 28-1-2006ರ**

**ಅನುಬಂಧ-10**

**ಕ್ರಮ ಸಂಖ್ಯೆ :** **ದಿನಾಂಕ:**

**ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ವಿಲೇ ಮಾಡುವ ಬಗ್ಗೆ**

**ಚೆಕ್‌ಲಿಸ್ಟ್**

| | | | |
|---|---|---|---|
| 1) | ಜಲಸಂಪನ್ಮೂಲದ ಹೆಸರು ಮತ್ತು ಪೂರ್ಣ ವಿಳಾಸ | : | |
| 2) | ಜಲಸಂಪನ್ಮೂಲದ ಜಲವಿಸ್ತೀರ್ಣ / ಅಚ್ಚುಕಟ್ಟು ಪ್ರದೇಶ (ಹೆಕ್ಟೇರ್‌ಗಳಲ್ಲಿ) ಮತ್ತು | : | |
| 3) | ಕಳೆದ 3/5 ವರ್ಷಗಳ ಅವಧಿಯಲ್ಲಿ ಸದರಿ ಜಲಸಂಪನ್ಮೂಲವನ್ನು ಗುತ್ತಿಗೆಗೆ ಪಡೆದಿದ್ದ ಗುತ್ತಿಗೆದಾರರ / ಟೆಂಡರ್‌ದಾರರ / ಬಿಡ್‌ದಾರರ ಹೆಸರು ಮತ್ತು ಪೂರ್ಣ ವಿಳಾಸ ಹಾಗೂ ವಿಲೇವಾರಿ ವಿಧಾನ (ಗುತ್ತಿಗೆಯ ಮುಖಾಂತರವೇ ಅಥವಾ ಟೆಂಡರ್-ಕಂ-ಹರಾಜು ಮುಖಾಂತರವೇ) | : | |

| | | |
|---|---|---|
| 4) | ಕಳೆದ 3/5 ವರ್ಷಗಳ ಅವಧಿಯಲ್ಲಿ ಸದರಿ ಜಲಸಂಪನ್ಮೂಲಕ್ಕೆ ನಿಗದಿಪಡಿಸಲಾಗಿದ್ದ ಗುತ್ತಿಗೆ ಮೊತ್ತ | : |
| 5) | ನಿಗದಿಪಡಿಸಿದ್ದ ಪೂರ್ಣ ಗುತ್ತಿಗೆ ಮೊತ್ತವನ್ನು ಸರ್ಕಾರಕ್ಕೆ ಪಾವತಿ ಮಾಡಲಾಗಿದೆಯೇ? | : |
| 6) | ಪ್ರಸಕ್ತ ಸಾಲಿಗೆ ಹೊಸದಾಗಿ ಗುತ್ತಿಗೆ ಕೋರುತ್ತಿರುವ ಗುತ್ತಿಗೆದಾರರ/ಟೆಂಡರ್‌ದಾರರು/ಬಿಡ್‌ದಾರರ ಹೆಸರು ಮತ್ತು ಪೂರ್ಣ ವಿಳಾಸ ಹಾಗೂ ಈಗಾಗಲೇ ಅವರು ಗುತ್ತಿಗೆಗೆ ಪಡೆದಿರುವ/ಅವರಿಗೆ ಗುತ್ತಿಗೆಗೆ ನೀಡಲು ಪ್ರಸ್ತಾಪಿಸಿರುವ ಜಲಸಂಪನ್ಮೂಲಗಳ ವಿವರಗಳು | : |
| 7) | ಆದ್ಯತೆಯ ಕ್ರಮಾಂಕ | : |
| 8) | ಮೀನುಗಾರಿಕೆ ನಿರ್ದೇಶಕರ ಅಧಿಕಾರ ವ್ಯಾಪ್ತಿಯಲ್ಲಿ ಗುತ್ತಿಗೆ ನೀಡಿರುವ ಅವಧಿ | : |
| 9) | ಪ್ರಸ್ತುತ ನಿಗದಿಪಡಿಸಲಾದ ಗುತ್ತಿಗೆ ಮೊತ್ತ | : |
| 10) | ಗುತ್ತಿಗೆಗೆ ಕೋರಲಾಗಿರುವ ಅವಧಿ (ಎಷ್ಟು ವರ್ಷಗಳಿಗೆ) | : |
| 11) | ಟೆಂಡರ್/ಹರಾಜು ನಡೆಸಿದ ದಿನಾಂಕ | : |
| 12) | ಟೆಂಡರ್/ಹರಾಜಿನಲ್ಲಿ ಭಾಗವಹಿಸಿದ ವ್ಯಕ್ತಿಗಳು/ಸಂಘ/ಸಂಸ್ಥೆಗಳ ವಿವರ | : |
| 13) | ಟೆಂಡರ್/ಹರಾಜುದಾರರಿಂದ ನಿಯಮಾನುಸಾರ ಠೇವಣಿ ಪಡೆಯಲಾಗಿದೆಯೇ? | : |
| 14) | ಗುತ್ತಿಗೆ/ಟೆಂಡರ್/ಹರಾಜು ಇಲಾಖಾ ನೀತಿ ನಿಯಮಗಳಿಗೆ ಅನುಗುಣವಾಗಿದೆಯೇ? | : |
| 15) | ಮೀನುಗಾರಿಕೆ ನಿರ್ದೇಶಕರ ಅಭಿಪ್ರಾಯ/ಶಿಫಾರಸ್ಸು | : |

**ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)**

------------- ತಾಲ್ಲೂಕು.

**(ವಿ.ಸೂ :- ಮೀನು ಪಾಶುವಾರು ಹಕ್ಕಿನ ವಿಲೇವಾರಿಗೆ ಸಂಬಂಧಿಸಿದ ಪ್ರಸ್ತಾವನೆಯೊಂದಿಗೆ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು ಪೂರ್ಣ ವಿವರಗಳೊಂದಿಗೆ ಸಲ್ಲಿಸಬೇಕಾದ ಚೆಕ್‌ಲಿಸ್ಟ್)**

ಪಿ.ಆರ್. 162

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ**

**ಸಂಖ್ಯೆ: ಸಿಆಸುಇ 53 ಎಸ್‌ಇಎನ್ 97, ಬೆಂಗಳೂರು, ದಿನಾಂಕ: 20ನೇ ಜನವರಿ 2006.**

**ತಿದ್ದೋಲೆ**

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 53 ಎಸ್‌ಇಎನ್ 97 ದಿನಾಂಕ: 14.09.2005ರಲ್ಲಿ ``ಓದಲಾಗಿದೆ'' ಭಾಗದ ಕ್ರಮಸಂಖ್ಯೆ 1ರಲ್ಲಿ ಪ್ರಸ್ತಾವನೆ ಭಾಗದ 9ನೇ ಸಾಲಿನಲ್ಲಿ ಮತ್ತು ಆದೇಶ ಭಾಗದ ಮೂರನೇ ಸಾಲಿನಲ್ಲಿ ``01.01.2001'' ಎಂಬ ದಿನಾಂಕದ ಬದಲಾಗಿ ``01.10.2001'' ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ

ಮತ್ತು ಅವರ ಹೆಸರಿನಲ್ಲಿ

**ಕೆ. ರಘುರಾಮ್ ಭಂಡಾರಿ**

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ,

(ಸೇವೆಗಳು-3).

ಪಿ.ಆರ್. 160